motion regarding the Government Order in the matter of affixing stamps on each petition to Government for reply?

Mr. SPEAKER (Sri V. Venkatappa).—It has been disallowed. The Government Order referred to therein was passed in the month of July. It is not a matter of recent occurence.

RESOLUTIONS.

Mr. SPEAKER (Sri V. Venkatappa).—Now Resolutions will be taken up. Janab Mohamed Valiulla.

Janab MOHAMED VALIULLA (Kolar—Muslim).—I had a talk with the Hon'ble Minister on the subject-matter of my resolution. The talk is not yet complete. It is going on. Hence I do not propose to move the resolution at this stage.

Sri L. SIDDAPPA (Shimoga District—General).—I do not want to move my resolution.

Sri H. M. MALLIKARJUNAPPA (Chikmagalur District—General).—Sir, I do not propose to move Resolution No. 3 tabled by me.

Sri. H. C. DASAPPA (Minister for Finance and Industies).—There was an idea that if the Hon'ble Speaker permits and if the House has no objection, by common consent on both the sides of the House, certain resolutions which the House considers are of paramount importance may be taken up first and thereafter the rest of the resolutions in the order of the ballot.

Mr. SPEAKER.—I do not think there is any provision permitting such a procedure.

Sri H. C. DASAPPA.—If it is not possible, they have to withdraw the resolutions so as to enable the particular resolutions being taken up.

Sri H. SIDDAVEERAPPA (Chitaldrug District—General).—Under Standing Order 71 of the Legislative Assembly Standing Orders, this House has ample powers to suspend the operation of any of the Standing Orders.

Mr. SPEAKER.—This is ballotted Order.

Resolution No. 4.—Trouble by Monkeys and Goats to Farmers.

* ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಸ್ವಾಮಿ, ನನ್ನ ನಿರ್ಣಯ ಈ ರೀತಿಯಾಗಿದೆ.—

"This Assembly is of the opinion that the Government should take immediate action to put an end to the trouble of monkeys and goats to the farmers."

ಈ ವಿಷಯ ಅಷ್ಟು ಲಾಘವವಾಗಿ ಪರಿಗಣಿಸತಕ್ಕ ದ್ದಲ್ಲ. ಕೆಲವರಿಗೆ ಇದು ಹಾಸ್ಯಾಸ್ಪದವಾಗಿ ಕಾಣ ಬಹುದು. ಆದರೆ ಈ ದೇಶದ ಈಗಿನ ಪರಿಸ್ಥಿತಿಯಲ್ಲಿ ಮತ್ತು ಆಹಾರದ ಸಮಸ್ಯೆ ಇಷ್ಟು ಬಿಗಡಾಯಿಸಿಕೊಂಡಿರುವ ಸನ್ನಿವೇಶದಲ್ಲಿ ಕೆಲವು ಮಾನ್ಯ ಸದಸ್ಯರು ಇದನ್ನು ಹಾಸ್ಯಾಸ್ಪದವಾಗಿ ಟೀಕೆ ಮಾಡುತ್ತಾರೆಂದು ತಿಳಿದಿದ್ದಾರೆ ಯೇ ಅಂಥಾ ಭಾರವನ್ನೆಲ್ಲಾ ನಾನು ನನ್ನ ತಲೆಯ ಮೇಲೆ ಹೊತ್ತುಕೊಂಡು ಈ ನಿರ್ಣಯವನ್ನು ಈಗ ಸಭೆಯ ಮುಂದಿಡಲು ನಾನು ನಿಂತಿದ್ದೇನೆ. ಈ ಕಪಿಗಳಿಂದ ರೈತರುಗಳಿಗೆ ಆಗುತ್ತಿರುವ ಕಿರುಕುಳ ಮತ್ತು ತೊಂದರೆಗಳು ಅಷ್ಟಿಷ್ಟೆಂದು ವರ್ಣಿಸುವುದಕ್ಕೇ ಸಾಧ್ಯವಿಲ್ಲ. ಇದು ಅಂಥಾ ವಿಷಯ. ಆದರೆ ಈ ಕೋತಿಗಳ ವಿಚಾರವಾಗಿ ನಮ್ಮ ಹಿಂದುಗಳಲ್ಲಿ ಒಂದು ಗೌರವ ಮನೋಭಾವನೆ ಹಿಂದಿನಿಂದಲೂ ಬೆಳೆದು ಕೊಂಡು ಬಂದಿರುವುದರಿಂದ ಇವುಗಳನ್ನು ಕೊಲ್ಲಲು ಅನೇಕರು ಹಿಂದೆಗೆಯುತ್ತಿದ್ದಾರೆ. ಈ ಒಂದು ಧರ್ಮಸಂಕಟಕ್ಕೆ ಸಿಕ್ಕಿ ಇವುಗಳ ಹಾವಳಿಯನ್ನು ತಪ್ಪಿಸಿಕೊಳ್ಳಲು ಇವುಗಳನ್ನು ಹಿಡಿದು ಬೇರೆ ಕಡೆಗೆ ಸಾಗಿಸತಕ್ಕ ಕಾರ್ಯ ಒಂದನ್ನೇ ಈಗ ಮಾಡುತ್ತಿದ್ದಾರೆ. ಕೆಲವರು ಈ ಕಪಿಗಳನ್ನು, ವಾನರರು, ಆಂಜನೇಯನ ಕುಲಕ್ಕೆ ಸೇರಿದವುಗಳು.....

ಅಧ್ಯಕ್ಷರು.—ಅದು ಎಲ್ಲರಿಗೂ ಗೊತ್ತಿರತಕ್ಕ ವಿಚಾರವೇ ಆಗಿದೆ. ಅವುಗಳನ್ನೆಲ್ಲಾ ತಾವು ಈಗ ಹೇಳ ಬೇಕಾಗಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಹಾಗೆ ಜನರು ಇವುಗಳನ್ನು ಗೌರವಿಸಬೇಕಾಗಿದ್ದುದು. ಈ ರೀತಿ ತೊಂದರೆಗಳನ್ನುಂಟುಮಾಡುವಾಗಲಲ್ಲ. ಅವು ಜನರ ಗೋಜಿಗೆ ಬಾರದೆ ವನಗಳಲ್ಲೇ ಇದ್ದುಕೊಂಡಿದ್ದರೆ ಹಾಗೆ ಗೌರವಿಸಬಹುದಾಗಿತ್ತು. ಅಷ್ಟೇ ಅಲ್ಲದೆ ಅವು ಆಂಜನೇಯನ ಕುಲಕ್ಕೆ ಸೇರಿದವುಗಳಾಗಿದ್ದರೆ ಆ ಆಂಜನೇಯನಂತೆ ಬ್ರಹ್ಮಚಾರಿಗಳಾಗಿದ್ದುಕೊಂಡು, ಸಂತಾನಾಭಿವೃದ್ಧಿ ಇಲ್ಲದೆ ಇದ್ದಿದ್ದರೆ ನಾವೂ ಇವುಗಳಿಗೆ ಕೊಂಚ ಗೌರವವನ್ನು ಕೊಡಬಹುದಾಗಿತ್ತು. ಆ ರೀತಿ ಇದ್ದಿದ್ದರೆ ಈ ತರಹದ ತೊಂದರೆಗಳಾಗಲೀ ಅಥವಾ ಕಷ್ಟನಷ್ಟಗಳಾಗಲೀ ಜನರಿಗೆ ಉಂಟಾಗುತ್ತಿರಲಿಲ್ಲ. ಆದರೆ ಈಗ ಇವು ಊರಿನೊಳಕ್ಕೆ ನುಗ್ಗಿ ಜನರಿಗೆ ನಾನಾ ರೀತಿಯಲ್ಲಿ ತೊಂದರೆಯನ್ನು ಕೊಡಲು ಪ್ರಾರಂಭಿಸಿವೆ.

ರಾಜಮಂತ್ರಪ್ರವೀಣ ಎಚ್. ಟಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ).—ಊರಿನಲ್ಲಿ ಅವುಗಳಂತೆ ಇರತಕ್ಕ ಕೆಲವು ಜನಗಳೂ ಇದ್ದಾರೆ. ಅಂಥವರನ್ನು ಹುಡುಕಿಕೊಂಡು ಅವು ಊರಿನೊಳಗೆ ಬರುತ್ತವೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ನಮ್ಮ ಮುಳುಬಾಗಿಲು ತಾಲ್ಲೂಕಿನಲ್ಲಿ ಮಲ್ಬರಿ ಪರ್ಪಸಸ್ ಕೋ-ಆಪರೇಟೀವ್ ಸೊಸೈಟಿಗಳವರು ಸರ್ಕಲ್‌ವಾರಾಗಿ ಒಂದು ತಃಖ್ತೆಯನ್ನು ತಯಾರಿಸಿದ್ದಾರೆ. ಅದರ ಪ್ರಕಾರ ಹೇಳುವುದಾದರೆ ಒಂದೊಂದು ಸರ್ಕಲಿನಲ್ಲಿಯೂ 200-300 ಕೋತಿಗಳು ಸೇರಿಕೊಂಡು ರೈತರ ಬೆಳೆ

ಯನ್ನು ನಾಶಮಾಡುತ್ತಿವೆ. ಆ ಒಂದು ತಾಲ್ಲೂಕಿನಲ್ಲೇ ಸುಮಾರು 15,000 ಕೋತಿಗಳು ಇರುತ್ತವೆಂದು ಗೊತ್ತಾಗಿದೆ. ಅಂದಮೇಲೆ ಅಲ್ಲಿರತಕ್ಕ ರೈತರ ಗತಿ ಏನಾಗಿರಬಹುದು! ಪೂರ್ವದಲ್ಲಿ ಒಂದು ಗಾದೆ ಹೇಳುತ್ತಿದ್ದರು. ಏನೆಂದರೆ—"ಮಂಗನನ್ನು ನಾಶಮಾಡಿದರೆ ಮನೆ ನಾಶವಾಗುತ್ತದೆ" ಎಂದು. ಆದರೆ ಈಗ ಅದು ತಲೆಕೆಳಗಾಗಿದೆ. ಈಗ ಮಂಗನನ್ನು ನಾಶಮಾಡದಿದ್ದರೆ ಮನೆ ನಾಶವಾಗತಕ್ಕ ಪರಿಸ್ಥಿತಿ ಒದಗಿದೆ. ಮಂಗಗಳು ತಾಪು ತೆನ್ನುವುದಕ್ಕಿಂತಲೂ ಹಾಳು ಮಾಡುವುದೇ ಹೆಚ್ಚಾಗಿರುತ್ತೆ. ರೈತನು ರಾಗಿ ಬಿತ್ತುವುದಕ್ಕಿಲ್ಲ, ಅದು ಇನ್ನೂ ಮೊಳಕೆಯಲ್ಲಿರುವಾಗಲೇ ಆ ಎಳೆಯ ಪೈರನ್ನೇ ಕಿತ್ತುಹಾಕಿ, ತಿಂದು, ಆ ಬೆಳೆಯನ್ನೆಲ್ಲಾ ನಾಶಮಾಡುತ್ತವೆ. ಹಾಗೂ ಒಂದುವೇಳೆ ಅದು, ಉಳಿದು, ಬಲಿತು ತೆನೆಯಾದ ಕೂಡಲೇ ಮತ್ತೆ ಅದನ್ನು ಬಗ್ಗಿಸಿ, ಮುರಿದು ಹಾಕಿ, ಆ ಎಳೆ ತೆನೆಯನ್ನೆಲ್ಲಾ ತಿಂದುಹಾಕಿ ಆಗಲೂ ಅದನ್ನು ಹಾಳುಮಾಡಿ ಬಿಡುತ್ತವೆ. ಈ ತೊಂದರೆಗಳನ್ನೆಲ್ಲಾ ನೋಡಿ ನೋಡಿ ಅನೇಕ ರೈತರು ಬೆಳೆ ಇಡುವುದನ್ನೇ ಕೈಬಿಟ್ಟಿದ್ದಾರೆ. ನಾನು ಅಲ್ಲಲ್ಲೇ ಹೋದಾಗ ರೈತರನ್ನು "ನೀವೇಕೆ, ಹಣ್ಣು—ತರಕಾರಿ, ಇತ್ಯಾದಿಗಳನ್ನು ಬೆಳೆಯಬಾರದು" ಎಂದು ಕೇಳಿದ್ದಕ್ಕೆ ಅವರು ಈ ಕೋತಿಗಳ ಹಾವಳಿಯನ್ನು ತಪ್ಪಿಸಲು ಸಾಧ್ಯವಿಲ್ಲವಾದ್ದರಿಂದ, ಆ ಬೆಳೆಯನ್ನೇ ನಿಲ್ಲಿಸಿಬಿಟ್ಟಿರುವುದಾಗಿ ಉತ್ತರ ಕೊಟ್ಟರು. ಇವು ಅಲ್ಲಲ್ಲೇ ಇರತಕ್ಕ ದೊಡ್ಡ ದೊಡ್ಡ ಮಾವಿನ ಮರ, ಆಲದ ಮರ ಇತ್ಯಾದಿ ಮರಗಳ ಮೇಲೆ ಆಶ್ರಯ ಮಾಡಿಕೊಂಡು ಅಲ್ಲಿರುವ ರೈತರಿಗೆ ನಾನಾ ರೀತಿಯಲ್ಲಿ ವಿನಾಶಕಾರಿಗಳಾಗಿ ಪರಿಣಮಿಸಿವೆ. ಸ್ವರಾಜ್ಯ ಬಂದ ಮೇಲಂತೂ ಈ ಕೋತಿಗಳು ಜನರಿಗೆ ಹೆದರುವುದೇ ಇಲ್ಲ. ಜನರ ಮೇಲೆ ಬೀಳುವುದಕ್ಕೆ ಬರುತ್ತಿವೆ.

ಹುಣಿಸೇಹಣ್ಣಿನ ಧಾರಣೆ ಏರುವುದಕ್ಕೂ ಕೂಡ ಈ ಕೋತಿಗಳೇ ಕಾರಣ. ಹುಣಿಸೇ ಮರದಲ್ಲಿ ಹೂ ಬಿಡುವುದಕ್ಕೆ ಪ್ರಾರಂಭವಾದ ಕೂಡಲೆ ಆ ಹೂವುಗಳನ್ನೆಲ್ಲಾ ಕಿತ್ತುಹಾಕಿ ಅಲ್ಪ ಸ್ವಲ್ಪ ಉಳಿದುಕೊಂಡು ಎಳೆಯ ಕಾಯಿಗಳಾದ್ದನ್ನೂ ಸಹ ಬಿಡದೆ ಕಿತ್ತು ತಿಂದುಹಾಕಿ ಬಿಡುತ್ತವೆ. ಸಾಧಾರಣವಾಗಿ ಕೋಲಾರ ಜಿಲ್ಲೆಯಲ್ಲಿ ಹುಣಿಸೆ ಫಸಲು ಹೆಚ್ಚಾಗಿದೆ. ಆದರೆ ಕೋತಿಗಳ ಹಾವಳಿಯಿಂದ ಆ ಬೆಳೆಯೆಲ್ಲಾ ನಾಶವಾದ್ದರಿಂದಲೇ ದಿನದಿನಕ್ಕೂ ಈ ಹುಣಿಸೆ ಹಣ್ಣಿನ ಧಾರಣೆ ಹೀಗೆ ಏರಲಾರಂಭಿಸಿತು. ಇದೇ ರೀತಿ ಇತ್ತೀಚೆಗೆ ಮಾವು, ತೆಂಗು, ಹಾಗೂ ಕಾಫಿ ಬೆಳೆಗೂ ಸಹ ಇವುಗಳಿಂದ ಹಾವಳಿಯಾಗುತ್ತಿದೆಯೆಂದು ಕೇಳುತ್ತಿದ್ದೇನೆ. ಇವುಗಳಿಂದ ಹಿಂಸೆ ಪಡತಕ್ಕ ಜನರಿಗೇ ಇದರ ಕಷ್ಟ ನುಖ ಏನೆಂಬುದು ಗೊತ್ತಿರುತ್ತದೆಯೇ ಹೊರತು, ಬಾಕಿಯವರಿಗೆ ಇದು ಗೊತ್ತಾಗುವುದು ಸ್ವಲ್ಪ ಕಷ್ಟ.

ಜನರು ತಮ್ಮ ಹಿತಕ್ಕಾಗಿ, ತಮ್ಮ ಕ್ಷೇಮಕ್ಕಾಗಿ, ತಮ್ಮ ನುಖಕ್ಕಾಗಿ ಅನೇಕ ಪ್ರಾಣಿಗಳನ್ನು ಹತಮಾಡುತ್ತಿದ್ದಾರೆ. ಈಗ ಎಲ್ಲರ ಮನೆಯಲ್ಲೂ ತಿಗಣೆ ಇರತಕ್ಕ ವಿಚಾರ ಗೊತ್ತಿರತಕ್ಕದ್ದೇ ಆಗಿದೆ. ಆದರೆ ಯಾರು ಆ ತಿಗಣೆಗಳನ್ನು ಕೊಲ್ಲದೆ ಈಗ ಪೂಜೆ ಮಾಡುತ್ತಿದ್ದಾರೆ? ಯಾರೂ ಹಾಗೆ ಮಾಡುತ್ತಿಲ್ಲವೆಂದು ನಾನು ಧೈರ್ಯವಾಗಿ ಹೇಳಬಲ್ಲೆ. ಅವುಗಳ ನಾಶಕ್ಕಾಗಿ ಇನ್ನು ಡಿ. ಡಿ. ಟಿ. ಇತ್ಯಾದಿಗಳನ್ನು ಪ್ರಯೋಗ ಮಾಡುತ್ತಾರೆ. ಹೀಗೆ ನಾನಾ ರೀತಿಯಲ್ಲಿ ನಾನಾ ಪ್ರಾಣಿಗಳನ್ನು ಜನರು ತಮ್ಮ ನುಖಕ್ಕಾಗಿ ಕೊಲ್ಲುತ್ತಿದ್ದಾರೆ. ಇದೇ ರೀತಿ ಈ ಕೋತಿಗಳನ್ನು ಕೂಡ ಕೊಂದು ಹಾಕಬಹುದೆಂದು ಕಾಂಗ್ರೆಸ್ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಬಹುದು. ಆದರೆ ಇಗ ಜನರು ನಾನಾ ರೀತಿಯಲ್ಲಿ ಅಪಪ್ರಚಾರ ಮಾಡಲು ಅವಕಾಶವಾಗಬಹುದು ಆಗ ಜನರು ಯಾವ ರೀತಿ ಮಾತನಾಡಲು ಪ್ರಾರಂಭಿಸಬಹುದೆಂದರೆ "ಮಳೆ ಏತಕಪ್ಪ ಹೋಯಿತು" ಎಂದರೆ ಕಾಂಗ್ರೆಸ್ ಸರ್ಕಾರದವರು ಕೋತಿಗಳನ್ನು ಕೊಂದುಹಾಕಲು ಆಜ್ಞೆಮಾಡಿಬಿಟ್ಟರು, ಅದರಿಂದ ಮಳೆ ನಂತುಹೋಯಿತು ಎಂದೂ, ಮತ್ತೆ ಕೆಲವರು ಏತಕ್ಕಪ್ಪಾ "ಕನ್ನಂಬಾಡಿ ಕೆರೆ ಬತ್ತಿತು" ಎಂದರೆ ಕಾಂಗ್ರೆಸ್ ಸರ್ಕಾರ ಕೋತಿಗಳನ್ನು ಕೊಂದು ಹಾಕಬಹುದೆಂದು ಹುಕುಂ ಮಾಡಿಬಿಟ್ಟಿತು, ಆದುದರಿಂದ ಕೆರೆ ಬತ್ತಿಹೋಯಿತು ಎಂದೂ, ಇನ್ನೂ ಕೆಲವರು ಏತಕಪ್ಪಾ "ರೂಪಾಯಿಗೊಂದು ಸೇರು ಅಕ್ಕಿ ಆದದ್ದು" ಎಂದರೆ ಅದಕ್ಕೂ ಇದೇ ಜವಾಬನ್ನು ಹೇಳುತ್ತ ಈ ಸರ್ಕಾರವನ್ನು ನಿಂದಿನಬಹುದು. ಆದಾಗ್ಯೂ ಇದನ್ನು ಅಷ್ಟು ಲಘುವಾಗಿ ನೋಡುವುದಕ್ಕಾಗುವುದಿಲ್ಲ. ಇವುಗಳಿಂದ ವರ್ಷಕ್ಕೆ ಶೇಕಡ 15–20 ರಷ್ಟು ಬೆಳೆ ನಾಶವಾಗುತ್ತಿದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಅದನ್ನು ತಪ್ಪಿಸಲು ನೀವೇನು ಹೇಳುತ್ತೀರಿ?

ಶ್ರೀ ಎಂ. ವಿ. ಕೃಷ್ಣಪ್ಪನವರು.—ಆಫ್ರಿಕ, ಅಂಡಮಾನ್ ಇತ್ಯಾದಿ ದೂರವಾಗಿರತಕ್ಕ ದ್ವೀಪಾಂತರಗಳಿಗೆ ಇವುಗಳನ್ನೆಲ್ಲಾ ಸಾಗಿಸುವುದು ಒಂದು ಮಾರ್ಗ. ಅಂಡಮಾನ್ ದ್ವೀಪದಲ್ಲಿರತಕ್ಕವರನ್ನೆಲ್ಲಾ ಇಲ್ಲಿಗೇ ಕರೆಸಿಕೊಂಡರೂ ಚಿಂತೆಯಿಲ್ಲ, ಆ ದ್ವೀಪವನ್ನೆಲ್ಲಾ ಈ ಕೋತಿಗಳಿಗಾಗಿಯೇ ಮೀಸಲಾಗಿಡುವುದು ಬಹಳ ಉತ್ತಮವಾದುದೆಂದು ಹೇಳುತ್ತೇನೆ.

ಕೋತಿಗಳ ಹಾವಳಿ ಜಾಸ್ತಿಯಾಗಿ ಹಳ್ಳಿಗಳ ಕಡೆ ಬಂಕೆ ಇದ್ದಹಾಗಿದೆ. ಮೊದಲು ಇವುಗಳನ್ನು ಹೊರಗೆ ಸಾಗಿಸಬೇಕು, ಇಲ್ಲದಿದ್ದರೆ ತಡೆಯುವುದು ಕಷ್ಟ ಎಂದು ಹೇಳುತ್ತಾರೆ. ಹಳ್ಳಿಗಳಲ್ಲಿ ಬೆಳೆ ಹಾಳುಮಾಡುತ್ತವೆ. ಅದೊಂದು ದೊಡ್ಡ ತೊಂದರೆ. ಇದರ ಪರಿಹಾರಕ್ಕೆ ನಾನೊಂದು ಸಲಹೆಯನ್ನು ಕೊಡುತ್ತೇನೆ. ಅದು ಹಾಸ್ಯಾಸ್ಪದವಾಗಿ ಕಾಣಬಹುದು. ಆದರೂ ಚಿಂತೆಯಿಲ್ಲ. ಚಿಕ್ಕ ವಯಸ್ಸಿನವನು ಏನೋ ಹೇಳುತ್ತಾನೆಂದು ಉದಾಸೀನ ಮಾಡಬಾರದು. ಬನವಣ್ಣನಿಗೆ ಬೀಜ ಒಡೆಯುತ್ತೇವೆ. ಅದೇ ರೀತಿಯಲ್ಲಿ ಗಂಡುಕಪಿಗಳಲ್ಲಿ ನಲಗ ಅಥವಾ ತಿಮ್ಮಣ್ಣ ಎಂದು ಹೇಳತಕ್ಕವು ಗಳಿಗೆ ಬೀಜ ಒಡೆದರೆ ಬೇಕಾದಷ್ಟು ಕಪಿಗಳ ಸಂಖ್ಯೆ ಕಡಮೆಯಾಗುತ್ತದೆ. ಕೊಲ್ಲುವುದಕ್ಕಿಂತ ಮತ್ತು ದೂರ ಸಾಗಿಸುವುದಕ್ಕಿಂತ ನನ್ನ ಸಲಹೆಯು ಸೂಕ್ತವಾಗಿ ಕಾಣುತ್ತದೆ. ಈ ವಿಚಾರ ಹಾಸ್ಯಾಸ್ಪದವಾಗಿ ಕಂಡರೂ ಕೂಡ ಇದು ಬಹು ದೊಡ್ಡ ನಮಸ್ಯೆಯಾಗಿದೆ. ಗಿಡ ಮರಗಳನ್ನೂ, ಹಣ್ಣು ಹಂಪಲುಗಳನ್ನೂ ಹಾಳುಮಾಡುತ್ತವೆ. ರೈತರು ಇವುಗಳ ಕಾಟವನ್ನು ತಡೆಯಲಾರದೆ ಗೋಳಿಡುತ್ತಿರುವುದರಿಂದ ಅವರ ಪ್ರತಿನಿಧಿಯಾಗಿರುವ ನಾನು ಅವರ ಕಷ್ಟವನ್ನು ತಿಳಿಸಿ ತಕ್ಕ ಪರಿಹಾರವನ್ನು ಕಲ್ಪಿಸಿ ಕೊಡಬೇಕಾಗಿದೆ.

ಆಮೇಲೆ ಮೇಕೆಗಳ ವಿಚಾರ. ಈಚೆಗೆ ಕೆಲವು ದಿವಸಗಳ ಹಿಂದೆ ಶ್ರೀ ಟಿ. ಮರಿಯಪ್ಪನವರು ವನ ಮಹೋತ್ಸವವನ್ನು ಪ್ರಾರಂಭಿಸಿದರು. ಆದರೆ ಹಾಕಿದ ಗಿಡಗಳನ್ನೆಲ್ಲಾ ಮೇಕೆಗಳು ಬಿಡುವ ಹಾಗಿಲ್ಲ. ಮೇಕೆಗಳಿರುವ ಗ್ರಾಮಗಳಲ್ಲಿ ಎಲ್ಲೇ ಗಿಡ ಹಾಕಿ ಅವು ಬೆಳೆಯಲು ಅವಕಾಶವಿಲ್ಲದಂತಾಗಿದೆ. ಗಿಡ ಚಿಗುರುವುದಕ್ಕೆ ಅವಕಾಶವಿಲ್ಲದಂತೆ ತಿಂದುಬಿಡುತ್ತವೆ. ಅವು ಅಷ್ಟು ಉಪಯೋಗಕರವಾಗಿಯೂ ಇಲ್ಲ. ಅದೇ ಕುರಿಗಳಾದರೆ ಸಮಾಜದಲ್ಲಿ ಮನುಷ್ಯನಿಗೆ ಅವಶ್ಯಕವಾಗಿ ಬೇಕಾದ

ಪ್ರಾಣಿಗಳಾಗಿವೆ. ಅವು ಆಹಾರವಾಗಿ ಉಪಯೋಗಿಸಲ್ಪಡುವುದಲ್ಲದೆ ಉಣ್ಣಿಯನ್ನು ಸಹ ಕೊಡುತ್ತವೆ. ಮೇಕೆಗಳಾದತೋ ಆಹಾರಕ್ಕಾಗಿ ಮಾತ್ರ ಉಪಯೋಗಿಸಲ್ಪಡುತ್ತಿರುವುದರಿಂದ ಅವುಗಳಿಗೆ ತೆರಿಗೆಯನ್ನು ಹೆಚ್ಚಿಸಿ ಅಥವಾ ಬೇರೆ ರೀತಿಯಾಗಿ ಅವುಗಳ ಸಂಖ್ಯೆಯನ್ನು ಕಡಮೆ ಮಾಡಬೇಕು. ಹಾಗೆ ಮಾಡುವುದಾದರೆ ಗಿಡಗಳನ್ನು ಚೆನ್ನಾಗಿ ಬೆಳೆಸಬಹುದು. ಹಳ್ಳಿಗಳಲ್ಲಿ ಅವು ಇರುವವರೆಗೆ ಮರಗಳನ್ನು ಬೆಳೆಸಲು ಸಾಧ್ಯವಿಲ್ಲ. ಆದ್ದರಿಂದ ಸರ್ಕಾರದವರು ಈ ಬಗ್ಗೆ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕು.

Mr. SPEAKER.—Resolution moved:—

"That this Assembly is of the opinion that the Government should take immediate action to put an end to the trouble of monkeys and goats to the farmers."

* ಮುಷೀರ್—ಉಲ್—ಮುಲ್ಕ್ ಜೆ. ಮಹಮದ್, ಇಮಾಂರವರು (ಚಿತ್ರದುರ್ಗ ಮತ್ತು ತುಮಕೂರು ಮುಸ್ಲಿಂ).—ಈ ನಿರ್ಣಯವನ್ನು ವಿರೋಧಿಸಬೇಕಾಗಿದೆ. ಕೋತಿಗಳ ಮತ್ತು ಮೇಕೆಗಳ ಹಾವಳಿ ಜಾಸ್ತಿಯಾಗಿದೆ, ಅದನ್ನು ನಿವಾರಣೆ ಮಾಡಬೇಕೆಂದು ಮಾನ್ಯ ಸೂಚಕರು ಹೇಳಿದರು. ತತ್ವ ದೃಷ್ಟಿಯಿಂದ ಹೇಳುವುದಾದರೆ ಪ್ರಪಂಚದಲ್ಲಿ ಮನುಷ್ಯನಿಗೆ ಜೀವಿಸುವುದಕ್ಕೆ ಎಷ್ಟು ಹಕ್ಕಿದೆಯೋ ಪ್ರಾಣಿಗಳಿಗೂ ಕೂಡ ಜೀವಿಸುವುದಕ್ಕೆ ಅಷ್ಟೇ ಹಕ್ಕಿದೆ.

ಶ್ರೀ ಎಚ್. ಸಿ. ದಾನಪ್ಪನವರು:—ಬಕ್ರಗಳಿಗೂ ಹಕ್ಕಿದೆ !!

ಜನಾಬ್ ಜೆ. ಮಹಮದ್ ಇಮಾಂರವರು.—ಶ್ರೀ ಎಂ. ವಿ. ಕೃಷ್ಣಪ್ಪನವರನ್ನು ಮತ್ತು ಅವರ ಜಾತಿಯವರನ್ನು ಮಾತ್ರವೇ ಅಲ್ಲದೆ ದೇವರು ಎಲ್ಲರನ್ನೂ ಸೃಷ್ಟಿ ಮಾಡಿದ್ದಾನೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಜಾತಿ ಎಂದರೇನು ?

ಜನಾಬ್ ಜೆ. ಮಹಮದ್ ಇಮಾಂರವರು.—ಭೂಮಿಯನ್ನು ಸೃಷ್ಟಿಮಾಡುವಾಗ ಮನುಷ್ಯ, ಪ್ರಾಣಿ, ಗಿಡ ಮರ ಮುಂತಾದ್ದನ್ನೆಲ್ಲಾ ದೇವರು ಸೃಷ್ಟಿಮಾಡಿ ಸಾಕುತ್ತಿರುವುದರಿಂದ ಎಲ್ಲರಿಗೂ ಭೂಮಿಯ ಮೇಲೆ ಜೀವಿಸುವುದಕ್ಕೆ ಹಕ್ಕಿದೆ. ಎಲ್ಲಾ ಪ್ರಾಣಿಗಳಿಗಿಂತಲೂ ನಾವು ಬುದ್ಧಿವಂತರೂ, ಯುಕ್ತಿವಂತರೂ ಆಗಿರುವುದರಿಂದ ಭೂತದಯೆ ಇರಬೇಕು. ಸ್ವಾರ್ಥಕ್ಕಾಗಿ ಪ್ರಾಣಿಗಳನ್ನು ನಾಶಮಾಡುವುದು ಸರಿಯೆ ?

Sri H. K. VEERANNA GOWDA (Mandya District—General).—May I interrupt and ask whether the Hon'ble Member is aware that every Municipality will pay eight annas to a person who kills a cobra ?

ಜನಾಬ್ ಜೆ. ಮಹಮದ್ ಇಮಾಂರವರು.—ಅದೂ ಮನುಷ್ಯರೇ ಮಾಡಿದ್ದು. ನಾಗರಹಾವಿಗೆ ಪ್ರಾಣವಿಲ್ಲವೆ ? ಮೊದಲನೆಯದು ಈ ನಿರ್ಣಯದ ಪ್ರಕಾರ ಪ್ರಾಣಿಗಳನ್ನು ವಧೆ ಮಾಡಬೇಕೆನ್ನುವುದು ತತ್ವಕ್ಕೆ ವಿರೋಧ. ಮಾನ್ಯ ಮಿತ್ರರು ಹೇಳುವ ಸಲಹೆಯು ಜಾರಿಗೆ ಬರಲು ನುಲಭಸಾಧ್ಯವಲ್ಲ. ಎಲ್ಲಾ ಕೋತಿಗಳನ್ನೂ ತಂದು ಒಂದು ಕಡೆ ಕೂಡಿ ಇಂಗ್ಲೆಂಡಿಗೆ ಕಳಿಸಿ ಅಥವಾ ಸಮುದ್ರದಲ್ಲಿ ಹಾಕಿ ಎಂದು ಹೇಳುವುದು ಸರಿಯಿಲ್ಲ.

ಅಧ್ಯಕ್ಷರು.—ಅಂಡಮಾನ್ಸಿಗೆ ಕಳುಹಿಸಬೇಕು ಎಂಬುದು ಸೂಚಕರ ಸಲಹೆ.

ಜನಾಬ್ ಜೆ. ಮಹಮದ್ ಇಮಾಂರವರು.—ಹೌದು, ಸ್ವಾರ್ಥವೊಂದೇ ಇದರಲ್ಲಿರುವುದು. ನಾವು ಮಾಡಬೇಕಾದ್ದು ಹೆಚ್ಚು ಕಿರುಕುಳ ಕೊಡದಂತೆ ನೋಡಿಕೊಳ್ಳತಕ್ಕದ್ದು. ಕಪಿಗಳು ಪಟ್ಟಣದಲ್ಲಿದ್ದರೂ ಅಥವಾ ಬೆಂಗಳೂರು ಸಿಟಿಯಲ್ಲಿದ್ದರೂ ಹಳ್ಳಿಗಳಿಗೆ ಹೋಗಿ ಹಾಳು ಮಾಡಬಹುದು. ಸಾಲುಮರದಲ್ಲಿರುವ ಅಲದ ಹಣ್ಣುಗಳನ್ನು ತಿನ್ನುವುದಕ್ಕೇನು ಅಭ್ಯಂತರ ? ಕಾಡುಗಳಲ್ಲಿ ಬೇರೆ ಹಣ್ಣುಗಳಿವೆ. ಅದನ್ನು ತಿಂದು ಜೀವನ ಮಾಡುತ್ತವೆ. ಹಳ್ಳಿಗಳಿಗೆ ಬಾರದ ಹಾಗೆ ನಾವು ಸರಿಯಾದ ಏರ್ಪಾಡು ಮಾಡಬೇಕು. ಫಸಲನ ನುತ್ತಲೂ ಬೇಲಿ ಹಾಕಿ ಕಾವಲಿಡಬೇಕು.

ಶ್ರೀ ಕೆ. ಟಿ. ಭಾಷ್ಯಂರವರು.—ಹಾಗಾದರೆ Cattle Trespass Act ಬೇಕಾಗಿಲ್ಲ !

ಜನಾಬ್ ಜೆ. ಮಹಮದ್ ಇಮಾಂರವರು.—ಕಾವಲಿಡಿ; ಓಡಿಸಿ. ಅದು ಬಿಟ್ಟು ಇಂಗ್ಲೆಂಡಿಗೆ ಕಳಿಸಿ, ಅಂಡಮಾನ್ಸಿಗೆ ಕಳಿಸಿ, ಅಥವಾ ಹೊಡೆದುಹಾಕಿ ಎಂದು ಹೇಳುವುದು ಸೂಕ್ತವಲ್ಲ. It affects many Hindu sentiments. ಪೂರ್ವದಿಂದಲೂ ಕೋತಿಗಳಿಗೆ ಗೌರವವಿದೆ. ಕೆಲವುಕಡೆ ಹೊಡೆದುಹಾಕಿ ಎಂದು ಹೇಳಿದರೂ ಹಾಗೆ ಮಾಡುವುದಿಲ್ಲ. ಕರಡಿ ವಿಚಾರದಲ್ಲಿ ಕೂಡ ಎಷ್ಟೋ ಗೌರವವಿನೆಯೆಂಬುದು ಶ್ಯಮಂತಕೋಪಾಖ್ಯಾನದಿಂದ ಕಂಡುಬರುತ್ತದೆ. ಸರ್ಕಾರದವರು ಏನು ಬೇಕಾದರೂ ಮಾಡಿ ಎಂದು ಹೇಳಿದರೂ ಬಹುಶಃ ಜನರು ಒಪ್ಪಲಾರರು. ಯಾರಾದರೂ ಹಾಗೆ ಒಂದೆರಡು ಕಡೆ ಮಾಡಿದರೆ ಪ್ರತಿಭಟನೆ ಬರುತ್ತದೆ. ಇಷ್ಟೇ ಅಲ್ಲದೆ ಹಳ್ಳಿಗಳಲ್ಲಿ ಕೋತಿ ಹೊಡೆದುಹಾಕಿದರೆ ಹಳ್ಳಿಯವರು ಬಂದು ಗಲಾಟೆ ಮಾಡುತ್ತಾರೆ. ಆದ್ದರಿಂದ ಸರ್ಕಾರದವರು ಮಾಡಬೇಕಾದ್ದೇನೆಂದರೆ ಹಾವಳಿ ಎಲ್ಲೆಲ್ಲಿದೆಯೋ ಅಲ್ಲಿ ಸಾಧ್ಯವಾದಷ್ಟು ಕಾವಲಿಟ್ಟು ನೋಡಿಕೊಳ್ಳುವಂತೆ ಮಾಡಬೇಕು.

ಆಮೇಲೆ ಮೇಕೆಗಳಿಗೆ ವಕ್ರ ಬಂದಿದೆ. ಮಾನ್ಯ ಮಿತ್ರರು ಈ ವಿಚಾರವನ್ನು ಸೂಚಿಸಿದವರು ಮಾಂಸಾಹಾರಿಗಳೋ, ಅಲ್ಲವೋ ಗೊತ್ತಿಲ್ಲ, ಈಚೆಗೆ ನಮ್ಮ ಕಡೆ ಪ್ರತಿಯೊಂದು ಮೇಕೆಗೂ 5 ರೂಪಾಯಿ ಸುಂಕ ಹಾಕಿದ್ದಾರೆಂದು ಹೇಳುತ್ತಿದ್ದಾರೆ. ಅದಕ್ಕೆ ಸರ್ಕಾರಿ ಹುಕುಂ ಆಗಿದೆಯೋ ಇಲ್ಲವೋ ತಿಳಿಯದು. ಆದರೆ ಎಲ್ಲಾ ಕಡೆಯೂ ಆ ಸಮಾಚಾರ ಹರಡಿದೆ. ಆದ್ದರಿಂದ ಮೇಕೆಗಳನ್ನು ಮಾರುವುದಕ್ಕೆ ಪುರುಮಾಡಿದ್ದಾರೆ. ಮೊದಲು 20 ರೂಪಾಯಿ ಬೆಲೆ ಇದ್ದುದು ಈಗ 5 ರೂಪಾಯಿ ಕಡಿಮೆಯಾಗಿದೆ. ಈಚೆಗೆ ಮೇಕೆಗಳನ್ನು ಕೊಲ್ಲುವುದಕ್ಕೂ ಪ್ರಾರಂಭಿಸಿದ್ದಾರೆ.

ಶ್ರೀ ಟಿ. ಸುಬ್ರಹ್ಮಣ್ಯರವರು (ತುಮಕೂರು ಜಿಲ್ಲೆ).—ಹುಕುಂ ಆಗಿದ್ದರೆ ಪರವಾಗಿಲ್ಲ.

ಜನಾಬ್ ಜೆ. ಮಹಮದ್ ಇಮಾಂರವರು.—ತುಮಕೂರು, ಮೈಸೂರು ಮುಂತಾದ ಕಡೆ ಸರ್ಕಾರಿ ಆಜ್ಞೆಯಾಗಿದೆ ಎಂದು ಹೇಳುತ್ತಿದ್ದಾರೆ.

ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ನಚಿವರು).—ಇಲ್ಲ, ಆರೀತಿ ಏನೂ ಆಗಿಲ್ಲ.

ಜನಾಬ್ ಜೆ. ಮಹಮದ್ ಇಮಾಂರವರು.—ಹಾಗಾದರೆ ಯಾರೋ ಆ ವದಂತಿ ಹಬ್ಬಿಸಿದ್ದಾರೆ.

ಒಂದೊಂದು ಮೇಕೆಗೆ ಐದು ರೂಪಾಯಿನಂತೆ ತೆರಿಗೆಯನ್ನು ಹಾಕಿದ್ದಾರೆಂಬ ವದಂತಿ ನಮ್ಮ ಕಡೆಯಲ್ಲೂ ಹಬ್ಬಿ ಅನೇಕರು ತಮ್ಮಲ್ಲಿರುವ ಮೇಕೆಗಳನ್ನು ಮಾರಿಬಿಟ್ಟರು ಮತ್ತು ಅನೇಕರು ಮಾರುತ್ತಿದ್ದಾರೆ.

ಶ್ರೀ ಟಿ. ಮರಿಯಪ್ಪನವರು.—ಹಾಗೇನೂ ಸರ್ಕಾರದವರು ಹಾಕಿಲ್ಲ.

ಜನಾಬ್ ಜೆ. ಮಹಮದ್ ಇಮಾಂರವರು.—ಹಾಗಿದ್ದರೆ ಸರಿ, ಸಂತೋಷ. ಒಂದುವೇಳೆ ಹಾಗೇನಾದರೂ ಹಾಕಿದರೆ ಯಾರೂ ಮೇಕೆಗಳನ್ನು ಸಾಕುವುದೇ ಇಲ್ಲ. ಸಾಮಾನ್ಯವಾಗಿ ಕಾವಲಿಲ್ಲದೆ ಯಾರೂ ಮೇಕೆಗಳನ್ನು ಹೊರಗೆ ಮೇಯುವುದಕ್ಕೆ ಬಿಡುವುದಿಲ್ಲ. ಒಂದು ವೇಳೆ ಯಾರಾದರೂ ಹಾಗೆ ಬಿಟ್ಟು ಮೇಯಿಸಿದರೆ ಅಂಥವರಮೇಲೆ ಕ್ರಮ ತೆಗೆದುಕೊಳ್ಳಬಹುದು.

(Sri A. Bheemappa Naik moved for closure)

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ಸ್ವಾಮಿ, ಶ್ರೀ ಕೃಷ್ಣಪ್ಪನವರು ತಂದಿರತಕ್ಕ ಈ ನಿರ್ಣಯವನ್ನು ನಾನು ಅನುಮೋದಿಸುತ್ತೇನೆ. ನಮ್ಮ ಹಿಂದೂ ಜನರಲ್ಲಿ ಮಂಗರಾಮನ ಭಂಟನೆಂದು ಒಂದು ನಂಬಿಕೆಯಿದೆ. ಅದರಿಂದ ಮಂಗಗಳನ್ನು ಯಾರೂ ಕೊಲ್ಲುವುದಿಲ್ಲ. ಒಬ್ಬ ಒಳ್ಳೆಯ ಮನುಷ್ಯನಿಗೆ ಕೆಟ್ಟ ಭಂಟನಿದ್ದು ಅವನು ತಪ್ಪು ಮಾಡಿದರೆ ಅವನನ್ನು ಶಿಕ್ಷಿಸಬಾರದೆ? ಹಾಗೆಯೇ ರಾಮನ ಭಂಟ ತಪ್ಪು ಮಾಡಿದರೆ ಏಕೆ ಶಿಕ್ಷಿಸಬಾರದು? ನೇಣು ಹಾಕಬಾರದೇ? ಮಂಗಗಳು ತೋಟಗಳಿಗೆ ನುಗ್ಗಿ ಸಾವಿರಾರು ತೆಂಗಿನಕಾಯಿಗಳನ್ನು ಹಾಳು ಮಾಡುತ್ತವೆ. ಅವು ಕುಡಿಯುವುದೂ ಇಲ್ಲ, ತಿನ್ನುವುದಕ್ಕಿಂತ ಹಾಳುಮಾಡುವುದೇ ಹೆಚ್ಚು. ಇದನ್ನು ನೋಡಿದರೆ. ಇದಕ್ಕಿಂತ ನೀಚ ಪ್ರಾಣಿ ಬೇರಾವುದೂ ಇಲ್ಲವೆನಿಸುತ್ತದೆ. ಮಂಗಗಳನ್ನು ಕೊಲ್ಲಬಾರದೆಂಬುದು ಒಂದು ಮಾನಸಿಕವಾದ ಕಲ್ಪನೆ. ನಿಜವಾಗಿಯೂ ಮಂಗಗಳು ರಾಮನ ಭಂಟರಾಗಿದ್ದರೆ ಹನುಮಂತ ನಿದ್ದಹಾಗೆ ಏಕೆ ಇರಬಾರದಾಗಿತ್ತು? ಏಕೆ ಜನರಿಗೆ ತೊಂದರೆ ಕೊಡಬೇಕಾಗಿತ್ತು?

ಇವುಗಳನ್ನು ಅಂಡಮಾನ್ ದ್ವೀಪಕ್ಕೆ ಸಾಗಿಸಬೇಕೆಂದು ಕೆಲವರು ಹೇಳುತ್ತಾರೆ. ಇದು ಸಾಧ್ಯವಲ್ಲದ ಮಾತು. ನಮಗೆ ಈಗ ಸಾಮಾನುಗಳನ್ನೂ, ಆಹಾರ ಪದಾರ್ಥಗಳನ್ನೂ ಒಂದುಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವುದಕ್ಕೇ ಸಾಕಾದಷ್ಟು ವ್ಯಾಗನ್ನುಗಳಿಲ್ಲದೆ ತೊಂದರೆಯಾಗಿರುವಾಗ ಮಂಗಗಳನ್ನೆಲ್ಲಾ ಸಾಗಿಸುವುದಕ್ಕೆ ಎಲ್ಲಿಂದ ತರಬೇಕು? ಹೀಗೆ ಸಾಗಿಸುತ್ತೇವೆಂದರೆ ಇಂಡಿಯಾ ಸರ್ಕಾರದವರೇನಾದರೂ ಸಹಾಯಕೊಡುತ್ತಾರೆಯೆ! ಇಲ್ಲ. ನಮ್ಮ ಮಂತ್ರಿಗಳು ಹೇಳುತ್ತಾರೆ, ವಾಲಿಯನ್ನು ರಾಮನೇ ಕೊಲ್ಲಲಿಲ್ಲವೇ ಎಂದು. ಹೀಗೆ ಕೆಟ್ಟವರನ್ನು ಕೊಂದುಹಾಕುವುದನ್ನು ನಾವೇ ನೋಡುತ್ತಿದ್ದೇವೆ.

ಶ್ರೀ ಬಿ. ಎಂ. ಶಾಮಣ್ಣಗೌಡರು (ಬೆಂಗಳೂರು ಸಿವಿಲ್ ಸ್ವೇಷ್ಟ ಪ್ರದೇಶ).—ವಾಲಿ ಕೆಟ್ಟಮನುಷ್ಯನೇನೂ ಅಲ್ಲ.

ಅಧ್ಯಕ್ಷರು.—ವಾಲಿ ಮಂಗನೆಂದು ಅವರು ಹೇಳುವುದು.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಯಾರ ಮನೆಯಲ್ಲಾದರೂ ಕಾಯಿಲೆಯಾದರೆ ಮಂಗನನ್ನು ಕೊಂದದ್ದರಿಂದ ಕಾಯಿಲೆ ಬಂತೆಂದು ಹೇಳುತ್ತಾರೆ. ಇದನ್ನೆಲ್ಲಾ ನೋಡಿದರೆ ಈ ಮಂಗಗಳು ರಾಮಾಯಣ ಕಾಲದ ಮಂಗಗಳ ವಂಶಕ್ಕೆ ಸೇರಿದವೇ ಅಥವಾ ಅಲ್ಲವೆ ಎಂಬುದನ್ನು ಕಂಡುಹಿಡಿದು ಜನರಲ್ಲಿರುವ ಈ ಮಾನಸಿಕವಾದ ಒಂದು ನಂಬಿಕೆಯಲ್ಲಿ ಬದಲಾವಣೆಯನ್ನಾದರೂ ಮಾಡುವುದಾದರೆ ಸರ್ಕಾರದವರು ಇನ್ನೇನೂ ಮಾಡಬೇಕಾಗುವುದಿಲ್ಲ. ಒಟ್ಟನಲ್ಲಿ ಈ ಮಂಗಗಳನ್ನು ಕೊಲ್ಲಲು ಯಾರೂ ಹಿಂಜರಿಯಬಾರದು.

ಇನ್ನು ಮೇಕೆಗಳ ವಿಷಯ. ಯಾವುದಾದರೂ ಒಂದು ರೀತಿಯಲ್ಲಿ ಮೇಕೆಗಳಿಂದ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಅವುಗಳನ್ನೆಲ್ಲಾ ಕೊಂದುಹಾಕಬೇಕೆಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಮೇಕೆಗಳು ದೇಶದ ಪಶು ಸಂಪತ್ತು. ಇದು ನಾಶವಾಗದಂತೆ ನೋಡಿಕೊಳ್ಳುವುದು ಸರ್ಕಾರದ ಜವಾಬ್ದಾರಿ.

(Many Hon'ble Members got up to speak)

Sri T. SUBRAMANYA (Tumkur District—General).—Sir, if this resolution is pressed to a decision, many of us may have to speak. Only if it is not pressed and we are not likely to take any decision on this point, I feel that we have talked it out and also that the Hon'ble Mover's purpose has been served.

Mr. SPEAKER.—It is left to the Mover to press it or not.

Sri T. SUBRAMANYA.—Then the discussion may not be closed, Sir, even though there is a closure motion.

Mr. SPEAKER.—A closure motion may be moved. But if the Chair thinks that enough of discussion has not taken place, it can allow further discussion.

Sri A. BHEEMAPPA NAIK (Chitaldrug District—General).—Sir, I only submitted my closure motion for the consideration of the Chair.

Sri T. SUBRAMANYA.—Sir, I would like to submit to the Chair that Hon'ble Member Sri A. Bheemappa Naik should not interfere at every stage.

Sri A. BHEEMAPPA NAIK.—I have a right to interfere and move for a closure motion.

Sri T. SUBRAMANYA.—Sir, he has no right to interfere. . . . . .

Sri A. BHEEMAPPA NAIK.—Even for moving a closure motion!

Sri T. SUBRAMANYA.—I am on my legs, Sir, and the Hon'ble Member should not interfere.

Sri A. BHEEMAPPA NAIK.—The Hon'ble Member need not dictate manners to me. Let him learn first.

Sri T. SUBRAMANYA.—We will be gaining nothing by exchanging mutual compliments. I have been submitting to the Chair that if this question is to be debated upon and a decision arrived at, many of us may wish to speak. If on

the other hand, the motion was only meant to ventiliate the mover's views, his purpose has been served. Otherwise all of us should have a chance to speak. I therefore submit that Sri A. Bheemappa Naik should not create trouble in the middle.

Sri M. MADIAH (Mysore District—Depressed Class).—Sir, I rise to a point of order with regard to personal references. Any speech made on the floor of the House should be relevant to the subject before the House. In the course of discussion, no personal remarks may be made by one member on another. I request the Chair to give a ruling on the subject.

Mr. SPEAKER.—There is no need for a ruling.

*ಶ್ರೀ ಬಿ. ಚೆನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಸ್ಪಾಮಿ, ನನ್ನ ಸ್ನೇಹಿತರಾದ ಶ್ರೀ ಕೃಷ್ಣಪ್ಪನವರು ಸಭೆಯಮುಂದಿಟ್ಟಿರುವ ಈ ನಿರ್ಣಯವನ್ನು ನಂತೋಷದಿಂದ ಸ್ವಾಗತಿಸುತ್ತೇನೆ. ಇದೇ ರೀತಿಯ ನಿರ್ಣಯವನ್ನು 1948ನೆಯ ಇಸವಿಯಲ್ಲಿ ಪ್ರಜಾ ಪ್ರತಿನಿಧಿ ಸಭೆಯಮುಂದೆ ನಮ್ಮ ಪಕ್ಷದವರು ಮಂಡಿಸಿದಾಗ ಶ್ರೀ ಕೃಷ್ಣಪ್ಪನವರು ವಿರೋಧಿಸಿದರು. ಕೋತಿಗಳನ್ನು ನಾಶಮಾಡಬೇಕೆಂದು ನಾವು ಹೇಳಿದಾಗ ಆದು ಹಾಸ್ಯಾಸ್ಪದವಾದ ವಿಚಾರವೆಂದು ಅವರು ಭಾವಿಸಿದರು. ಆದರೆ ಈ ದಿವಸ ಅವರೇ ಈ ನಿರ್ಣಯವನ್ನು ತಂದು ಹಳ್ಳಿಗಳಲ್ಲಿ ಕೋತಿಗಳು ರೈತರಿಗೆ ವಿಪರೀತ ನಷ್ಟಮಾಡುತ್ತಿವೆ. ಅವುಗಳನ್ನು ಹಾಳು ಮಾಡಬೇಕೆಂದು ಹೇಳಿದ್ದಾರೆ, ಅವರಿಗೆ ಈ ಬುದ್ಧಿ ಬಂದುದಕ್ಕಾಗಿ ನಾವು ಸಂತೋಷಪಡುತ್ತೇವೆ. ಕೋತಿಗಳನ್ನು ಕೊಲ್ಲಬೇಕೆಂದು ಏನಾದರೂ ಸರ್ಕಾರದವರು ಮಾಡಿದರೆ ಅದನ್ನೇ ದೊಡ್ಡದಾಗಿ ಮಾಡಿಕೊಂಡು ಎದುರು ಪಕ್ಷದವರು ಸರ್ಕಾರದಮೇಲೆ ಆಪಾದನೆಮಾಡಿ ಟೀಕೆಮಾಡುತ್ತಾರೆಂದು ಶ್ರೀ ಕೃಷ್ಣಪ್ಪನವರು ಹೇಳಿದರು.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಅಪಪ್ರಚಾರಕರು ಎಂದು ನಾನು ಹೇಳಿದೆ, ತಾವೂ ಆ ಗುಂಪಿಗೆ ಸೇರಿದ್ದರೆ ಹಾಗೆ ತಿಳಿದುಕೊಳ್ಳಬಹುದು (ನಗು!)

ಶ್ರೀ ಬಿ. ಚೆನ್ನಬೈರೇಗೌಡರು.—ಪಂಜಾಬ್ ಸರ್ಕಾರದಲ್ಲಿ ಒಂದೊಂದು ಕೋತಿ ಕೊಂದವರಿಗೆ ಎರಡು ರೂಪಾಯಿ ಮೂರು ರೂಪಾಯಿ ಬಹುಮಾನ ಕೊಡುತ್ತೇವೆಂದು ಪ್ರಕಟನೆಕೂಡ ಮಾಡಿ ಪ್ರೋತ್ಸಾಹ ಕೊಡುತ್ತಾರೆ. ಜನಗಳಿಗೆ ಕೋತಿಗಳನ್ನು ನೀವೇ ಕೊಲ್ಲಿ ಎಂದು ಇಲ್ಲಿ ಸರ್ಕಾರದವರು ಹೇಳಬಹುದು. ಆದರೆ ರಾಮನ ಭಂಟನೆಂದು ಜನರಲ್ಲಿ ನಂಬಿಕೆ ಇರುವುದರಿಂದ ಜನಗಳ್ಯಾರೂ ಕೊಲ್ಲುವುದಿಲ್ಲ. ಆದುದರಿಂದ ಸರ್ಕಾರದವರೇ ಇದಕ್ಕೆ ಏನಾದರೂ ಏರ್ಪಾಡುಮಾಡಬೇಕು. ಕೋತಿಗಳನ್ನು ಅಂಡಮಾನ್ ದ್ವೀಪಕ್ಕೆ ಕಳುಹಿಸಬೇಕೆಂದು ನಾನೇನೂ ಹೇಳುವುದಿಲ್ಲ. ಇವುಗಳನ್ನು ಕೊಂದುಹಾಕಿಸಿ ಮೂರು ಅಥವಾ ಆರು ತಿಂಗಳೊಳಗೆ ಎಲ್ಲವನ್ನೂ ನಾಶಮಾಡಬೇಕು.

ಮೇಕೆಗಳ ವಿಷಯವನ್ನು ಈ ನಿರ್ಣಯದಲ್ಲಿ ಏಕೆ ಸೇರಿಸಿದರೋ ಗೊತ್ತಿಲ್ಲ. ಇದನ್ನು ತೆಗೆದುಹಾಕಬೇಕು. ಮೇಕೆಗಳನ್ನು ನಾಶಮಾಡಬಾರದು. ಪ್ರಪಂಚ ಹುಟ್ಟಿದಾಗಿನಿಂದಲೂ ಮೇಕೆಗಳಿದ್ದೇ ಇವೆ. ಜನರಿಗೆ ಇವುಗಳಿಂದ ಅಷ್ಟೇನೂ ತೊಂದರೆಯಿಲ್ಲ. ತೋಪುಗಳ ಅಭಿವೃದ್ಧಿಗೆ ತೊಂದರೆಯೆಂದು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಮಂಗಗಳಿಂದ ವ್ಯಕ್ತಿ ಸಂಪತ್ತಿಗೆ ತೊಂದರೆಯಾಗಬಹುದು. ಕುರಿಗಳಿಂದ ಎಷ್ಟು ಪ್ರಯೋಜನವಿದೆಯೋ ಮೇಕೆಗಳಿಂದಲೂ ಅಷ್ಟು ಪ್ರಯೋಜನವಿದೆ. ಇವುಗಳಿಂದ ಜನರಿಗೆ ಹಾಲು, ಮಾಂಸ, ಚರ್ಮ ಮುಂತಾದವು ದೊರೆಯುತ್ತವೆ. ಅಲ್ಲದೆ ಮೇಕೆ ಮಹಾತ್ಮಾ ಗಾಂಧಿಯವರಿಗೆ ಪ್ರಿಯವಾದ ಪ್ರಾಣಿ. ಇದರ ಹಾಲನ್ನೇ ಅವರು ಉಪಯೋಗಿಸುತ್ತಿದ್ದರು. ಆದಕಾರಣ ಇವುಗಳಿಗೆ ರಕ್ಷಣೆ ಕೊಡಬೇಕು.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಈ ವಿಷಯದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಜನಾಬ್ ಇಮಾಂರವರು 12½ ಘಂಟೆಯವರೆಗೂ ನಮ್ಮ ಜೊತೆಯಲ್ಲೇ ಇದ್ದರು. 12½ ಘಂಟೆ ಮೇಲೆ ಈ ಅಹಿಂಸಾ ವಾದವನ್ನು ಪುರು ಮಾಡಿದ್ದಾರೆಂದು ಕಾಣುತ್ತದೆ, ಸ್ವಾಮಿ, ಮರೆನಾಡಿನಲ್ಲಿ ಈಚೆಗೆ ನಮಾರು ನೂರು ವರ್ಷದಿಂದ ನರರ ಸಂಖ್ಯೆ ಕಡಿಮೆಯಾಗುತ್ತಾ ಬಂದು ವಾನರರ ಸಂಖ್ಯೆ ಜಾಸ್ತಿಯಾಗುತ್ತಾ ಇದೆ. ಶ್ರೀ ಕೃಷ್ಣಪ್ಪನವರು ಹೇಳಿದ ಹಾಗೆ ಭೂಮಿಯಲ್ಲಿ ಬೀಜ ಬಿತ್ತಿದ ಆಗಾಯ್ತು, ಫಸಲು ಕಟಾವು ಆಗುವವರೆಗೂ ಇದರ ಹಾವಳಿ ತಡೆಯುವ ಹಾಗಿಲ್ಲ. ಅತಿಕೆಮರ ಹತ್ತಿ ಅಡಿಕೆ ಕಾಯೆಲ್ಲಾ ಹಾಳುಮಾಡುತ್ತವೆ. ಅದರಿಂದ ಪ್ರಯೋಜನವಾದರೆ ಪರವಾಗಿಲ್ಲ. ಸುಮ್ಮನೆ ಕಿಶ್ತುಹಾಕಿ ಒಂದು 100ಮರಗಳಿಗೆ 10ಮಣ ಆಗುವ ಹಾಗಿದ್ದರೆ 4—5ಮಣ ನಷ್ಟವಾಗುತ್ತಿದೆ. ಅನೇಕ ಸಂದರ್ಭಗಳಲ್ಲಿ ನಮ್ಮ ಕಡೆ ರೈತರು ಅವುಗಳನ್ನು ಕೊಂದುಹಾಕುತ್ತಾರೆ. ಆದರೆ ಮದ್ದು, ಗುಂಡುಗಳ ನರಬರಾಯಿ ಸಾಲದು. ಆದ್ದರಿಂದ ಈ ಸಂದರ್ಭದಲ್ಲಿ ರೈತರಿಗೆ ಹೆಚ್ಚು ಮದ್ದು, ಗುಂಡುಗಳನ್ನು ಒದಗಿಸಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಶ್ರೀ ಕೃಷ್ಣಪ್ಪನವರು ಅವುಗಳ ಬೀಜ ಒಡೆಯಬೇಕೆಂದು ಹೇಳಿದರು. ಅದಕ್ಕೇ ಒಂದು ಇಲಾಖೆಯನ್ನು ಇಡಬೇಕಾಗುತ್ತದೆ ಮತ್ತು ಅದಕ್ಕೆ ಡಾಕ್ಟರುಗಳು ಬೇರೆ. ಇವೆಲ್ಲಾ ಆಗಬೇಕಾಗುತ್ತದೆ. ಆದ್ದರಿಂದ ಒಟ್ಟಿನಲ್ಲಿ ನಾನು ಹೇಳುವುದು ಇಷ್ಟೆ. ಅವುಗಳನ್ನು ನಿರ್ದಾಕ್ಷಿಣ್ಯವಾಗಿ, ನಿರ್ದಯದಿಂದ ಗುಂಡಿನಿಂದ ಹೊಡೆದುಹಾಕಬೇಕು. ಇದರಿಂದ ವ್ಯವಸಾಯ ಬಹಳ ಉತ್ತಮಸ್ಥಿತಿಗೆ ಬರುತ್ತದೆ. ಇದರ ಹಾವಳಿ ಬರೀ ಹಳ್ಳಿಗಳಲ್ಲಿ ಮಾತ್ರವಲ್ಲ ಪಟ್ಟಣಗಳಲ್ಲೂ ಕೂಡ ಇದೆ. ಒಂದು ದಿನ ನನ್ನ ಆಫೀಸಿಗೆ ನುಗ್ಗಿ ಮಸಿ ಪ್ಯಾಡನ್ನೆಲ್ಲಾ ಕಿತ್ತು ಹಾಳುಮಾಡಿತ್ತು. ಇನ್ನೊಂದು ದಿನ ನಮ್ಮ ಸ್ನೇಹಿತರ ಮನೆ ನುಗ್ಗಿ ಕನ್ನಡಿ ನೋಡಿಕೊಳ್ಳುತ್ತಾ ಇತ್ತು. ಈ ರೀತಿ ಇದರ ಹಾವಳಿ ಒಂದು ರೂಪವಲ್ಲ ಅಲ್ಲ. ಜನಾಬ್ ಇಮಾಂರವರೇನೋ ಧರ್ಮದ ವಿಷಯ ಹೇಳಿದರು. ನಿಜ. ಧರ್ಮದಾತ್ಮ ದೇವರನ್ನು ಹಿಂದೂಸ್ಥಾನದಿಂದ ಎಂದೋ ಓಡಿಸಿದ್ದೇವೆ. ಧರ್ಮದೇವರು ಇವೆಲ್ಲಾ ನೂತ್ರದಲ್ಲೇ ಇದೆ ಅಷ್ಟೆ. ಮನುಷ್ಯರನ್ನೇ ಜೀವಸಹಿತ ನುಂಗತಕ್ಕ ಜನರು ಇದ್ದಾರೆ. ಹಾಗಿರುವಾಗ ಪ್ರಾಣಿಗಳ ವಿಚಾರದಲ್ಲಿ ಅಷ್ಟೊಂದು ಧರ್ಮ, ನೀತಿ ಅನಾವಶ್ಯಕವೆಂದು ಹೇಳಿ ಈ ನಿರ್ಣಯವನ್ನು ಸಮರ್ಥಿಸುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಕೋತಿಗಳನ್ನು ಕೊಲ್ಲಬೇಕೆಂದು ನಾನು ಈ ನಿರ್ಣಯವನ್ನು ತಂದಿಲ್ಲ. ಕೋತಿಗಳು ರೈತರಿಗೆ ಬಹಳ ತೊಂದರೆ ಕೊಡುತ್ತವೆ. ಆದ್ದರಿಂದ ಅದನ್ನು ತಪ್ಪಿಸಬೇಕೆಂದು ಹೇಳಿದರೆ ಜನಾಬ್ ಇಮಾಂರವರು ಇದನ್ನು ವಿರೋಧ ಮಾಡುತ್ತಾ, ನೀತಿ ಶಾಸ್ತ್ರ, ಧರ್ಮಶಾಸ್ತ್ರ, ಆಹಿಂಸೆ ಮುಂತಾದುವನ್ನೆಲ್ಲಾ ಪ್ರಸ್ತಾಪ ಮಾಡಿದರು. ನಮ್ಮ ಮಿತ್ರರು ಹೇಳಿದ ಹಾಗೆ 12½ ಘಂಟೆಯಾದ ಮೇಲೆ ಇವೆಲ್ಲಾ ಬಂದಿರಬಹುದು. ಒಟ್ಟಿನಲ್ಲಿ ಕೋತಿಗಳು ರೈತರಿಗೆ ಬಹಳ ತೊಂದರೆ ಕೊಡುತ್ತವೆ. ಅದನ್ನು ಕಡಿಮೆ ಮಾಡುವುದಕ್ಕೆ ಸರ್ಕಾರದವರು ಕಾರ್ಯಕ್ರಮ ಕೈಕೊಳ್ಳಬೇಕು. ದೆಹಲಿ ಪಾರ್ಲಮೆಂಟಿನಲ್ಲಿ ಈ ವಿಷಯ ಚರ್ಚೆಗೆ ಬಂದಾಗ ಈ ಕೋತಿಗಳು ನಮ್ಮ ಪೂರ್ವೀಕವಂಶಕ್ಕೆ ಸೇರಿದವು, ನಮ್ಮ ಹಿಳಿಗೆ ಬೆಳೆಯಬೇಕಾದರೆ ನಮ್ಮ ಪೂರ್ವೀಕರು ಸತ್ತುಹೋಗಬೇಕು ಅವರು ಬದುಕಿರುವುದಕ್ಕಾಗುವುದಿಲ್ಲ ಎಂದು ಒಬ್ಬ ಸದಸ್ಯರು ಹಾಸ್ಯಾಸ್ಪದವಾಗಿ ಹೇಳಿದ್ದಾರೆ. ಕೋತಿಗಳನ್ನು ನಾಶ ಮಾಡಿ ನಾವು ಉದ್ಧಾರವಾಗಬೇಕೆಂದು ನನ್ನ ಉದ್ದೇಶ ಅಲ್ಲ. ಯಾವುದಾದರೂ ಒಂದು ವಿಧದಲ್ಲಿ ರೈತರಿಗೆ ಅವುಗಳಿಂದಾಗತಕ್ಕ ತೊಂದರೆಯನ್ನು ತಪ್ಪಿಸಬೇಕು. ಅವುಗಳು ಕಾಡಿನಲ್ಲಿದ್ದರೆ ಯಾವ ತೊಂದರೆಯನ್ನೂ ಕೊಡುವುದಿಲ್ಲ. ಪೂರ್ವ ಕಾಲದಲ್ಲಿ ಆವು ಕಾಡಿನಲ್ಲಿರುತ್ತಿದ್ದವು. ಚಿಕ್ಕವಯಸ್ಸಿನಲ್ಲಿ ನನಗೆ ಜ್ಞಾಪಕವಿದೆ. ಊರಿನಲ್ಲಿ ಅಕಸ್ಮಾತ್ತಾಗಿ ಯಾವುದಾದರೂ ಒಂದು ಕೋತಿ ಬಂದುಬಿಟ್ಟರೆ ಅದನ್ನೇ ನೋಡುತ್ತಾ ನಿಂತುಕೊಂಡು ಬಿಡುತ್ತಿದ್ದೆವು. ಈಗ ಗುಂಪು ಗುಂಪಾಗಿ ಬಂದು ಬೆಳೆಗಳನ್ನು, ಮತ್ತು ತೆಂಗಿನ ತೋಟಗಳನ್ನು ನಾಶ ಮಾಡುತ್ತವೆ. ಕೋತಿಗಳು ಕೊಡುವ ತೊಂದರೆಯನ್ನು ತಪ್ಪಿಸಬೇಕು ಮತ್ತು ದೇಶದಲ್ಲಿ ಕ್ಷಾಮ ಪರಿಸ್ಥಿತಿಯನ್ನು ಎದುರಿಸಬೇಕು. ಈ ಎರಡು ನಮ್ಮ ಸರ್ಕಾರದವರ ಮುಂದಿದೆ. ಈ ಕೋತಿಗಳಿಂದ ಶೇಕಡ 10–15ರಷ್ಟು ಆಹಾರ ಪದಾರ್ಥ ನಷ್ಟವಾಗುತ್ತದೆ. ಅದು ತಿನ್ನುವುದು ಒಂದು ಭಾಗ ಆದರೆ ಹಾಳು ಮಾಡುವುದು 10 ಭಾಗ. ಅದರ ಚೇಷ್ಟೆ ವರ್ಣನೆ ಮಾಡುವುದಕ್ಕಾಗುವುದಿಲ್ಲ. ಈ ಎಲ್ಲಾ ದೃಷ್ಟಿಯಿಂದ ಅವುಗಳನ್ನು ಕೊಲ್ಲುವುದು ಬೇಡ, ಬೇರೆ ಯಾವ ವಿಧದಲ್ಲಿಯಾದರೂ ಕಡಮೆ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಪೂರ್ವಪಂಜಾಬಿನಲ್ಲಿ ಸರ್ಕಾರದವರೇ ಕೋತಿಗಳನ್ನು ಹಿಡಿದು ಕೊಡುವವರಿಗೆ ಬಹುಮಾನ ಕೊಡಬೇಕೆಂದು ಮಾಡಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಹಾಗೆ ನೋಡುತ್ತಾ ಹೋದರೆ ಯಾವುದೋ ಒಂದು ಸಂದರ್ಭದಲ್ಲಿ ಮಹಾತ್ಮಾಗಾಂಧಿಜಿಯವರೇ ಇವುಗಳನ್ನು ಕೊಲ್ಲಬಹುದೆಂದು ಹೇಳಿದ್ದಾರೆ. ನಾಗರ ಹಾವುಗಳನ್ನು ಸಹ ಕೊಲ್ಲಬಹುದೆಂದು ಹೇಳಿದ್ದಾರೆ. ಅಂಥವರೇ, ಹೇಳಿರುವಾಗ ಜನಾಬ್ ಇಮಾಂರವರ ತತ್ವಕ್ಕೆ ಎಷ್ಟರ ಮಟ್ಟಿಗೆ ಮನ್ನಣೆ ದೊರೆಯುತ್ತದೆಯೋ ಗೊತ್ತಿಲ್ಲ. ನಾವು ಎಷ್ಟೋ ಪ್ರಾಣಿಗಳನ್ನು ಕೊಲ್ಲುತ್ತೇವೆ. ಆದರೆ ಮಾನಸಿಕ ಭಾವನೆಗೆ ಎಡೆಗೊಡಬೇಕಾದ ಪರಿಸ್ಥಿತಿ ದೇಶದಲ್ಲಿ ಇನ್ನೂ ಉಳಿದಿರುವುದರಿಂದ ಅವುಗಳನ್ನು ಕೊಂದು ಹಾಕದೆ ಬೇರೆ ವಿಧದಲ್ಲಿ ಕಡಿಮೆ ಮಾಡಬೇಕೆಂದು ನನ್ನ ಅಭಿಪ್ರಾಯ. ಸರ್ಕಾರದವರು ರೈತರ ಕಷ್ಟವನ್ನು ಮನಗಂಡು ತಕ್ಕ ಕಾರ್ಯಕ್ರಮ ಕೈಕೊಂಡರೆ ಅಷ್ಟೇ ಸಾಕಾಗಿದೆ.

ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—ಮಾನ್ಯ ಅಧ್ಯಕ್ಷರೇ, ಎಲ್ಲಾ ವಿಧವಾದಂಥ ಬೆಳೆಗಳಿಗೂ ಕೂಡ ಇತ್ತೀಚೆಗೆ ಕೋತಿಗಳ ಕಾಟ ಜಾಸ್ತಿಯಾಗಿದೆ. ಕಪಿಚೇಷ್ಟೆ ಎಂಬುದಾಗಿ ಹೆಸರೇ ಇದೆ. ಒಂದು ಭಾಗ ತಿನ್ನುವುದಾದರೆ ನಾಲ್ಕು ಭಾಗ ಹಾಳು ಮಾಡುತ್ತದೆ. ಕಳೆದ ಮೂರು ವರ್ಷಗಳಿಂದ ಈ ವಿಚಾರದಲ್ಲಿ ಏನಾದರೂ ಮಾಡಬೇಕೆಂದು ಹೇಳಿ ಇಲ್ಲೂ ಮತ್ತು ಪಾರ್ಲಿಮೆಂಟಿನಲ್ಲೂ ಕೂಡ ಪ್ರಶ್ನೆಗಳು ಬರುತ್ತಾ ಇವೆ. ಈಗ ಕೆಲವು ತಿಂಗಳ ಕೆಳಗೆ ಶ್ರೀ ಸಿಧ್ವಾರವರು ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಹಾಕಿ ಕೇಂದ್ರ ಸರ್ಕಾರದವರು ಈ ವಿಚಾರದಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಿದ್ದಾರೆ. ಪೂರ್ವ ಪಂಜಾಬ್ ಸರ್ಕಾರದವರು ಯಾರ್ಯಾರು ಬೆಳೆಗಳಿಗೆ ನಷ್ಟ ಮಾಡತಕ್ಕ ಕೋತಿಗಳನ್ನು ಕೊಲ್ಲುತ್ತಾರೋ ಅವರಿಗೆ ಇನಾಂ ಕೂಡ ಕೊಡುತ್ತಾ ಇದ್ದಾರೆ. ಈ ಪ್ರಶ್ನೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಒಂದು ವರ್ಷದ ಕೆಳಗೆ ಬಂದಿತ್ತು. ಅನೇಕರು ಅನೇಕ ತರಹವಾಗಿ ಈ ವಿಷಯವನ್ನು ಪ್ರತಿಪಾದಿಸಿದ್ದಾರೆ. ಕೆಲವರು ಇದನ್ನು ಕಾಡಿಗೆ ಬಿಟ್ಟುಬಿಡಬೇಕೆಂದು ಹೇಳಿದ್ದಾರೆ. ಇನ್ನು ಕೆಲವರು ಈ ಊರಿನಿಂದ ಹಿಡಿದುಕೊಂಡು ಹೋಗಿ ಇನ್ನೊಂದು ಊರಿನಲ್ಲಿ ಬಿಡಬೇಕೆಂದು ಹೇಳಿದ್ದಾರೆ. ಶ್ರೀ ಮಿಡ್ಲ್‌ಟರವರು ಹೇಳುತ್ತಿದ್ದುದು ನನಗೆ ಜ್ಞಾಪಕಕ್ಕೆ ಬರುತ್ತದೆ. ಪ್ರತಿಯೊಬ್ಬರೂ ನಮ್ಮ ಊರಿನಿಂದ ಹಿಡಿದುಕೊಂಡು ಹೋಗಿ ಇನ್ನೊಂದು ಊರಿನಲ್ಲಿ ಬಿಡಿ ಎಂದು ಹೇಳಿದರೆ ಆ ಊರಿನಲ್ಲಿ ಜನರು ಇರುವುದಿಲ್ಲವೇ? ಅದನ್ನು ಎಲ್ಲಿ ಬಿಟ್ಟರೂ ಕಷ್ಟ. ಜನಗಳು ಆ sentiment ಮರೆತು ಬೇರೆ ಏನಾದರೂ ಸೂಚನೆ ಮಾಡಬೇಕೆಂದು ಹೇಳಿದರು: ನಿಜ. ಸರ್ಕಾರದವರು ಈಗ ನಿರ್ದಿಷ್ಟವಾಗಿ ಯಾವ ಅಭಿಪ್ರಾಯವನ್ನೂ ವ್ಯಕ್ತಪಡಿಸುವುದಿಲ್ಲ. ಪ್ರಜೆಗಳಿಂದ ಒತ್ತಾಯ ಬಂದರೆ, ಹಾವಳಿ ಜಾಸ್ತಿ ಆಗಿದೆ, ಅವನ್ನು ಕೊಂದರೂ ಪರವಾಗಿಲ್ಲ ಎಂಬ ಪ್ರಜಾಭಿಪ್ರಾಯ ರೂಪುಗೊಂಡರೆ ಸರ್ಕಾರದವರು ಸೂಕ್ತ ಕಾರ್ಯಕ್ರಮ ಕೈಕೊಳ್ಳಲು ತಯಾರಾಗಿದ್ದಾರೆ ದಕ್ಷಿಣ ಭಾರತದಲ್ಲಿ sentiment ಬಹಳ ಬಲವತ್ತರವಾಗಿದೆ. ಅನೇಕ ಜನ ಅವುಗಳನ್ನು ಹಿಡಿದು ಕಾಡಿಗೆ ತೆಗೆದುಕೊಂಡು ಹೋಗಿ ಬಿಡುತ್ತಾರೆ. ಒಂದು ತಿಂಗಳಿನಲ್ಲಿ ವಾಪಸ್ಸು ಬರುತ್ತವೆ. ಬಹಳ ಸೂಕ್ಷ್ಮವಾದ ಬುದ್ಧಿ ಮರೆಯುವುದಿಲ್ಲ. ನಂದಿಬೆಟ್ಟದಿಂದ ಹಿಡಿದು ಅನೇಕ ಸಾರಿ ಬೇರೆ ಕಡೆಗಳಲ್ಲಿ ಬಿಟ್ಟರು. ಪುನಃ ಬಂದಿವೆ. ಹಿಡಿದು ಸಾಗಿಸುವುದಕ್ಕೆ ಒಂದಲ್ಲ, ಎರಡಲ್ಲ, ಹಿಂಡು ಜಾಸ್ತಿ ಇದೆ. ಹಿಡಿಮ ಸಾಗಿಸುವುದಕ್ಕೆ ಕಷ್ಟವಾಗುತ್ತದೆ. ನಮ್ಮ ಸ್ನೇಹಿತರು ಬೀಜ ಒಡೆಯ ಬೇಕೆಂದು ಹೇಳಿದರು, ಅದು ಇನ್ನೂ ಬಹಳ ಕಷ್ಟ. ಗಂಡು ಕೋತಿಯನ್ನು ಹಿಡಿದು ಬೀಜ ಒಡೆಯು (castrate) ಬೇಕೆಂದರೆ ಶಿಬ್ಬಂದಿ ಖರ್ಚು ಜಾಸ್ತಿಯಾಗುತ್ತದೆ. ಅದು ಇನ್ನೂ ಬಹಳ ಕಷ್ಟವಾದಂಥ ಕೆಲಸ. ದೇವರು ಎಲ್ಲ ವಿಧವಾದ ಜೀವಗಳನ್ನು ಸೃಷ್ಟಿ ಮಾಡಿದ್ದಾನೆ. ಆದರೆ ಯಾವ ಯಾವುದು ಯಾರ್ಯಾರಿಗೆ ಹಾನಿಕರವೋ ಅವುಲಯವಾಗುತ್ತವೆ. ಜನಾಬ್ ಇಮಾಂರವರು ಒಂದು ವಿಷಯ ಹೇಳಿದರು. ಅವರಿಗೆ ಇಷ್ಟು ಹೇಳ ಬಲ್ಲೆ. ಮಾಂಸಾಹಾರಕ್ಕೆ ಪ್ರಾಣಾಪಾಯವಿಲ್ಲದೇ ಹೇಗೆ ಆಗುತ್ತದೆ!

ಆದ್ದರಿಂದ ಈ ವಿಚಾರದಲ್ಲಿ ಪ್ರಜಾಭಿಪ್ರಾಯವು ರೂಪುಗೊಂಡರೆ ಸರ್ಕಾರದವರು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧರಾಗಿದ್ದಾರೆಂದು ನಾನು ಭರವಸೆ ಕೊಡುತ್ತೇನೆ.

ಎರಡನೆಯದಾಗಿ, ಅಡುಗಳ ವಿಚಾರದಲ್ಲಿ ಹೇಳುವುದಾದರೆ, ನಿಜವಾಗಿಯೂ ಅನೇಕ ಕಡೆ ಅಡುಗಳಿಂದ ಗಿಡಗಳೂ ಹೈರುಗಳೂ ನಷ್ಟವಾಗುತ್ತಿವೆಯೆಂಬುದು ಗೊತ್ತಾಗಿದೆ. ಇವುಗಳನ್ನು ಹಿಡಿದು ದೊಡ್ಡಿಗೆ ಹಾಕುವುದಕ್ಕೆ ಅವಕಾಶ ಮಾಡಿದೆ. ಬೇಕಿದ್ದರೆ, ಕ್ಯಾಟಲ್ ಟ್ರೆಸ್‌ಪಾಸ್ ಆಕ್ಟ್‌ನ್ನು ಇನ್ನೂ ಬಿಗಿ ಮಾಡುವುದನ್ನು ಯೋಚನೆ ಮಾಡೋಣ, ಆದುಗಳು ಕದ್ದು ಬಂದು ಹೈರುಗಳ ಮತ್ತು ಗಿಡಗಳ ಎಲೆಗಳನ್ನೆಲ್ಲಾ ತಿಂದು ನಾಶ ಮಾಡುವುದಲ್ಲದೆ, ಅನೇಕ ಜನರು ಅಡುಗಳ ಮೇವಿಗಾಗಿ ಸಾಲು ಮರಗಳ ಕೊಂಬೆಗಳನ್ನೇ ಕಡಿದು ಹಾಕುತ್ತಿರುವುದು ಕಂಡು ಬಂದಿದೆ. ಇದನ್ನೂ ಕೂಡ ತಪ್ಪಿಸುವುದಕ್ಕೆ ಸೂಕ್ತವಾದ ತಿಳಿವಳಿಕೆಗಳನ್ನು ಕೊಡುವುದಕ್ಕೆ ರವೆನ್ಯೂ ಕಮಿಷನರಿಗೆ ತಿಳಿಸಿದ್ದೇವೆ. ಇವೆಲ್ಲಾ ಮಾಡಿದ್ದರೂ ಕೂಡ ಮುಖ್ಯವಾಗಿ ಒಂದಂಶವನ್ನು ನಾವು ಜ್ಞಾಪಕದಲ್ಲಿಡಬೇಕು. ಹಿಂದಿನ ಕಾಲದಲ್ಲಿ ಹಳ್ಳಿಗಳಲ್ಲಿ ಒಂದು ರೀತಿಯ ಒಗ್ಗಟ್ಟು, ಸಹಕಾರ ಸಹವರ್ತನೆ ಮತ್ತು ತಾವು ತಾವೇ ಒಂದು ಕಟ್ಟು ಮಾಡಿಕೊಂಡು ಒಬ್ಬರ ಹೊಲಕ್ಕೆ ಇನ್ನೊಬ್ಬರ ದನಕರುಗಳನ್ನು ಬಿಡದಂತೆ ನೋಡಿಕೊಳ್ಳುತ್ತಿದ್ದರು. ಹಳ್ಳಿಯ ವರೆಲ್ಲಾ ಒಂದೇ ಸಂಸಾರದವರಂತೆ ಇರುತ್ತಿದ್ದರು. ದುರದೃಷ್ಟವಶಾತ್ ಹಳ್ಳಿಗಳಲ್ಲಿ ಆ ಕಟ್ಟುಪಾಡುಗಳು, ಸಹಕಾರ ಎಲ್ಲಾ ಮಾಯವಾಗಿ ಮನೆ ಮನೆಗೂ ಜಗಳಗಳು ಪ್ರಾರಂಭವಾಗಿ ಕೋರ್ಟು ಕಚೇರಿಗಳಿಗೆ ಹೋಗುತ್ತಿದ್ದಾರೆ. ತಮ್ಮ ತಮ್ಮ ಊರಿನ ಹೊಲಗದ್ದೆಗಳ ಕಾವಲನ್ನು ಊರಿನವರೇ ಮನಸ್ಸಿಟ್ಟರೆ ಸುಲಭವಾಗಿ ಮಾಡಿಕೊಳ್ಳಬಹುದು.

ಒಟ್ಟಿನಲ್ಲಿ ಈ ನಿರ್ಣಯ ತಂದಿರುವುದರಲ್ಲಿ ಮಾನ್ಯ ಕೃಷ್ಣಪ್ಪನವರ ಉದ್ದೇಶವೇನೋ ಒಳ್ಳೆಯದು. ನಾನಾಗಲೇ ಹೇಳಿದಂತೆ ಕೋತಿಗಳ ಹಾವಳಿಯನ್ನು ತಪ್ಪಿಸುವ ವಿಷಯದಲ್ಲಿ ಪ್ರಜಾಭಿಪ್ರಾಯವು ಸರಿಯಾಗಿ ರೂಪುಗೊಂಡರೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಭರವಸೆ ಕೊಡುತ್ತೇನೆ. ಏಕೆಂದರೆ ಕೋತಿಗಳಿಂದ ಶೇಕಡಾ 10—12 ರಷ್ಟು ನಷ್ಟವಾಗುತ್ತದೆ.

ಶ್ರೀ ಎಂ. ಎಲ್. ನಂಜರಾಜಅರಸ್‌ರವರು (ಮೈಸೂರು ಜಿಲ್ಲೆ).—ಪ್ರಾಯೋಗಿಕವಾಗಿ ಯಾವುದಾದರೂ ಒಂದೆರಡು ಕಡೆ tear gas ಉಪಯೋಗಿಸಿ ಅವುಗಳಿಗೆ ಭಯವನ್ನುಂಟುಮಾಡಿದರೆ ಅವು ಹೆದರಿ ಕಾಡಿಗೆ ಓಡಿ ಹೋಗಬಹುದು. ಒಂದು ಸಲ ಪರೀಕ್ಷೆಮಾಡಿ ನೋಡಿ.

ಶ್ರೀ ಟಿ. ಮರಿಯಪ್ಪನವರು.—ನೀವು ಹೇಳುವುದೂ ಸಾಧುವಾಗಿ ಕಾಣುತ್ತದೆ. ಅದನ್ನು ಯೋಚನೆ ಮಾಡಿ ನೋಡುತ್ತೇವೆ. ಜನರೂ ಕೂಡ ಈ ವಿಚಾರದಲ್ಲಿ ತಮ್ಮ ಮನೋಭಿಪ್ರಾಯವನ್ನು ಸ್ವಲ್ಪ ಮಟ್ಟಿಗೆ ಬದಲಾವಣೆ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಿ ನಾನಾ ಸಾರ್ವಜನಿಕ ಸಂಸ್ಥೆಗಳ ಮುಂಖಾತರ ನಿರ್ಣಯಗಳನ್ನು ಮಾಡಿಸಿ ಸರ್ಕಾರಕ್ಕೆ ಕಳುಹಿಸಿಕೊಟ್ಟರೆ ನಾವು ತಕ್ಕ ಕಾರ್ಯಕ್ರಮ ಕೈಕೊಳ್ಳುವುದಕ್ಕೆ ಸಹಾಯವಾಗುತ್ತದೆ. ಕೋತಿಗಳಿಂದ ಬರೀ ಬೆಳೆಗಳು ನಷ್ಟವಾಗುವುದಿರಲಿ, ಹಳ್ಳಿಗಳ ಕಡೆ ಒಮ್ಮೆ ಕೋತಿಗಳ ಹಾವಳಿಯಿದೆಯೆಂದು ರೈತರುಗಳಿಗೆ ಗೊತ್ತಾಯಿತೆಂದರೆ ಸಾಕು ಹಣ್ಣಿನ ಗಿಡಗಳನ್ನಾಸಲೇ ತೆಂಗು, ಬಾಳೆ, ಪರಂಗಿ ಮುಂತಾಗಿ ಯಾವುವನ್ನೂ ಹಾಕುವುದನ್ನೇ ಬಿಟ್ಟು ಬಿಡುತ್ತಾರೆ. ರಾಗಿ ಹೊಲಕ್ಕೆ ಹೋದರೆ ಬರೀ ರಾಗಿ ತೆನೆಗಳನ್ನು ಉಜ್ಜಿ ತಿನ್ನುವುದಲ್ಲದೆ ಎಲ್ಲವನ್ನೂ ಗೀಳಿ ಹಾಕಿ ಬಿಡುತ್ತದೆ. ತಿನ್ನುವುದಕಿಂತ ಹೆಚ್ಚಾಗಿ ನಾಶ ಪಡಿಸುವುವು ಜಾಸ್ತಿ. ಕೋತಿ ಚೇಷ್ಟೆ ಎಂದು ಗೊತ್ತೇ ಇದೆ. ಆದ್ದರಿಂದ ಸಾರ್ವಜನಿಕರ ಅಭಿಪ್ರಾಯ ರೂಪುಗೊಂಡರೆ ಏನಾದರೂ ಮಾಡಬಹುದು ಒಂದೇ ಒಂದು ಉದಾಹರಣೆ ಹೇಳುತ್ತೇನೆ. ಹುಣಸೂರು ತಾಲ್ಲೂಕಿನಲ್ಲಿ ಕೆಲವು ಕಪಿಗಳನ್ನು ಯಾವಾಗ ಹೊಡೆದು ಹಾಕುವುದಕ್ಕೆ ಪ್ರಾರಂಭ ಮಾಡಿದನೋ ಕಪಿಗಳೆಲ್ಲಾ ಕಾಡಿಗೆ ಓಡಿ ಹೋದುವು. ಈಗ ಕೋತಿಗಳ ಹಾವಳಿ ಸ್ವಲ್ಪವೂ ಇಲ್ಲವೆಂದು ಗೊತ್ತಾಗಿದೆ. ಶ್ರೀ ಚೆನ್ನಬಸಪ್ಪನವರಿಗೂ ಇದು ಗೊತ್ತಿದೆ. ಆದ್ದರಿಂದ ಈ ವಿಷಯದಲ್ಲಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದನ್ನೂ, ಬಿಡುವುದನ್ನೂ ಸಭೆಯವರಿಗೇ ಬಿಟ್ಟಿದ್ದೇನೆ. ಆದ್ದರಿಂದ ಮಾನ್ಯ ಸದಸ್ಯರು ನಾನು ಕೊಟ್ಟ ಭರವಸೆಯ ಮೇರೆ ತಮ್ಮ ನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಮಾನ್ಯ ಸಚಿವರು ಕೊಟ್ಟ ಭರವಸೆಯ ಮೇರೆ ನಾನು ಈ ನಿರ್ಣಯವನ್ನು ವಾಪಸು ತೆಗೆದು ಕೊಳ್ಳುತ್ತೇನೆ.

The resolution was, by leave of the Assembly, withdrawn.

Mr. SPEAKER.—The next reaolution stands in the name of Sri D. H. Chandrasekharaiya.

Sri D. H. CHANDRASEKHARAIYA (Chitaldrug District-General).—I am not moving the resolution.

Mr. SPEAKER.—The next resolution stands in the name of Sri B. N. Boranna Gowda. Hon'ble Member is not present.

The next resolution stands in the name of Sri A. Bheemappa Naik.

RESOLUTION NO. 7.

Requesting the Central Government to grant Subsidy on food commodities imported into Mysore.

Sri A BHEEMAPPA NAIK (Chitaldrug District-General).—Sir, I beg to move:

"That this Assembly is of the opinion that the Central Government be requested to grant subsidy on all food commodities imported into Mysore whether from other States in India or from other foreign countries."

ಸ್ವಾಮಿ, ಈಗ ಸಭೆಯ ಮುಂದಿರತಕ್ಕ ಠರಾವಿನ ಮೇಲೆ ಮಾತನಾಡುವುದಕ್ಕೆ ಮುಂಚೆ, ನಾನು ತಮ್ಮ ಗಳ ನೆನಪಿಗೆ ಮೈಸೂರು ದೇಶದ ಫೈನಾನ್ಷಿಯಲ್ ಇಂಚೆಗ್ರೇಷನ್ ಆದ ಸಮಯದಲ್ಲಿ ಈ ಸಭೆಯಲ್ಲಿ ಆರ್ಥಿಕ ಸಚಿವರು ನಮಗೇನು ಭರವಸೆಯನ್ನು ಕೊಟ್ಟಿದ್ದರೆಂಬು

ದಕ್ಕೆ ಅವರ ಭಾಷಣವನ್ನು ತಮ್ಮ ಗಮನಕ್ಕೆ ತರ ಬಯಸುತ್ತೇನೆ. ಆಗ್ಗೆ ಅವರು ಹೇಳಿದರು, "ಫೈನಾನ್ಷಿಯಲ್ ಇಂಟೆಗ್ರೇಷನ್ ಆಗುವುದರಿಂದ ನಮ್ಮ ದೇಶಕ್ಕೆ ಬೇಕಾದಷ್ಟು ಅನುಕೂಲತೆಗಳು ಲಭಿಸುತ್ತವೆ, ಆಹಾರದ ವಿಷಯದಲ್ಲಿ ಸಬ್ಸಿಡಿ ಸಿಕ್ಕುತ್ತದೆ, ಆದ್ದರಿಂದ ಎಲ್ಲಾ ದೃಷ್ಟಿಯಿಂದಲೂ ಅದು ಒಳ್ಳೆಯದು ಎಂದು. ಆದರೆ ಈಗ ನಮಗೆ ಗೊತ್ತಾಗಿದೆ, ಹಿಂದೆ ಆಹಾರದ ವಿಷಯದಲ್ಲಿ ಸಬ್ಸಿಡಿ ಎಷ್ಟು ಬರುತ್ತಿತ್ತೋ ಅದಕ್ಕೂ ಹತ್ತರಷ್ಟು ನಿರೀಕ್ಷಿಸುವುದಕ್ಕೆ ಪ್ರತಿಯಾಗಿ ಮೊದಲನದಕ್ಕೆ ಕಾಲು ಭಾಗದಷ್ಟು ಕೂಡ ಬರುತ್ತಿಲ್ಲವೆಂದು. ಇದೇಕೆ ಹೀಗಾಯಿತೆಂಬುದನ್ನು ಯೋಚನೆ ಮಾಡುವುದಾದರೆ, ಹಿಂದೆ ಭಾರತ ಸರ್ಕಾರದವರು ನಮಗೆ ಹೊರಗಡೆಯಿಂದ ಬರತಕ್ಕ ಧಾನ್ಯಗಳ ವಿಷಯದಲ್ಲಿ ನಾವು ಅವುಗಳನ್ನು ಇಲ್ಲಿ ಮಾರುವ ಬೆಲೆಗೂ, ಅವುಗಳನ್ನು ಕೊಂಡ ಬೆಲೆಗೂ ಉಂಟಾಗತಕ್ಕ ವ್ಯತ್ಯಾಸವನ್ನೂ ಕಟ್ಟಿಕೊಡುತ್ತೇವೆಂದು ಹೇಳಿದ್ದರು. ಉದಾಹರಣೆಗೆ ನಮ್ಮ ದೇಶದೊಳಗಡೆ ಯಾವುದಾದರೂ ಧಾನ್ಯದ ಬೆಲೆ 20ರೂಪಾಯಿಗಳಾಗಿದ್ದು ಹೊರಗಡೆ ಅದರ ಬೆಲೆ 25ರೂಪಾಯಿಗಳಾಗಿದ್ದರೆ, ಈ ಹೆಚ್ಚಿನ 5ರೂಪಾಯಿಗಳನ್ನು ಕೇಂದ್ರದವರು ಸಬ್ಸಿಡಿ ರೂಪದಲ್ಲಿ ಕೊಡುತ್ತಾರೆಂದು ಹೇಳುತ್ತಿದ್ದಿರಿ. ಆದರೆ ಈಗ ಭಾರತ ಸರ್ಕಾರದವರು ತಾವು ಹೇಳಿದ್ದನ್ನು ಬದಲಾಯಿಸಿ ಇಂಡಿಯಾದ ಹೊರದೇಶದಿಂದ ಬಂದ ಸಾಮಾನುಗಳಿಗೆ ಮಾತ್ರ ಸಬ್ಸಿಡಿ ಕೊಡುತ್ತೇನೆ ಅದು ಬಿಟ್ಟು ಇಂಡಿಯಾದೊಳಗೆ ಇರುವ ಬೊಂಬಾಯಿ, ಮದ್ರಾಸು ಮುಂತಾಗಿರುವ ಪ್ರದೇಶದಿಂದ ತರಿಸಿಕೊಳ್ಳುವ ಆಹಾರ ಪದಾರ್ಥಗಳಿಗೆ ಸಬ್ಸಿಡಿ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ವಾಸ್ತವವಾಗಿ ಹೇಳುವುದಾದರೆ ಮೈಸೂರಿನವರ ದೃಷ್ಟಿಯಿಂದ, ನಮ್ಮ ದೇಶದ ಎಲ್ಲೆಯ ಹೊರಭಾಗದಲ್ಲಿರುವುದೆಲ್ಲಾ ಹೊರ ದೇಶದಿಂದ ಬಂದ ಧಾನ್ಯ, ಗೋಧಿ ಕೆನಡಾ ದೇಶದಿಂದ ಬಂದರೆ ಮಾತ್ರ ಪರದೇಶದ ಧಾನ್ಯ, ಸಂಯುಕ್ತ ಪ್ರಾಂತ್ಯ, ಮಧ್ಯ ಪ್ರಾಂತ್ಯಗಳಿಂದ ಬಂದರೆ ಪರದೇಶದ ಧಾನ್ಯವಲ್ಲವೆಂದು ಹೇಳುವುದು ಸರಿಯಲ್ಲ. ಏಕೆಂದರೆ ನಾವುಗಳು ಇಲ್ಲಿ ಆ ಗೋಧಿಯನ್ನು ಕೆನಡಾ ದೇಶದಿಂದ ಬಂದುದು ಎಂದು ಹೇಳಿ ಒಂದು ದರವನ್ನೂ, ಸಂಯುಕ್ತ ಪ್ರಾಂತ್ಯದಿಂದ ಬಂದದ್ದು ಎಂದು ಹೇಳಿ ಬೇರೆ ದರವನ್ನೂ ಗೊತ್ತುಮಾಡುವುದಕ್ಕಾಗುತ್ತದೆಯೇ! ಒಂದೇ ವಸ್ತುವನ್ನು ಎರಡು ಬೆಲೆಗಳಿಗೆ ಮಾರುವುದಕ್ಕಾಗುತ್ತದೆಯೇ ! ಒಂದೇ ವಿಧವಾಗಿ ಶಕ್ತಿದಾಯಕವಾದ ಪದಾರ್ಥಕ್ಕೆ ಎರಡು ಬೆಲೆಗಳನ್ನು ವಿಧಿಸುವುದು ನ್ಯಾಯವೇ? ನಮ್ಮ ದೇಶವು ಆರ್ಥಿಕ ವಿಲೀನೀಕರಣಕ್ಕೆ ಒಪ್ಪಿದ ಸಮಯದಲ್ಲಿ ನಮಗೆ ಯಾವ ಭರವಸೆಗಳನ್ನು ಕೊಟ್ಟಿದ್ದಾರೋ ಅದಕ್ಕೂ ಹೆಚ್ಚುಹೆಚ್ಚಿಗೆ ಸಹಾಯವನ್ನು ದಿನ ದಿನಕ್ಕೂ ಕೊಡುವುದು ನ್ಯಾಯ. ಅಂಥಾದ್ದರಲ್ಲಿ ಅದಕ್ಕೂ ಕಡಿಮೆ ಮಾಡಿಯಾರಿಗೂ ನೋಯಿಸಬಾರದು. ಈ ದಿವಸ ಭಾರತ ಸರ್ಕಾರದವರು ದೇಶದ ಎಲ್ಲಾ ಆರ್ಥಿಕ ಸಮಸ್ಯೆಗಳನ್ನೂ ಎದುರಿಸಬಲ್ಲವರಾಗಿದ್ದಾರೆ. ಆದರೆ ಆ ಜವಾಬ್ದಾರಿಯನ್ನು ವಹಿಸಿಕೊಳ್ಳದೆ ಆಯಾ ಪ್ರಾಂತ್ಯಗಳ ಮೇಲೆ ಹಾಕಿಬಿಟ್ಟರೆ ಪ್ರಾಂತ್ಯಗಳಿಗೆ ಬಹಳ ಕಷ್ಟವಾಗುತ್ತದೆ. ನಮ್ಮ ಆದಾಯದ ಬಾಬುಗಳು ಮುಖ್ಯವಾಗಿದ್ದವುಗಳು ರೈಲ್ವೆ, ಇಕಮ್ ಟಾಕ್ಸ್, ಮುಂತಾದುವು. ಅವೆಲ್ಲಾ ಇಂದು ನಮ್ಮ ಕೈ ಬಿಟ್ಟು ಕೇಂದ್ರಕ್ಕೆ ಹೋಗಿವೆ. ಇದರಿಂದ ನಮ್ಮ ಆರ್ಥಿಕ ಪರಿಸ್ಥಿತಿ ಬಿಕ್ಕಟ್ಟಿಗೆ ಸಿಕ್ಕಿ ಕಷ್ಟಕ್ಕೊಳಗಾಗಿದೆ. ಸಂಸ್ಥಾನದಲ್ಲಿ ಹಿಂದೆ ಯಾವ ಪದಾರ್ಥವನ್ನು ಕಷ್ಟದಿಂದ $2\frac{1}{2}$ ಸೇರಿನಂತೆ ಮಾರುತ್ತಿದ್ದೆವೋ ಅದನ್ನೇ ಇನ್ನೂ ತುಟ್ಟಿಯಾಗಿ $2\frac{1}{4}$ ಸೇರಿನಂತೆ ಮಾರಿಸಿಯಾದರೂ ಹಣವನ್ನು ಉಳಿಸಿಕೊಡತಕ್ಕ ಸಬ್ಸಿಡಿಯನ್ನು ಕಡಿಮೆ ಮಾಡಿಕೊಳ್ಳಬೇಕಾಗಿ ಬಂದಿದೆ. ಇಂಥ ಸಂದರ್ಭದಲ್ಲಿ ಭಾರತ ಸರ್ಕಾರದವರು ಅನುಸರಿಸುತ್ತಿರತಕ್ಕ ನೀತಿ ಅಷ್ಟು ಸಮರ್ಪಕವಾಗಿಲ್ಲವೆಂದು ನಾನು ಹೇಳಲೇಬೇಕು. ಹಿಂದೆ ಆರ್ಥಿಕ ವಿಲೀನೀಕರಣವಾಗುವ ಸಂದರ್ಭದಲ್ಲಿ ಈ ಸಭೆಯ ಪ್ರತಿಯೊಬ್ಬ ಸದಸ್ಯರಿಗೂ ಏನು ಭಾವನೆಯಿತ್ತೆಂದರೆ, ನಮ್ಮ ಮೈಸೂರು ದೇಶಕ್ಕೆ ಯಾವ ಸಾಮಾನು ಹೊರಗಡೆಯಿಂದ ಬರಲಿ, ಅದು ಇಂಡಿಯಾದ ಹೊರಗಿನಿಂದ ಬರಲಿ, ಅಥವಾ ಭಾರತದ ಇತರ ಕಡೆಗಳಿಂದಲೇ ಬರಲಿ ಎಲ್ಲಕ್ಕೂ ಸಬ್ಸಿಡಿಕೊಡುತ್ತಾರೆ. ತನ್ಮೂಲಕ ನಮಗೇನೂ ತೊಂದರೆಯಾಗಲಾರದು ಎಂದು. ಆದರೆ ಇಂದು ಆದು ಹೋಗಿ, ಕೇವಲ ಸಮುದ್ರದಾಚೆಯಿಂದ ಬರುವ ಸಾಮಾನುಗಳಿಗೆ ಮಾತ್ರವೇ ಸಬ್ಸಿಡಿ ಕೊಡುತ್ತೇವೆಂದು ಹೇಳುತ್ತಿದ್ದಾರೆ, ಇದು ಖಂಡಿತ ನ್ಯಾಯವಲ್ಲ. ಆದ್ದರಿಂದ ಈ ಸಭೆಯಲ್ಲಿರುವ ಪ್ರತಿಯೊಬ್ಬರೂ ನನ್ನ ಈ ನಿರ್ಣಯಕ್ಕೆ ಬೆಂಬಲ ಕೊಡುತ್ತಾರೆಂದು ತಿಳಿದಿದ್ದೇನೆ. ಏಕೆಂದರೆ, ಮೈಸೂರಿನ ಆರ್ಥಿಕ ಪರಿಸ್ಥಿತಿ ಇಷ್ಟು ಕೆಡುವುದಕ್ಕೆ ಭಾರತ ಸರ್ಕಾರದವರು ತಾವು ಕೊಟ್ಟ ಮಾತನ್ನು ಉಳಿಸಿಕೊಳ್ಳದಿರುವುದೇ ಕಾರಣವಾಗಿದೆ. ಅಂದು ಅವರು ನಮ್ಮ ಮನಸ್ಸಿನಲ್ಲಿ ಯಾವ ಒಂದು ಆಶಾಭಾವನೆಯನ್ನುಂಟುಮಾಡಿದ್ದರೋ ಅದನ್ನಿನ್ನೂ ಬೆಳೆಯುವಂತೆ ಮಾಡಲೆತ್ನಿಸಬೇಕಾದ್ದೂ ಅವರ ಕರ್ತವ್ಯ.

ಹಾಗಿಲ್ಲದೆ ಭಾರತ ಸರ್ಕಾರದವರು ಪದಪದಕ್ಕೂ ಏನೋ ಒಂದೊಂದು ಬೇಧ ಅರ್ಥಗಳನ್ನು ಕಲ್ಪಿಸಿಕೊಂಡು "ಪರದೇಶದ ವಸ್ತುಗಳು" ಎಂದರೆ ಇಂಡಿಯಾ ದೇಶದ ಹೊರಗಡೆಯಿಂದ ಬರತಕ್ಕ ಸಾಮಾನುಗಳೆಂದು ಅರ್ಥಮಾಡುವುದು ಅಷ್ಟು ಚೆನ್ನಾಗಿರುವಂತೆ ಕಾಣಲಿಲ್ಲ. ಆದರೆ ಈ ಬಗ್ಗೆ ನಮ್ಮ ಸರ್ಕಾರದವರು ಏನು ಮಾಡಿದ್ದಾರೆಂಬುದೇ ಗೊತ್ತಾಗಲಿಲ್ಲ. ಆಹಾರದ ಸಮಸ್ಯೆ ಹೀಗೆ ದಿನ ದಿನಕ್ಕೂ ವಿಷಮ ಪರಿಸ್ಥಿತಿಗೆ ಬರುತ್ತಿರುವಾಗ ಇಂಡಿಯಾ ಸರ್ಕಾರದವರು ಹೀಗೆ ಮಾಡಿರುವುದು ಯಾವ ನ್ಯಾಯ ಮತ್ತು ಧರ್ಮ? ಆದುದರಿಂದ ನಮ್ಮ ಸರ್ಕಾರದವರಿಗೆ ಹಿಂದೆ ಆರ್ಥಿಕ ವಿಲೀನೀಕರಣವಾಗುವ ಸಂದರ್ಭದಲ್ಲಿ ಏನೊಂದು ಭರವಸೆಯನ್ನು ಅವರು ನೀಡಿದ್ದರೋ ಅದಕ್ಕನುಸಾರವಾಗಿ ಅವರು ನಮಗೆ ಮೈಸೂರು ದೇಶದೊಳಕ್ಕೆ ಹೊರಗಡೆಯಿಂದ ಬರತಕ್ಕ ಪ್ರತಿಯೊಂದು ಸಾಮಾನುಗಳಿಗೂ ಸಬ್ಸಿಡಿಯನ್ನು ಕೊಡಲೇಬೇಕೆಂದು ಒತ್ತಾಯ ಪಡಿಸಬೇಕು. ಅದರಲ್ಲೂ ಮುಖ್ಯವಾಗಿ ಈ ಆಹಾರ ಸಾಮಗ್ರಿಗಳು ನಮ್ಮ ದೇಶಕ್ಕೆ ಹೊರಗಡೆಯಿಂದ ಎಂದರೆ ಎಲ್ಲಿಂದಲೇ ಬರಲಿ, ಬೊಂಬಾಯಿ, ಮದರಾಸ್, ಉತ್ತರ ಪ್ರದೇಶ ಮತ್ತು ಮಧ್ಯ ಪ್ರದೇಶ ಹೀಗೆ ಎಲ್ಲಿಂದಲೇ ಬಂದರೂ ಇವುಗಳಿಗೆಲ್ಲ ಅವರ ವಾಗ್ದಾನದ ಪ್ರಕಾರ ಸಬ್ಸಿಡಿಯನ್ನು ಕೊಡ್ಲೇತಿರಬೇಕಾಗಿದೆ. ಹಾಗೆ ಮಾಡದೆ ಹೋದರೆ, ಅವರೆದನ್ನು ತಪ್ಪು ಎಂದು ಹೇಳಲು ಇಷ್ಟಕಡಿದೆ ಅದು ನ್ಯಾಯವಿರುದ್ಧ, ಧರ್ಮವಿರುದ್ಧ ಮತ್ತು ಕರಾರಿಗೆ ವಿರುದ್ಧ ಎಂದ ಹೇಳದೇ ವಿಧಿಯಿಲ್ಲ. ಅವರ ಮಾತಿನ ಪ್ರಕಾರ ಅವರು ಈ ಆಹಾರ ಸಾಮಗ್ರಿಗಳ ಮೇಲೆ ಸಬ್ಸಿಡಿಯನ್ನು ಕೊಡ್ಲೇ ಕೊಡಬೇಕು. ಇದರಲ್ಲಿ ಯಾರದೂ ದಾಕ್ಷಿಣ್ಯವಿಲ್ಲ. ಆದರೆ ಈಗ ಅವರು ಆ ಸಬ್ಸಿಡಿಯನ್ನು ಕೊಡದೇ ಇರುವುದರಿಂದ ಅಥವಾ ಎಷ್ಟು ಕೊಡಬೇಕಾಗಿತ್ತೋ ಅಷ್ಟನ್ನೂ ಕೊಡದೆ ಇರುವುದರಿಂದ ಕಡಿಮೆ ಬೆಲೆಗೆ ಮಾರುತ್ತಿದ್ದ ಅಕ್ಕಿಯ ಬೆಲೆಯನ್ನು, ಈಗ ನೀವು ಜಾಸ್ತಿ

ಮಾಡಿ ತನ್ಮೂಲಕ ಪ್ರಜೆಗಳ ಆಕ್ಷೇಪಣೆಗೆ ಗುರಿಯಾಗಿದ್ದೀರಿ. ಆದರೆ ನ್ಯಾಯವಾಗಿ ಕೇಂದ್ರದವರು ನಮಗೆ ಕೊಡಬೇಕಾಗಿದ್ದ ಸಬ್ಸಿಡಿಯನ್ನು ಕೊಡದೆಹೋದುದರಿಂದ ಸರ್ಕಾರಕ್ಕೆ ಹೆಚ್ಚಿನ ಲಕ್ಷಾನಾಗಲು ಪ್ರಾರಂಭವಾಯಿತು. ಹೀಗೆ ಲುಕ್ಷಾನಾಗುತ್ತಿದ್ದರೆ ಯಾವ ಸರ್ಕಾರವಾದರೆ ತಾನೆ ಹೀಗೆ ಅದನ್ನೆಲ್ಲ ಹೊರಲಕ್ಕೆ ಸಾಧ್ಯ? ಅದಕಾರಣ ಇಂಡಿಯಾ ಸರ್ಕಾರದವರು ಈ ಆಹಾರ ಸರಬರಾಯಿ ಬಗ್ಗೆ ಎಲ್ಲ ಸಾಮಾನುಗಳ ಮೇಲೂ ಸಬ್ಸಿಡಿಯನ್ನು ಕೊಚ್ಚೇತೀರಬೇಕೆಂಬುದಾಗಿ ನಮ್ಮ ಸರ್ಕಾರದವರು ಅವರನ್ನು ಒತ್ತಾಯ ಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

Mr. SPEAKER.—Resolution moved:—

"That this Assembly is of the opinion that the Central Government be requested to grant subsidy on all food commodities imported into Mysore whether from other States in India or from other foreign countries".

ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—ಮಾನ್ಯ ಅಧ್ಯಕ್ಷರೇ, ಶ್ರೀ ಭೀಮಪ್ಪನಾಯಕರು ಈ ನಿರ್ಣಯವನ್ನು ಸಭೆಯ ಮುಂದೆ ಮಂಡಿಸಿದುದಕ್ಕಾಗಿ ನಾನು ಅವರಿಗೆ ತುಂಬಾ ಕೃತಜ್ಞನಾಗಿದ್ದೇನೆ. ಈ ಒಂದು ಸಂದರ್ಭ ಒದಗಿರುವಾಗಲೇ ನಾನು ತಮ್ಮೆಲ್ಲರಿಗೂ ಭಾರತ ಸರ್ಕಾರದವರು ನಮಗೆ ಎಷ್ಟರ ಮಟ್ಟಿಗೆ ಸಹಾಯ ಮಾಡುತ್ತೇವೆಂದು ಹೇಳಿದ್ದರು ಮತ್ತು ಅವುಗಳನ್ನು ನಾವು ಎಷ್ಟರ ಮಟ್ಟಿಗೆ ನಂಬಿಕೊಂಡು ಕೆಲಸಗಳನ್ನು ಹೇಗೆ ಹೇಗೆ ಸಾಧಿಸಿದ್ದೇವೆ ಎಂಬ ಬಗ್ಗೆ ಕೆಲವು ಅಂಶಗಳನ್ನು ಸ್ಪಷ್ಟಪಡಿಸಲು ಆಶಿಸುತ್ತೇನೆ. ಇದರ ಜೊತೆಯಲ್ಲೇ ಹಾಗೇ. 1943-44 ರಿಂದಲೂ ನಮ್ಮ ಮೈಸೂರು ದೇಶಕ್ಕೆ ಆಹಾರ ಸಾಮಗ್ರಿಗಳನ್ನು ಹೊರಗಡೆಯಿಂದ ಜಾಸ್ತಿಬೆಲೆಗೆ ಕೊಂಡು ತಂದು ಅವುಗಳನ್ನು ಇಲ್ಲಿ ಕಡಿಮೆ ಬೆಲೆಗೆ ಮಾರಾಟಮಾಡಿರುವುದರಿಂದ ನಮಗೆ ವರ್ಷವರ್ಷವೂ ಎಷ್ಟರ ಮಟ್ಟಿಗೆ ನಷ್ಟವಾಗುತ್ತಿದೆಯೆಂಬ ಅಂಶವನ್ನು ಸಹ ಸಭೆಯ ಮುಂದಿಡಲು ಆಶಿಸುತ್ತೇನೆ. ನಾವು ಹೊರಗಡೆಯಿಂದ ಆಹಾರ ಪದಾರ್ಥಗಳನ್ನೂ ಕೊಂಡು ತಂದು ಇಲ್ಲಿ ಕಡಿಮೆ ಬೆಲೆಗೆ ಮಾರಾಟ ಮಾಡಿದ್ದರಿಂದ ಉಂಟಾದ ನಷ್ಟವು ಈ ರೀತಿಯಾಗಿದೆ—

1943-44ರಲ್ಲಿ 71,591 ರೂಪಾಯಿಗಳು; 1944-45ರಲ್ಲಿ 28,17,75 ರೂಪಾಯಿಗಳು; 1945-46ರಲ್ಲಿ 30,12,440 ರೂಪಾಯಿಗಳು; 1946-47ರಲ್ಲಿ 1,75,76,124 ರೂಪಾಯಿಗಳು; 1947-48ರಲ್ಲಿ 75,23,052 ರೂಪಾಯಿಗಳು; 1948-49ರಲ್ಲಿ 1,50,61,703 ರೂಪಾಯಿಗಳು ಮತ್ತು 1949-50ಕ್ಕೆ 1,26,00,000 ರೂಪಾಯಿಗಳು; ಹೀಗೆ ಒಟ್ಟು 5,86,62,661 ರೂಪಾಯಿಗಳ ಲುಕ್ಷಾನಾಗಿದೆ. ಈ ನಷ್ಟದ ಜೊತೆಗೆ ಆಹಾರ ಇಲಾಖೆಯ ಶಿಬ್ಬಂದಿಗಾಗಿ ವರ್ಷ ಒಂದಕ್ಕೆ ನುಮಾರು 30 ಲಕ್ಷ ರೂಪಾಯಿಗಳು ಖರ್ಚಾಗಿವೆ. ಇಂಡಿಯಾ ಸರ್ಕಾರದವರು ನಮಗೆ 1943ನೆಯ ಇಸವಿ ಅಕ್ಟೋಬರ್ ತಿಂಗಳ ತನಕ ಯಾವ ಸಬ್ಸಿಡಿಯನ್ನೂ ಕೊಡುತ್ತಿರಲಿಲ್ಲ. ಅವರಿಂದ ಒಂದು ಕಾಸೂ ನಮಗೆ ಅಲ್ಲಿಯವರೆಗೆ ಬಾರದಿದ್ದರೂ ನಾವು ಇಲ್ಲಿ ಆಹಾರ ಪದಾರ್ಥಗಳನ್ನು ಕಮ್ಮಿ ಬೆಲೆಗೆ ಮಾರಾಟ ಮಾಡಿದ್ದೇವೆ. ಆದರೆ 1948ನೆಯ ಅಕ್ಟೋಬರ್ ತಿಂಗಳಿಂದೀಚೆಗೆ ಕೇಂದ್ರದವರು ಸ್ವಲ್ಪ ಸಹಾಯ ನೀಡುತ್ತಿದ್ದಾರೆ. ಎಂದರೆ 1948ನೆಯ ಅಕ್ಟೋಬರಿನಿಂದ ತಾ॥ 1-3-50 ರ ತನಕ ಅವರು ಹೊರದೇಶದ ಆಹಾರ ಪದಾರ್ಥಗಳ ಬೆಲೆಯ ಮೇರೆ ಶೇಕಡ 50ರಷ್ಟು ಸಬ್ಸಿಡಿಯನ್ನು ನಮಗೆ ಕೊಡುತ್ತಾ ಬಂದಿದ್ದಾರೆ. ಇದೇ ರೀತಿ ತಾ॥ 31-3-50 ರ ತನಕವೂ ಕೊಟ್ಟು ತಾ॥ 1—4—50 ರಿಂದ ಈ ದಿವಸದವರೆಗೂ ಶೇಕಡ 75ರಷ್ಟು ಸಬ್ಸಿಡಿಯನ್ನು ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಹೀಗೆ ಕೇಂದ್ರ ಸರ್ಕಾರದವರು ನಮಗೆ 1948ನೆಯ ಅಕ್ಟೋಬರ್ ತಿಂಗಳಿನಿಂದ ತಾ॥ 31—3—50 ರವರೆಗೆ ಕೊಟ್ಟಿರತಕ್ಕ ಸಬ್ಸಿಡಿ ರೂ. 63,20,600 ಮಜಾ ಹೋಗುತ್ತ, ನಮ್ಮ ಸಂಸ್ಥಾನಕ್ಕೆ ಇಲ್ಲಿಯವರೆಗೆ ಆಗಿರತಕ್ಕ ನಷ್ಟ 8,50,00,000 ರೂಪಾಯಿಗಳು ಆಹಾರ ಇಲಾಖೆಯ ಶಿಬ್ಬಂದಿಯವೆಚ್ಚ 30 ಲಕ್ಷ. ಜುಮ್ಲಾ 8½ ಕೋಟಿ ರೂಪಾಯಿಗಳು ನಮಗೆ ನಷ್ಟವಾಗಿದೆ. ಇಷ್ಟನ್ನು ನಮ್ಮ ಸರ್ಕಾರ ಹೊರುವುದಕ್ಕೆ ಖಂಡಿತ ಸಾಧ್ಯವಿಲ್ಲ. ಯಾವ ಸರ್ಕಾರಕ್ಕೂ ಸಾಧ್ಯವಿಲ್ಲ. ಆಹಾರ ಪದಾರ್ಥಗಳನ್ನು ಹೀಗೆ ವರ್ಷವರ್ಷ ಕೊಂಡು ಒದಗಿಸುವುದು ಬಹಳ ಕಷ್ಟವಾದ ಕೆಲಸ. ಒಂದು ಅಂಶವನ್ನು ನಾನೀಗ ಮಾನ್ಯ ಸದಸ್ಯರುಗಳಿಗೆ ಸ್ಪಷ್ಟಪಡಿಸಬೇಕಾಗಿದೆ. ಕೇಂದ್ರ ಸರ್ಕಾರದವರು ನಾವು ಕೊಂಡುಕೊಳ್ಳುವ ಎಲ್ಲಾ ಪದಾರ್ಥಗಳಿಗೂ ಸಬ್ಸಿಡಿ ಕೊಡುತ್ತೇವೆಂದು ಹೇಳಿರಲಿಲ್ಲ. ಮತ್ತು ಆ ರೀತಿ ಅವರು ಒಪ್ಪಂದವನ್ನೂ ಮಾಡಿಕೊಂಡಿಲ್ಲ. ಈಗ ತಾವು ತಿಳಿಸಿದ ಅಂಶಗಳನ್ನೆಲ್ಲಾ ನಾವು ಗಮನದಲ್ಲಿಟ್ಟುಕೊಂಡು ಅವರನ್ನು ಒತ್ತಾಯ ಮಾಡೇ ಮಾಡಲಾಗುತ್ತೆ. ಈ ಬಗ್ಗೆ ಯಾರೂ ಭಿನ್ನಾಭಿಪ್ರಾಯ ಪಡುವುದಿಲ್ಲ. ಈಗಾಗಲೇ ನಾವು ಅವರಿಗೆ ಮೈಸೂರು ದೇಶಕ್ಕೆ ಹೊರಗಡೆಯಿಂದ ತರಿಸಿಕೊಳ್ಳುವ ಎಲ್ಲ ಆಹಾರ ಪದಾರ್ಥಗಳಿಗೂ ಸಬ್ಸಿಡಿಯನ್ನು ಕೊಡಲೇ ಬೇಕೆಂದೂ ಪ್ರಾರ್ಥನೆ ಮಾಡಿಕೊಂಡಿದ್ದೇವೆ.

ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆತಾನೆ ದೆಹಲಿಯಲ್ಲಿ ನಡೆದ ಆಹಾರ ಸಚಿವರುಗಳ ಸಮ್ಮೇಳನದಲ್ಲಿ ಕೂಡ ಬೇಕಾದಷ್ಟು ಚೌಕಾಸಿಮಾಡಿ ಅವರು ಸಬ್ಸಿಡಿಯನ್ನು ಕೊಡಬೇಕೆಂಬುದಾಗಿ ಒತ್ತಾಯ ಪೂರ್ವಕದಿಂದ ತಿಳಿಸಿದ್ದಾರೆ. ಇದು ಎಷ್ಟರಮಟ್ಟಿನ ಗಂಭೀರವಾದ ಜವಾಬ್ದಾರಿಯುಳ್ಳದ್ದು ಎಂಬುದನ್ನು ಅವರು ಅರಿತಿದ್ದಾರೆ ಸಂಸ್ಥಾನಗಳವರು ಇದನ್ನು ವಹಿಸಲು ಬಹಳ ಕಷ್ಟಪಡೆದೆ. ಕೇಂದ್ರದವರ ಸಹಾಯ ಅಗತ್ಯವಾಗಿ ಬೇಕೇಬೇಕು. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಒತ್ತಾಯದಿಂದಲೇ ನಮಗೆ 1948 ನೆಯ ಅಕ್ಟೋಬರಿನಿಂದ ಅವರು ಕೊಂಚ ಕೊಂಚ ಸಹಾಯ ಮಾಡಲು ಪ್ರಾರಂಭವಾದದ್ದು. ನಾನಾಗಲೇ ತಿಳಿಸಿದ ಹಾಗೆ ತಾ॥ 31—3—50 ರ ವರೆಗೆ ಶೇಕಡ 50 ರಂತೆ ಕೊಟ್ಟರು. ತಾ॥ 1—4—50 ರಿಂದ ಶೇಕಡ 75 ರಷ್ಟನ್ನು ಕೊಡುತ್ತಿದ್ದಾರೆ. ಮೈಸೂರಿಗೆ ಭಾರತದ ಹೊರಗಡೆಯಿಂದ ಬರುವ ಪ್ರತಿಯೊಂದು ಆಹಾರ ವಸ್ತುವಿಗೂ ಅವರು ಸಬ್ಸಿಡಿ ಕೊಡುತ್ತಿದ್ದಾರೆ. ಶೇಕಡ 50 ರಂತೆ ತಾ॥ 1—4—50ರ ತನಕ ಕೊಟ್ಟು ಈಗ ಅವರು ಶೇಕಡ 75, ನಾವು 25 ರಂತೆ ಹಾಕಿ ವರ್ಷವರ್ಷವೂ ನಷ್ಟವನ್ನು ಅನುಭವಿಸಬೇಕಾಗಿದೆ.

ಈ ಮಧ್ಯೆ ನಮ್ಮ ದೇಶದಲ್ಲೇ ಬೆಳೆಯನ್ನು ಹೆಚ್ಚಿಸಿ ನಮಗೆ ಆಗತಕ್ಕ ಆಹಾರ ಸಾಮಗ್ರಿಗಳ ವಿಷಯದಲ್ಲಿ ನಾವು ಸ್ವಪರಿಪೂರ್ಣತೆಯನ್ನು ಪಡೆಯಬೇಕೆಂಬ ಯೋಜನೆಯೊಂದು ಬೇರೆ ಇದೆ. ಈ ಭಾಗದಲ್ಲಿ ನಾವು ಪ್ರತಿವರ್ಷವೂ ಹೊರಗಿನವರಿಗೆ ಒಂದ ಕೋಟಿ ರೂಪಾಯಿಗಳನ್ನು ತೆರುತ್ತಿದ್ದೇವೆ. ಇದರಿಂದ ಇಡೀ ಭಾರತವೇ ಬಹಳ ಕಷ್ಟಕ್ಕೀಡಾಗಿದೆ. ಈ ಕಾರಣದಿಂದ ಸಾಧ್ಯವಾದ ಮಟ್ಟಿಗೂ ಹೊರಗಡೆಯಿಂದ ತರಿಸತಕ್ಕದ್ದನ್ನು ಬಿಟ್ಟುಬಿಡಬೇಕೆಂದಿದೆ. ಅದಕ್ಕೆ ಬದಲಾಗಿ

ನಮ್ಮ ಇಂಡಿಯಾ ದೇಶದಲ್ಲಿಯೇ ಎಲ್ಲೆಲ್ಲಿ 'ಸರ್‌ಪ್ಲೆಸ್' ಇರುತ್ತದೋ ಅಲ್ಲಿಂದಲೇ ಅದನ್ನು ತರಿಸುವ ಏರ್ಪಾಡು ಮಾಡಿದ್ದೇವೆ. ಕೇಂದ್ರದವರ ತೀರ್ಮಾನವೂ ಕೂಡ ಹೀಗ್ಗೇ ಇದೆ.

ಸಿ.ಪಿ., ಯು.ಪಿ., ಅಸ್ಸಾಂ, ಬಿಹಾರ್ ಮತ್ತು ಒರಿಸ್ಸಾ ಈ ಕಡೆಯಿಂದ ನಮಗೆ ಕೊಡುವುದರಲ್ಲಿ ಏನೂ ಕೊಡುತ್ತಿಲ್ಲ. ಯು. ಪಿ. ಇಂದ ಅಕ್ಕಿ ಬಂದಾಗ ಐದು ಸಾವಿರ ಟನ್‌ಗೆ 5 ಸಾವಿರ ರೂಪಾಯಿಗಳ ಸಬ್‌ಸಿಡಿ ಆಗಿದೆ. ಇದು ಮಾನ್ಯ ಸದಸ್ಯರಿಗೆ ಗೊತ್ತಿರಬೇಕು. ಮದ್ರಾಸಿಗೆ ಒಂದು ಕೋಟಿ ರೂಪಾಯಿಗಳ ಸಬ್‌ಸಿಡಿ ಆಗಿ ಅವರು ಪ್ರೊಟೆಸ್ಟ್ ಮಾಡಿದ್ದಾರೆ. ಯು. ಪಿ. ಅಕ್ಕಿ ಬೆರೆ ಬಹಳ ಜಾಸ್ತಿ ಎಂದು ಕೇಂದ್ರಕ್ಕೆ ಹೇಳಿದೆ. ಅದು ಸಣ್ಣ ಅಕ್ಕಿಯೇ ಆಗಿರಬಹುದು, ಚೆನ್ನಾಗಿರಬಹುದು, ನಮಗೆ ಅದು ಬೇಕಾಗಿಲ್ಲ, ನಮ್ಮಲ್ಲಿ ಬೆಳೆಯುವುದೇ ಬೇಕು, ಬೆರೆ ಜಾಸ್ತಿಯಾದ್ದರಿಂದ ಸಾಧ್ಯವಾದ ಮಟ್ಟಿಗೆ ಬೇರೆ ಕಡೆಯಿಂದ ತರಿಸಿಕೊಡಬೇಕೆಂದು ತಿಳಿಸಲಾಗಿದೆ. ಪದೇಪದೇ ಈ ವಿಚಾರವನ್ನು ಒತ್ತಾಯ ಮಾಡುತ್ತಿದ್ದೇವೆ. ಹೊರಗಡೆಯಿಂದ ಧಾನ್ಯಗಳನ್ನು ತಂದರೆ ಅದರಿಂದಾಗುವ ನಷ್ಟವನ್ನು ಕೇಂದ್ರ ಸರ್ಕಾರದವರೇ ಕೊಡಬೇಕೆಂದು ಪ್ರಾರ್ಥನೆ ಮಾಡಿದೆ. ಈ ವಿಷಯು ಇಲ್ಲಿ ಚರ್ಚೆಯಾಗಿರುವುದರಿಂದ ಮಾನ್ಯ ಸದಸ್ಯರ ಸಂಪೂರ್ಣ ಬೆಂಬಲ ಇದೆಯೆಂದೂ, ಈ ಅಂಶವನ್ನು ಪ್ರತಿಪಾದಿಸುವುದಕ್ಕೆ ಅವರ ಉತ್ತೇಜನ ಮತ್ತು ಬೆಂಬಲವಿದೆಯೆಂದೂ ತಿಳಿದಿದ್ದೇನೆ. ಈ ವಿಚಾರವನ್ನು ವಿಶದವಾಗಿ ಕೇಂದ್ರ ಸರ್ಕಾರಕ್ಕೂ ಮತ್ತು ಪೊನ್ನೆ ಆಹಾರ ಮಂತ್ರಿಗಳ ಮತ್ತು ಮುಖ್ಯಮಂತ್ರಿಗಳ ಸಮ್ಮೇಳನ ನಡೆದಾಗ ಅಲ್ಲೂ ತಿಳಿಸಲಾಗಿದೆ. ಆದರೆ ಸಬ್ಸಿಡಿ ವಿಚಾರವು ಈಗ ತೀರ್ಮಾನ ಮಾಡಬೇಕಾಗಿದ್ದುದು ಮುಂದಕ್ಕೆ ಹೋಗಿದೆ ಎಂದು ಇಷ್ಟು ಹೇಳಿ ಶ್ರೀ ಭೀಮಪ್ಪನಾಯಕರು ತಮ್ಮ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಎ. ಭೀಮಪ್ಪನಾಯಕರು.—ನಾನು ಕೇಂದ್ರ ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳಬೇಕೆಂದು ಕೇಳಿದ್ದೇನೆ. ಅದ್ದರಿಂದ ನಿರ್ಣಯವನ್ನು ಒಪ್ಪಿಕೊಳ್ಳಬಹುದಲ್ಲವೆ ?

Sri T. MARIAPPA.—I can assure the Hon'ble Member that the hope that is expressed will be brought to the notice of the Central Government.

Sri H. C. DASAPPA (Minister for Finance and Industries).—I do not now what my friend, Sri Bheemappa Naik means. The Hon'ble Member is asking to make a representation and that has been made and will be continued to be made. There is no difference.

Sri A. BHEEMAPPA NAIK.—Therefore you accept the resolution, Sir ?

Mr. SPEAKER.—There is no snch thing as accepting the resolution; either you must press or withdraw it. It will have to be put to the House if it is pressed. If not, it will have to be withdrawn.

Sri A. BHEEMAPPA NAIK.—Since they say that representation is being made and there is no difference, I will withdraw the resolution with the permission of the House.

The resolution was, by leave of the Assembly, withdrawn.

Mr. SPEAKER.—The next resolution No. 8, stands in the name of Janab J. Mahomed Imam.

Janab J. MAHOMED IMAM.—I am not moving my resolution.

Mr. SPEAKER.—The next resolution, No. 9, stands in the name of Sri S. Kariappa.

Sri S. KARIAPPA.—I am not moving the resolution.

Mr. SPEAKER.—The next resolution, No. 10, stands in the name of Sri G. Veerappa.

RESOLUTION No. 10.

Levying Sales-Tax at single point in Mysore.

Sri G. VEERAPPA (Chitaldrug District—General).—Sir I beg to move.

"That this Assembly is of the opinion that the calculation of turnover for purposes of levying sales-tax in Mysore should be only at one stage or point (single point) and not at several points."

ಸ್ವಾಮಿ, ಮಾರಾಟ ತೆರಿಗೆಯು ಮೊದಲು ಪ್ರಾರಂಭವಾಗಿದ್ದು ಮದರಾಸಿನಲ್ಲಿ. ಮೈಸೂರಿನಲ್ಲಿ 1948ನೆಯ ಇಸವಿಯಲ್ಲಿ ಜಾರಿಗೆ ಬಂದಿದೆ. ಈಗಿರುವ ಪ್ರಕಾರ turnover ಲೆಕ್ಕಾಚಾರ ಮಾಡುವಾಗ ಏನಾಗಿದೆಯೆಂದರೆ ಒಂದು ಮಾಲು ಮಾರಾಟವಾದರೆ ಎಷ್ಟು ಕೈಯಿಂದ ಕೈಗೆ ಮಾರಾಟವಾಗುತ್ತದೆಯೋ ಅಷ್ಟು ಹಂತಗಳಲ್ಲೂ ಮಾರಾಟ ತೆರಿಗೆಯನ್ನು ವಸೂಲು ಮಾಡಬೇಕೆಂದಿದೆ. ಅದ್ದರಿಂದ ಇದರಿಂದ ಬಹಳ ಅನಾನುಕೂಲವಾಗಿದೆ. ಈಗ ಎರಡು ವರ್ಷಗಳಿಂದ ಇದು ಅನುಭವಿಸಿದ್ದಾಗಿದೆ. ಈ ವಿಚಾರದಲ್ಲಿ ಸಾರ್ವಜನಿಕರಿಂದಲೂ ಮತ್ತು ವರ್ತಕರಿಂದಲೂ ಪದೇಪದೇ ಸರ್ಕಾರಕ್ಕೆ ಮನವಿ ಬಂದಿದೆ. ಮುಖ್ಯವಾಗಿ ದೊಡ್ಡ ತೊಂದರೆಯಾಗಿರುವುದು ಉಪಯೋಗಿಸುವವರಿಗೆ. ಆ ದೃಷ್ಟಿಯಿಂದ ನೋಡುವುದಾದರೆ ಅನೇಕ ಕೈಗಳಿಂದ ಅನೇಕಸಾರಿ ಈ ತೆರಿಗೆಯನ್ನು ಕೊಡುವುದರಿಂದ ಕೊನೆಯಕೈ ಮುಟ್ಟುವ ಹೊತ್ತಿಗೆ ಬಹಳ ದುಬಾರಿ ಬೆಲೆಯಾಗಿ ಮಾಲು ಕೊಂಡುಕೊಳ್ಳಬೇಕು, ಇದರಿಂದ ಬಳಸುವವರಿಗೆ ಬಹಳ ಅನಾನುಕೂಲವಾಗಿದೆ.

ಆಮೇಲೆ ಈಗಿರುವ ಪದ್ಧತಿಯಿಂದ ಸರ್ಕಾರಕ್ಕೂ ಅನಾನುಕೂಲ. ಮೊನ್ನೆತಾನೆ ಪ್ರಶ್ನೆ ಕೇಳಿದಾಗ ಸಿಂಗಲ್‌ಪಾಯಿಂಟ್ ಮತ್ತು ಮಲ್ಟಿಪಾಯಿಂಟ್‌ನಿಂದ ಬರುವ ವರಮಾನದಲ್ಲಿ ಹೆಚ್ಚು ಕಡಿಮೆಯಾಗುವುದಿಲ್ಲ ವೆಂದು ಸರ್ಕಾರದವರು ಹೇಳಿದರು. ಆದರೆ ತೆರಿಗೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಇದರಿಂದ ಅವಕಾಶವಿದೆ. ಮಾರಾಟ ತೆರಿಗೆಯ ಲೆಕ್ಕವನ್ನು ತನಿಖೆ ಮಾಡುವುದು ಕಷ್ಟ. ಅನೇಕರು ಇದನ್ನು ಲೆಕ್ಕದಲ್ಲಿ ತೋರಿಸುವುದಿಲ್ಲ; ಬಿಲ್ಲೂ ಕೊಡುವುದಿಲ್ಲ; ಬಿಲ್ಲಲ್ಲದೆ ಹಾಗೆಯೇ ವ್ಯಾಪಾರ ನಡೆಸುತ್ತಾರೆ. ಇದನ್ನು ಕಂಡುಹಿಡಿಯುವುದು ಕಷ್ಟ. ಈ ಪದ್ಧತಿಯಿಂದ ಕರ್ಫ್ಯೂಷ್ ಬಹಳ ಜಾಸ್ತಿಯಾಗಿದೆ.

ಇದೂ ಅಲ್ಲದೆ ಲಂಚರುಷುವತ್ತು ಇದರಿಂದ ಹೆಚ್ಚಾಗಿದೆ. ಯಾವ ಸ್ಟೇಜ್‌ನಲ್ಲಿ ತೆರಿಗೆ ವಸೂಲಾಗಿಲ್ಲವೆಂದು ಕಾಣುತ್ತದೆಯೋ ಅಲ್ಲ ಪರೀಕ್ಷಾಗಿ ಅದನ್ನು ಬಿಟ್ಟುಬಿಡಬಹುದು. ಅದರಿಂದ ಬಹಳ ಅನಾನುಕೂಲವಾಗಿದೆ. ಸರ್ಕಾರದವರಲ್ಲಿ ಈ ವಿಚಾರವಾಗಿ ಪದೇಪದೇ ಒತ್ತಾಯ ಮಾಡುತ್ತಿದ್ದೇವೆ. ಸೆಕ್ಷನ್ ಮೂರರಲ್ಲಿ ಈ ರೀತಿ ಇದೆ:—

"Subject to the provisions of this Act:—

(a) every dealer shall pay for each year a tax on his total turnover for such year; and

(b) the tax shall be calculated at the rate of three pies for every rupee on such turnover.—

EXCEPTION.—In the case of textiles manufactured by mills and power looms, however, the tax shall be calculated at a single point at the rate of six pies for every rupee on such turnover and levied when sold by a person who is the first dealer in Mysore.

ಬಟ್ಟೆಗೆ ಮಾತ್ರ ವಿನಾಯಿತಿ ತೋರಿಸಿದೆ. ಸಿಂಗಲ್ ಪಾಯಿಂಟ್‌ಗೆ 6 ಕಾಸಿನಂತೆ ವಸೂಲು ಮಾಡಬೇಕೆಂದು ಹೇಳಿದೆ. ಅದನ್ನು—ಸಾಮಾನ್ಯವಾಗಿ—ಎಲ್ಲಕ್ಕೂ ಅನ್ವಯಿಸುವಂತೆ ಮಾಡಿ ಪ್ರತಿಯೊಂದು ಮಾಲಿಗೂ ಒಂದೇ ಸ್ಟೇಜಿನಲ್ಲಿ ವಸೂಲು ಮಾಡಬೇಕೆಂದು ತಿದ್ದುಪಡಿ ಮಾಡಿದರೆ ಸಾಕು. ಬೊಂಬಾಯಿ ಮತ್ತು ಬಂಗಾಳ ಈ ಎರಡು ಪ್ರಾಂತಗಳಲ್ಲಿ ಸಿಂಗಲ್‌ಪಾಯಿಂಟ್ ಪ್ರಕಾರ ವಸೂಲು ಮಾಡುವ ಪದ್ಧತಿಯಿದೆ. ಆದರೂ ಉತ್ಪತ್ತಿಯೂ ಚೆನ್ನಾಗಿ ಆಗುತ್ತಿದೆ; ಕ್ರಮವಾಗಿಯೂ ನಡೆಯುತ್ತಿದೆ. ಅದೂ ಅಲ್ಲದೆ ಮಲ್ಟಿ ಪಾಯಿಂಟ್‌ನಿಂದ ಸಿಬ್ಬಂದಿ ಹೆಚ್ಚುತ್ತದೆ. ಕೆಲಸ ಹೆಚ್ಚು ಮತ್ತು ಸರ್ಕಾರಕ್ಕೆ ಖರ್ಚೂ ಜಾಸ್ತಿ. ಸಿಂಗಲ್ ಪಾಯಿಂಟ್ ಆದರೆ ಸಿಬ್ಬಂದಿ ಕಡಮೆ, ಖರ್ಚೂ ಕಡಮೆ. ಈ ಎಲ್ಲಾ ದೃಷ್ಟಿಯಿಂದ ಸಿಂಗಲ್‌ಪಾಯಿಂಟ್ ಮಾಡಿದರೆ ಬಹು ಸುಲಭ. ಲಾಭವೂ ಬರುತ್ತದೆ. ಹೆಚ್ಚು ತೊಂದರೆಯೂ ಇರುವುದಿಲ್ಲ. ಆದರೆ ಸಿಂಗಲ್‌ಪಾಯಿಂಟ್ ಅಥವಾ ಮಲ್ಟಿ ಪಾಯಿಂಟ್ ಮಾಡಿದರೂ ಮೂರುಕಾಸು ಮಾತ್ರ ಬೀಳುತ್ತದೆಯೆಂದು ಹೇಳಿದ್ದಾರೆ. ಬೊಂಬಾಯಿನಲ್ಲಿರುವಂತೆ ದರವನ್ನು ಸ್ವಲ್ಪ ಜಾಸ್ತಿ ಮಾಡಿದರೆ ಒಂದೇ ಸ್ಟೇಜಿನಲ್ಲಿ ವಸೂಲಾಗುವುದರಿಂದ ಹೆಚ್ಚಾಗಿ ಕಾಣುವುದೂ ಇಲ್ಲ, ಬರಬೇಕಾದಷ್ಟು ಹಣವೂ ಬರುತ್ತದೆ. ಈ ಎಲ್ಲಾ ದೃಷ್ಟಿಯಿಂದ ಸಿಂಗಲ್ ಪಾಯಿಂಟ್ ಮೇರೆ ಹಾಕುವುದೇ ಸೂಕ್ತ ಎಂಬುದು ಸಾರ್ವಜನಿಕರ ಅಭಿಪ್ರಾಯ. ಅದು ಸರ್ಕಾರದವರಿಗೂ ಗೊತ್ತಿರಬಹುದು. ಆದ್ದರಿಂದ ಈ ನಿರ್ಣಯವನ್ನು ದಯವಿಟ್ಟು ಒಪ್ಪಿಕೊಳ್ಳಬೇಕು.

Mr. SPEAKER.—Resolution moved:

"That this Assembly is of the opinion that the calculation of turnover for purposes of levying sales-tax in Mysore should be only at one stage or point (single point) and not at several points."

ಶ್ರೀ ಎಸ್. ಸಿ. ಸೂರ್ಯನಾರಾಯಣ ಶೆಟ್ಟರು (ಹಾಸನ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಜನಸಾಮಾನ್ಯಕ್ಕೆ ಏನು ತೊಂದರೆಯಿದೆ, ವರ್ತಕರಿಗೆ ಏನು ತೊಂದರೆಯಿದೆ ಎಂಬುದನ್ನು ಹೇಳಬೇಕೆಂದು ನಿಂತಿದ್ದೇನೆ. ಸಿಂಗಲ್ ಪಾಯಿಂಟ್ ಮಾಡಿದರೆ ಸರ್ಕಾರಕ್ಕೆ ಉತ್ಪತ್ತಿ ಕಡಿಮೆಯಾಗುತ್ತದೆಂದು ಒಂದುವೇಳೆ ಹೇಳಬಹುದು. ಆದ್ದರಿಂದ ಸಿಂಗಲ್ ಪಾಯಿಂಟ್‌ಗೆ 3 ಕಾಸು ಮಾಡುವುದಕ್ಕೆ ಬದಲಾಗಿ 6 ಕಾಸು ಅಥವಾ ಒಂದಾಣೆ ಮಾಡಿದರೂ ಜನಸಾಮಾನ್ಯರೂ, ವರ್ತಕರೂ ಕೊಡುವುದಕ್ಕೆ ಸಿದ್ಧವಾಗಿದ್ದಾರೆ ಎಂದು ಸ್ಪಲಹೆ ಮಾಡುತ್ತೇನೆ. ಅದೂ ಅಲ್ಲದೆ ಪ್ರಾಮಾಣಿಕರಾಗಿರುವ ವರ್ತಕರಿಗೂ ತೊಂದರೆಯಾಗಿದೆ. ಕೆಲವು ವರ್ತಕರು ರೈಲು ಮುಖಾಂತರ ಪದಾರ್ಥಗಳನ್ನು ತರಿಸಿದರೆ ಲೆಕ್ಕ ಸಿಕ್ಕಿ ಮಾರಾಟ ತೆರಿಗೆ ಕೊಡಬೇಕಾಗುವುದೆಂದು ರಾರಿಗಳ ಮುಖಾಂತರ ತರಿಸಿ ಸರ್ಕಾರಕ್ಕೆ ಬರುವ ಆದಾಯವನ್ನು ನಷ್ಟ ಮಾಡುತ್ತಿದ್ದಾರೆ. ಆದ್ದರಿಂದ ಮಾನ್ಯ ಆರ್ಥಿಕ ಸಚಿವರು ಉತ್ಪತ್ತಿ ಕಡಿಮೆಯಾಗುತ್ತದೆಂದು ಶಂಕೆ ಪಡಬೇಕಾಗಿಲ್ಲ. ದರವನ್ನು ಒಂದಾಣೆ ಮಾಡಿದರೆ ಸಿಂಗಲ್ ಪಾಯಿಂಟಿನಿಂದಲೇ ಅವರಿಗೆ ಈಗ ಬರುವಷ್ಟು ಉತ್ಪತ್ತಿಯೂ ಬರುತ್ತದೆ; ಜನರೂ ಸಂತೋಷದಿಂದ ಕೊಡುತ್ತಾರೆ. ಹಾಗೆ ಮಾಡದೇ ಇರುವುದರಿಂದ ಪ್ರಜಾನರ್ಕಾರದ ಮೇಲೆ ಜನರು ಬಹಳ ಅಪಪ್ರಚಾರ ಮಾಡುವುದಕ್ಕೆ ಹೊರಟಿದ್ದಾರೆ. ಜನರು ಒಂದು ರೀತಿಯಲ್ಲಿ ಮಾತನಾಡಿಕೊಳ್ಳಲೂ ಅವಕಾಶವಾಗಿದೆ. ಮಾರಾಟ ತೆರಿಗೆಯು ಭಾರತದ ಎಲ್ಲಾ ಪ್ರಾಂತಗಳಲ್ಲೂ ಇದೆ. ಆದರೆ ಬೊಂಬಾಯಿ, ಬಂಗಾಳಗಳಲ್ಲಿ ಸಿಂಗಲ್ ಪಾಯಿಂಟ್ ಮೇಲೆ ಇದೆ. ಅಲ್ಲಿ ಯಶಸ್ವಿಯಾಗಿ ನಡೆಯುತ್ತಿದೆ. ಈಗ ಬಟ್ಟೆಯ ಮೇರೆ ಸಿಂಗಲ್ ಪಾಯಿಂಟಿಗೆ 6 ಕಾಸಿನಂತೆ ವಸೂಲಾಗುತ್ತಿದೆ. ಹಾಗೆ ಬಾಕಿ ಪದಾರ್ಥಗಳಿಗೂ ಮೂಲದಲ್ಲಿ ಸಿಂಗಲ್ ಪಾಯಿಂಟ್‌ನಂತೆ ಹಾಕಿ 3 ಕಾಸಿರುವುದನ್ನು 6 ಕಾಸು ಅಥವಾ ಒಂದಾಣೆಗೆ ಏರಿಸಬಹುದು. ಅದರಿಂದ ಹೆಚ್ಚು ಉತ್ಪತ್ತಿಯೂ ಬರುತ್ತದೆ, ನಷ್ಟವೂ ಇಲ್ಲ, ಜನರಿಗೂ ತೊಂದರೆಯಿಲ್ಲ, ವರ್ತಕರಿಗೂ ತೊಂದರೆಯಿಲ್ಲ. ವರ್ತಕರು ಕೊಡಬೇಕಾಗಿಲ್ಲ, ಎಲ್ಲಾ ಜನಸಾಮಾನ್ಯರ ಮೇಲೇ ಬೀಳುತ್ತದೆ ಎಂದು ಹೇಳಬಹುದು.

ಈ ವಿಚಾರದಲ್ಲಿ ಪ್ರತಿದಿನವೂ ವೃತ್ತಪತ್ರಿಕೆಗಳಲ್ಲಿ ಆಕ್ಷೇಪಣೆಗಳು ಬರುತ್ತಲೇ ಇವೆಯೆಂಬುದು ಸರ್ಕಾರದವರಿಗೂ ಗೊತ್ತಿರಬಹುದು. ಈ ದಿವಸ ನಂಬಾರದ ಧಾರಣೆ ಪಲ್ಲಕ್ಕಿ 80 ರೂಪಾಯಿ ಇದೆ. ಇದಕ್ಕೆ ಮಾರಾಟದ ತೆರಿಗೆ ಬೇರೆ ಬಿದ್ದರೆ ಅದರ ಬೆಲೆ ಐದಾರು ರೂಪಾಯಿ ಹೆಚ್ಚುತ್ತದೆ. ಜನರು ಹೇಗೆ ಜೀವನ ಮಾಡುವುದು? ಸಿಂಗಲ್‌ಪಾಯಿಂಟ್‌ನಲ್ಲಿ ಈ ತೆರಿಗೆ ಕೊಳ್ಳುವವರಿಗೆ ಬಿದ್ದರೆ ಸ್ವಲ್ಪವಾದರೂ ಕಡಿಮೆಯಾಗುತ್ತದೆ. ಯಾವ ದೃಷ್ಟಿಯಿಂದ ನೋಡಿದರೂ ಈ ತೆರಿಗೆ ಸಿಂಗಲ್‌ಪಾಯಿಂಟ್‌ನಲ್ಲಿ ಮಾತ್ರ ಹಾಕಬೇಕು; ಬೇಕಾದರೆ ಮೂರು ಕಾಸಿಗೆ ಬದಲು ಆರುಕಾಸು ಅಥವಾ ಒಂದಾಣೆಯಂತೆ ಹಾಕಿದರೂ ಜನರು ಸಹಕರಿಸುತ್ತಾರೆ. ಬೊಂಬಾಯಿನಲ್ಲಿರುವಂತೆ ಇಲ್ಲಿಯೂ ಇದನ್ನು ಜಾರಿಗೆ ತರಬೇಕೆಂದು ಅರ್ಥಸಚಿವರಿಗೆ ಸೂಚಿಸುತ್ತೇನೆ. ಹೀಗೆ ಮಾಡಿ ಜನ ಸಾಮಾನ್ಯಕ್ಕೂ ವರ್ತಕರಿಗೂ ಇರುವ ತೊಂದರೆಯನ್ನು ನಿವಾರಣೆ ಮಾಡಬೇಕೆಂದು ಪ್ರಾರ್ಥಿಸಿ ಈ ನಿರ್ಣಯವನ್ನು ಅನುಮೋದಿಸುತ್ತೇನೆ.

ಶ್ರೀ ಪಿ. ಎಸ್. ನಾರಾಯಣರಾಯರು (ಬೆಂಗಳೂರು ಸಿಟಿ).—ಮಾನ್ಯ ಅಧ್ಯಕ್ಷರೇ, ಶ್ರೀ ವೀರಪ್ಪನವರು ತಂದಿರುವಕ್ಕ ಈ ನಿರ್ಣಯವನ್ನು ನಾನು ಪುಷ್ಟೀಕರಿಸುತ್ತೇನೆ. ಅವರು ಹೇಳಿರುವಂತೆ ಈ ಮಾರಾಟದ ತೆರಿಗೆ ವಿಧಿಸುವ ಪದ್ಧತಿ ಮೊದಲು ಮದರಾಸಿನಲ್ಲಿ ಜಾರಿಗೆ ಬಂತು. ಶ್ರೀ ಸಿ. ರಾಜಗೋಪಾಲಾಚಾರಿಯವರು ಅಲ್ಲಿ ಮುಖ್ಯ ಮಂತ್ರಿಗಳಾಗಿದ್ದಾಗ ಜಾರಿಗೆ ತಂದರು. ಅಲ್ಲಿ ಆಗ ಮದ್ಯಪಾನ ನಿರೋಧವನ್ನು ಜಾರಿಗೆ ತರಬೇಕಾಗಿ ಬಂದದ್ದರಿಂದ ಸರ್ಕಾರದ ಉತ್ಪತ್ತಿ ಕಡಿಮೆಯಾಗುತ್ತದೆ, ಅದನ್ನು ಹೆಚ್ಚಿಸಲು ಯಾವುದಾದರೂ ದಾರಿಯನ್ನು ಕಂಡುಹಿಡಿಯಬೇಕೆಂದು ಆ ಕಾಲದಲ್ಲಿ ಮೊಟ್ಟಮೊದಲು ಈ ತೆರಿಗೆಯನ್ನು ಶ್ರೀ ರಾಜಗೋಪಾಲಾಚಾರಿಯವರು ಜಾರಿಗೆ ತಂದರು. ಇದು ಜಾರಿಗೆ ಬಂದ ಕಾಲದಲ್ಲಿ ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲಿಯೂ ಬರುವಂತೆ ಬೇಕಾದಷ್ಟು ಪ್ರತಿಭಟನೆ ಬಂತು. ವರ್ತಕರು ಸೇರಿ ಇದರ ವಿರುದ್ಧವಾಗಿ ಬೇಕಾದಷ್ಟು ಪ್ರದರ್ಶನವನ್ನು ನಡೆಸಿದರು. ಇತ್ತೀಚೆಗೆ ಇದರಿಂದ ಸರ್ಕಾರಕ್ಕೆ ವಿಶೇಷ ವರಮಾನ ಬರುವುದನ್ನು ಕಂಡು ಇಂಡಿಯಾದೇಶದ ಎಲ್ಲಾ ಪ್ರಾಂತಗಳಲ್ಲಿಯೂ ಈ ತೆರಿಗೆಯನ್ನು ಜಾರಿಗೆ ತರಲಾಗಿದೆ. ಆದರೆ incidence of tax ಒಂದೊಂದುಕಡೆ ಒಂದೊಂದು ರೀತಿಯಾಗಿದೆ. ಕೆಲವು ಪ್ರಾಂತಗಳಲ್ಲಿ ಸಿಂಗಲ್‌ಪಾಯಿಂಟ್‌ನಲ್ಲಿ ವಸೂಲು ಮಾಡುತ್ತಾರೆ. ಕೆಲವು ಪ್ರಾಂತಗಳಲ್ಲಿ ಮಲ್ಟಿಪಾಯಿಂಟ್‌ನಲ್ಲಿ ಹಾಕುವ ಪದ್ಧತಿ ಇದೆ. ಇದನ್ನು ಕೇಂದ್ರ ಸರ್ಕಾರದವರು ತಮ್ಮ ಆಡಳಿತಕ್ಕೇ ತೆಗೆದುಕೊಂಡು ಇಡೀದೇಶದಲ್ಲಿರುವ ಎಲ್ಲ ಪ್ರಾಂತಗಳಿಗೂ ಒಂದೇ ರೀತಿಯಾದ ಪದ್ಧತಿಯನ್ನು ಜಾರಿಗೆ ತರಬೇಕೆಂದು ಪ್ರಯತ್ನ ಮಾಡಿದರು. ಆದರೆ ಅದಕ್ಕೆ ಪ್ರಾಂತಗಳು ಒಪ್ಪಲಿಲ್ಲ. ಏಕೆಂದರೆ, ಕೆಲವು ಪ್ರಾಂತಗಳಲ್ಲಿ ವರಮಾನ ತೆರಿಗೆಯಿಂದ ಎಷ್ಟು ವರಮಾನ ಬರುತ್ತದೋ ಅಷ್ಟೇ ಅಥವಾ ಇನ್ನೂ ಜಾಸ್ತಿ ಈ ಮಾರಾಟದ ತೆರಿಗೆಯಿಂದ ವರಮಾನ ಬರುತ್ತದೆ. ಈ ಕಾರಣದಿಂದ ಒಪ್ಪಿಗೆ ಕೊಡಲಿಲ್ಲ.

ಈಗ ನಮ್ಮ ಮುಂದಿರುವ ವಿಚಾರ ನಮ್ಮ ಸಂಸ್ಥಾನದಲ್ಲಿ ಈ ಮಾರಾಟದ ತೆರಿಗೆ ಸಿಂಗಲ್‌ಪಾಯಿಂಟ್‌ನಲ್ಲಿ ವಸೂಲು ಮಾಡಬೇಕೇ, ಅಥವ ಮಲ್ಟಿಪಾಯಿಂಟ್‌ನಲ್ಲಿ ವಸೂಲು ಮಾಡಬೇಕೆ ಎಂಬುದು. ಈ ನಿರ್ಣಯದಲ್ಲಿ ಇದನ್ನು ಸಿಂಗಲ್ ಪಾಯಿಂಟ್‌ನಲ್ಲಿ ವಿಧಿಸಬೇಕೆಂದು ಸೂಚಿಸಿದ್ದಾರೆ. ಇದರಿಂದ ಸರ್ಕಾರಕ್ಕೆ ಸ್ವಲ್ಪ ವರಮಾನ ಕಡಿಮೆಯಾದರೂ ಆಗಬಹುದು; ಆದರೆ ಜನರಿಗೆ ಅನುಕೂಲವಾಗುತ್ತದೆಂಬುದರಲ್ಲಿ ಅನುಮಾನವಿಲ್ಲ. ಈ ತೆರಿಗೆಯನ್ನು ಜಾರಿಗೆ ತಂದ ಕಾಲದಲ್ಲೇ ಇದನ್ನು ಸಿಂಗಲ್ ಪಾಯಿಂಟ್ ಮಾಡಬೇಕೆಂದು ಅನೇಕರು ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಂಡರು, ಆದರೆ ಅವರು ಮಾಡಲಿಲ್ಲ. ತೆರಿಗೆ ವಿಧಿಸುವುದರಲ್ಲಿ ಗಮನಿಸಬೇಕಾದ ಒಂದು ಮುಖ್ಯ ತತ್ವವೇನೆಂದರೆ, ಅದು ಸುಲಭವಾಗಿ ವಸೂಲಾಗುವಂತಿರಬೇಕು ಮತ್ತು ಅದರಿಂದ ಜನರಿಗೆ ಕಿರುಕುಳವಿರಬಾರದು. ಮಲ್ಟಿ ಪಾಯಿಂಟ್‌ನಲ್ಲಿ ವಿಧಿಸುವುದರಿಂದ ಸುಲಭವಾಗಿ ಈ ತೆರಿಗೆ ವಸೂಲಾಗುವುದಿಲ್ಲ, ವರ್ತಕರಿಗೆ ಮತ್ತು ಸಾರ್ವಜನಿಕರಿಗೆ ಕಿರುಕುಳ ಜಾಸ್ತಿಯಾಗುತ್ತದೆ. ಸರ್ಕಾರದವರು ಇದಕ್ಕೆ ಸಿಬ್ಬಂದಿಯನ್ನೂ ಕೂಡ ಜಾಸ್ತಿ ಇಡಬೇಕಾಗುತ್ತದೆ. ಇದಕ್ಕೆ ಬದಲಾಗಿ ಸಿಂಗಲ್ ಪಾಯಿಂಟ್‌ನಲ್ಲಿ ಬಾಕಿ ಪದಾರ್ಥಗಳ ಉತ್ಪತ್ತಿ ಎಲ್ಲೋ ಆ ಸ್ಥಳದಲ್ಲಿ ಮಾತ್ರ ವಸೂಲು ಮಾಡುವುದು ಒಳ್ಳೆಯದು. ಸ್ವಲ್ಪ ಹೆಚ್ಚಿನ ದರದಲ್ಲಿ ವಸೂಲು ಮಾಡಿದರೂ ಚಿಂತೆಯಿಲ್ಲ. ಇದರಿಂದ ವಸೂಲು ಮಾಡುವುದು ಕೂಡ ಸರ್ಕಾರಕ್ಕೆ ಅನುಕೂಲವಾಗುತ್ತದೆ ಮತ್ತು ಜನರಿಗೂ ಅನುಕೂಲವಾಗುತ್ತದೆ.

ಇನ್ನೊಂದು ವಿಷಯವೇನೆಂದರೆ, ಈಗ ಈ ಕಾನೂನಿನ ಪ್ರಕಾರ ವರ್ಷಕ್ಕೆ 7,500 ರೂಪಾಯಿಗಿಂತ ಹೆಚ್ಚು ವ್ಯಾಪಾರವಿಲ್ಲದಿರುವ ಅಂಗಡಿಯವರು ಈ ತೆರಿಗೆಯನ್ನು ವಸೂಲು ಮಾಡಿಕೊಡಬೇಕಾಗಿಲ್ಲವೆಂದಿದೆ. ಆದ್ದರಿಂದ ಇದರಲ್ಲಿಯೂ ಎರಡು ರೀತಿಯಾಗಿದೆ. ಕೆಲವರು ತೆರಿಗೆ ವಸೂಲು ಮಾಡುವವರು. ಕೆಲವರು ವಸೂಲು ಮಾಡಿ ಸರ್ಕಾರಕ್ಕೂ ಕೊಡದೆ ತಾವೇ ಇಟ್ಟುಕೊಳ್ಳಲು ಅವಕಾಶವಾಗಿದೆ. ಯಾರು ಲೈಸೆನ್ಸ್ ಪಡೆದು ನ್ಯಾಯವಾಗಿರುತ್ತಾರೊ ಅವರು ಮಾರಾಟ ತೆರಿಗೆಯನ್ನು ವಸೂಲುಮಾಡಿ ಸರ್ಕಾರಕ್ಕೆ ಕೊಡಲೇಬೇಕು. ಕೆಲವರು ಲೈಸನ್ಸ್ ಪಡೆಯದೇಯಿರುವವರು ವಸೂಲುಮಾಡಿ ಸರ್ಕಾರಕ್ಕೂ ಕೊಡುವುದಿಲ್ಲ. ನಾನು ಯಾರನ್ನೂ ಆರೋಪಣೆ ಮಾಡುತ್ತಿಲ್ಲ, ಯಾರು ವಸೂಲುಮಾಡಿ ಕೊಡುತ್ತಾರೆ, ಯಾರು ಕೊಡುವುದಿಲ್ಲ ಎಂಬುದನ್ನು ಕಂಡುಹಿಡಿಯುವುದು ಕಷ್ಟ ಎಂಬುದನ್ನು ಹೇಳಿದೆ. ಲೈಸೆನ್ಸ್ ಪಡೆದಿರುವ ವರ್ತಕರು ಇಷ್ಟು ವ್ಯಾಪಾರ ಮಾಡುತ್ತಾರೆಂಬುದು ಗೊತ್ತಿರುತ್ತದೆ, ಅವರು ಇಷ್ಟು ವ್ಯಾಪಾರದ ತೆರಿಗೆ ಕೊಡಬೇಕೆಂದು ಗೊತ್ತುಮಾಡಿರುತ್ತಾರೆ, ಅಷ್ಟನ್ನು ಕೊಟ್ಟೇಕೊಡಬೇಕು. ಒಂದುಸಾರಿ ಇದನ್ನು ಗೊತ್ತುಮಾಡಿದ ಮೇಲೆ ಅವರು ಕೋರ್ಟಿಗೂ ಕೂಡ ಹೋಗುವಹಾಗಿಲ್ಲ. ಇಂಥವರು, ಅವರಿಗೆ ಗಿರಾಕಿ ಇರಲಿ, ಇಲ್ಲದಿರಲಿ, ಅವರು ಗಿರಾಕಿಗಳಿಂದ ವಸೂಲು ಮಾಡಲಿ, ಮಾಡದೇಯಿರಲಿ, ಸರ್ಕಾರಕ್ಕೆ ಈ ತೆರಿಗೆಯನ್ನು ಕೊಡಲೇಬೇಕು, ಹೀಗಿರುತ್ತದೆ. ಇನ್ನೊಂದುಕಡೆ ಕೆಲವರು ಈ ತೆರಿಗೆಯನ್ನು ಗಿರಾಕಿಗಳಿಂದ ತಾವು ವಸೂಲು ಮಾಡಿಕೊಂಡು ಆ ಹಣವನ್ನು ಸರ್ಕಾರಕ್ಕೆ ಕೊಡದೇ ತಾವೇ ಉಪಯೋಗಿಸಿಕೊಳ್ಳುತ್ತಾರೆ. ಹೀಗೆಲ್ಲ ಇರುವ ತೊಂದರೆ ನಿವಾರಣೆಯಾಗಬೇಕಾದರೆ ಒಂದೇ ಮಾರ್ಗ. ಅದೇನೆಂದರೆ, ಸಿಂಗಲ್ ಪಾಯಿಂಟ್‌ನಲ್ಲಿ, ಪದಾರ್ಥಗಳು ತಯಾರಾಗುವ ಸ್ಥಳದಲ್ಲಿ, ತಯಾರು ಮಾಡುವವರಿಂದ ವಸೂಲು ಮಾಡುವುದರಿಂದ ಇಂಥಾ ಮೋಸ, ಅನ್ಯಾಯಕ್ಕೆ ಅಸ್ಪದವಿರುವುದಿಲ್ಲ ಮತ್ತು ಪ್ರಜೆಗಳಿಗೂ ವ್ಯಾಪಾರಗಾರರಿಗೂ ಕಿರುಕುಳಕ್ಕೆ ಅಸ್ಪದವಾಗುವುದಿಲ್ಲ. ಈ ಮಾರಾಟದ ತೆರಿಗೆ ಜಾರಿಗೆ ಬಂದಾಗಲಿಂತೂ ಕಾಂಗ್ರೆಸ್ ಸರ್ಕಾರದ ಮೇಲೆ ಎಷ್ಟು ಆಪಾದನೆಗಳು ಬಂದವು, ಎಷ್ಟು ಅಪಪ್ರಚಾರ ನಡೆಯಿತು, ಜನರಲ್ಲಿ ಎಷ್ಟು ಅನವಾಧಾನಕ್ಕೆ ಕಾರಣವಾಯಿತು ಎಂಬುದನ್ನು ನಾನು ಹೇಳಲೇಬೇಕಾಗಿಲ್ಲ. ಒಟ್ಟಿನಲ್ಲಿ ಈ ತೆರಿಗೆಯನ್ನು ವಸೂಲು ಮಾಡಿದರೂ ಕೂಡ ಸಿಂಗಲ್ ಪಾಯಿಂಟ್‌ನಲ್ಲಿ ಹಾಕಿದರೆ ವಸೂಲು ಮಾಡುವುದಕ್ಕೆ ಸರ್ಕಾರದವರಿಗೂ ಸುಲಭ.

ಇನ್ನೊಂದು ವಿಚಾರವೇನೆಂದರೆ, ಮಲ್ಟಿ ಪಾಯಿಂಟ್‌ನಲ್ಲಿ ಹಾಕುವುದರಿಂದ ಈ ತೆರಿಗೆ, ಪದಾರ್ಥಗಳು ಒಂದು ಕೈಯಿಂದ ಇನ್ನೊಂದು ಕೈಗೆ ಬದಲಾವಣೆಯಾದ ಹಾಗೆಲ್ಲಾ ಮೂರುಕಾಸು ಆರುಕಾಸಾಗಿ ಒಂಬತ್ತು ಕಾಸಾಗಿ ಹೆಚ್ಚುತ್ತಾ ಹೋಗುತ್ತದೆ. ಇದೂ ತಪ್ಪಿ ದೇಶದಲ್ಲೆಲ್ಲಾ ಒಂದೇ ರೀತಿಯಾಗಬೇಕಾದರೆ ಸಿಂಗಲ್ ಪಾಯಿಂಟ್‌ನಲ್ಲಿ ಹಾಕಬೇಕು. ಈ ಕಾರಣಗಳಿಂದ ಈ ನಿರ್ಣಯವನ್ನು ನಾನು ಪುಷ್ಟೀಕರಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಸ್ವಾಮಿ, ಶ್ರೀ ವೀರಪ್ಪನವರು ಮಂಡಿಸಿರುವ ಈ ನಿರ್ಣಯವನ್ನು ಪುಷ್ಟೀಕರಿಸಿ ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಮಾರಾಟದ ತೆರಿಗೆ ಈಗಿರುವ ರೀತಿಯಲ್ಲಿ ಪದಾರ್ಥಗಳು ಒಂದು ಕೈಯಿಂದ

ಇನ್ನೊಂದು ಕೈಗೆ ಬದಲಾವಣೆಯಾದರೆ ಆಗ ಬೀಳುತ್ತದೆ. ಹೀಗೆ ಎಷ್ಟು ಸಾರಿ ಕೈಬದಲಾವಣೆಯಾದರೂ ಅಲ್ಲೆಲ್ಲಾ ಈ ತೆರಿಗೆ ಆ ಪದಾರ್ಥಗಳ ಮೇಲೆ ಬೀಳುತ್ತದೆ. ಇದರಿಂದ ಜನರಿಗಾಗತಕ್ಕ ಕಷ್ಟನಷ್ಟಗಳನ್ನು ಮಾನ್ಯಸ್ನೇಹಿತರು ಈಗಾಗಲೇ ವಿವರಿಸಿದ್ದಾರೆ. ಅವರು ಈಗ ತಾನೇ ಹೇಳಿದಹಾಗೆ ಈ ತೆರಿಗೆ ವಸೂಲುಮಾಡುವುದು ಒಂದೊಂದು ಸ್ಥಾಂತದಲ್ಲಿ ಒಂದೊಂದು ರೀತಿಯಾಗಿದೆ. ಬೊಂಬಾಯಿ ಪ್ರಾಂತದಲ್ಲಿ ಒಂದೇ ಕಡೆ ಇದನ್ನು ಹಾಕುತ್ತಿದ್ದಾರೆ. ಒಂದೇ ಕಡೆ ಹಾಕುವುದಾದರೆ, ಇಲ್ಲಿ ಈ ತೆರಿಗೆಯನ್ನು ಮೂರುಕಾಸಿಗೆ ಬದಲು ಒಂದಾಣೆಯನ್ನಾದರೂ ಹಾಕಬಹುದೆಂದು ಶ್ರೀ ಸೂರ್ಯನಾರಾಯಣಶೆಟ್ಟರು ಹೇಳಿದರು. ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಈಗಾಗಲೇ ಪದಾರ್ಥಗಳನ್ನು ಕೊಂಡು ಬಳಸುವವರ ಮೇಲೆ ಬಹಳ ಹೊರೆ ಬೀಳುತ್ತಿದೆ. ಬೆಲೆಗಳು ಏರಿರುವುದರ ಜೊತೆಗೆ ಅವರ ಮೇಲೆ ಅನೇಕ ತೆರಿಗೆಗಳು ಬಿದ್ದಿವೆ. ಇದಲ್ಲದೆ ಈಗ ಮಾಡಿರುವ ಮಲ್ಟಿ ಪಾಯಿಂಟ್‌ನಲ್ಲಿ ತೆರಿಗೆ ಹಾಕುವ ಪದ್ಧತಿಯಿಂದ ನಾಲ್ಕಾಣೆಯ ಪದಾರ್ಥ ಎಂಟು ಹತ್ತು ಕೈ ತಟ್ಟಾಯಿಸುವುದರಲ್ಲಿ ಎಂಟಾಣೆ ಯಾಗುತ್ತದೆ. ಇದರಲ್ಲಿ ವರ್ತಕರಿಗೆ ತೊಂದರೆ ಯಾಗುತ್ತದೆಂದು ಹೇಳುವುದರಲ್ಲಿ ಅರ್ಥವಿಲ್ಲ. ಪದಾರ್ಥಗಳ ಮೇಲೆ ಯಾವ ತೆರಿಗೆ ಬಿದ್ದರೂ ಅದನ್ನು ವರ್ತಕರು ಬಳಸುವವರ ಮೇಲೆ ಹೊರಿಸುತ್ತಾರೆ. ಈ ತೆರಿಗೆ ಹೆಚ್ಚಿದಂತೆ ಅದರೊಡನೆ ಅವರ ಲಾಭವನ್ನು ಎರಡು ಕಾಸು ಮೂರುಕಾಸಿನಂತೆ ಹೆಚ್ಚಿಸುತ್ತಾ ಇದಕ್ಕೆ ಸೇರಿಸುತ್ತಾ ಹೋಗುತ್ತಾರೆ. ಇದರಿಂದ ಅವರ ಲಾಭ ಹೆಚ್ಚುತ್ತದೆ.

ಇನ್ನೊಂದು ಮುಖ್ಯವಾದ ವಿಚಾರವೇನೆಂದರೆ ಮಾರಾಟದ ತೆರಿಗೆಯನ್ನು ಜಾರಿಮಾಡುವಾಗ ಪಾನ ನಿರೋಧಮಾಡುವುದರಿಂದ ರೆವಿನ್ಯೂ ಆಗುತ್ತದೆಂದು ಜಾರಿಮಾಡಿದರು. ಪಾನನಿರೋಧಮಾಡಿದ್ದರಿಂದ ಈ ಮೂಲಕ ಬರುವ ಉತ್ಪತ್ತಿ ಶೇಕಡ 25ರಷ್ಟು ಹೆಚ್ಚು ಬರುತ್ತದೆ. ಆದ್ದರಿಂದ ಸರ್ಕಾರದವರಿಗೆ ಈ ತೆರಿಗೆಯ ಮೇಲೆ ಯಾವ ಅಧಿಕಾರವೂ ಇಲ್ಲ. ಹೇಗೆ ವಸೂಲು ಮಾಡಿದರೂ ಇದನ್ನು ರಿನರ್ವ್‌ಗೆ ಇಟ್ಟಿರಬೇಕಾಗಿದೆ. ಇದನ್ನು ಬಳಸುವುದಕ್ಕೆ ಸರ್ಕಾರದವರಿಗೆ ಕಾನೂನು ಬದ್ಧವಾಗಿ ಅವಕಾಶವಿಲ್ಲ. ಈ ನಿರ್ಣಯವನ್ನು ಸರ್ಕಾರದವರು ಒಪ್ಪಬೇಕೆಂದೂ ಒಂದೇ ಕಡೆ ತೆರಿಗೆ ಹಾಕುವುದರಿಂದ ಅನುಕೂಲವಾಗುತ್ತದೆಂದೂ ಹೇಳಿ ಇದನ್ನು ಅನುಮೋದಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಮಾರಾಟದ ತೆರಿಗೆ ಮಸೂದೆ ಸಂಬಂಧವಾಗಿ ಒಂದು ಸೆಲೆಕ್ಟ್ ಕಮಿಟಿ ಆಗಿದೆ. ಅಲ್ಲಿ ಈ ವಿಷಯ ಪರಿಶೀಲನೆಗೆ ಬಂದನಂತರ ಇದು ಯಾವ ರೀತಿ ಕೆಲಸ ಮಾಡುತ್ತಿದೆ ಎಂಬುದು ಗೊತ್ತಾಗುತ್ತದೆ. ಆದ್ದರಿಂದ ಆ ಸಮಿತಿಯ ವರದಿ ಬಂದಮೇಲೆ ಈ ಸೇಲ್ಸ್‌ಟ್ಯಾಕ್ಸ್ ಆಕ್ಟನ್ನು ತಿದ್ದುಪಡಿ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ.

ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ).—ಒಂದು ವಿಚಾರ. ಇಷ್ಟೆಲ್ಲಾ ನೋಡಿದರೆ ಸರ್ಕಾರದವರು ಸಿಂಗಲ್ ಪಾಯಿಂಟ್‌ನಲ್ಲಿ ಹಾಕುವುದರಿಂದ ಒಳ್ಳೆಯದಾಗುವುದಿಲ್ಲವೆಂಬ ಅಭಿಪ್ರಾಯವನ್ನಿಟ್ಟುಕೊಂಡು ಅದಕ್ಕೆ ಸ್ವಲ್ಪ ಸಂಶಯ ಪಟ್ಟಿರುವಹಾಗೆ ಕಾಣುತ್ತದೆ. ಸಿಂಗಲ್ ಪಾಯಿಂಟ್‌ನಲ್ಲಿ ಹಾಕಿದರೆ ಹೇಗೆ ನಡೆಯುತ್ತದೆ ಎಂಬುದನ್ನು ಒಂದು ಯೂನಿಟ್ ತೆಗೆದುಕೊಂಡು ಪ್ರಯೋಗಮಾಡಿ ನೋಡಿದರೆ ಈ ವಾದ ವಿವಾದಗಳೇ ಬೇಕಾಗಿಲ್ಲ. ಸಿಂಗಲ್ ಪಾಯಿಂಟ್ ಹಾಕಿ, ಜನಗಳಿಗೆ ತೊಂದರೆ ಇಲ್ಲದೆ ನಿಮಗೆ ಸಾಕಾದಷ್ಟು ವರಮಾನ ಬರುವುದಾದರೆ ಸಾಕು. ಇದರಿಂದ ನಿಮಗೆ 50%, 75% ನಷ್ಟವಾಗಿರುವ ಹಾಗಿದ್ದರೆ ಇದಕ್ಕೆ ಕೈಹಾಕಬೇಕೆಂದು ನಾವು ಹೇಳುವುದಿಲ್ಲ. ಆದ್ದರಿಂದ ಮೊದಲು ಒಂದು ಯೂನಿಟ್‌ನಲ್ಲಿ ಜಾರಿಮಾಡಿ ಹೇಗೆ ನಡೆಯುತ್ತದೆ ಎಂಬುದನ್ನು ಪರೀಕ್ಷೆಮಾಡಿ ನೋಡಿ ಎಂದು ಸಲಹೆ ಕೊಡುತ್ತೇನೆ.

Sri G. A. ACHARYA (Bangalore District-General).—Sir, looking to our revenue accounts of last year, the sales-tax is no doubt a big revenue and many of my friends have spoken about this tax. Mysore industries, Sir, have suffered from this tax. When we export.....

ಅಧ್ಯಕ್ಷರು.—ತಾವು ಹೇಳುವುದು ಬೇರೆ ವಿಷಯ ಆಗುತ್ತದೆ.

Sri G. A. ACHARYA.—I will come to that. As a matter of fact Bengal which exports to the tune of 7 to 8 crores of rupees to Madras, Mysore and elsewhere is not made to pay this sales-tax at all. So what I would like our Government to do is, if it is possible, industrial goods, goods which want market outside India have to sell at single point. It comes to that. Even exports they have taxed. It is only in this context that I want to refer to this. It is very necessary.....

ಅಧ್ಯಕ್ಷರು.—ಈಗ ಎಕ್ಸ್‌ಪೋರ್ಟ್ಸ್ ಮೇಲೆ ಒಂದೇ ಪಾಯಿಂಟ್‌ನಲ್ಲಿ ಟ್ಯಾಕ್ಸ್ ಹಾಕುತ್ತಾರೆ.

Sri G. A. ACHARYA.—Not even that. I would like the sales-tax to be levied at a single point.....

Sri H. C. DASAPPA.—It is so even now. All exports are taxed only at single point.

Sri G. A. ACHARYA.—Bengal will not put sales-tax on exports at all. Any way it touches revenue. So, I would not like to say anything about it.

ಶ್ರೀ ಎಚ್. ಸಿ. ದಾಸಪ್ಪನವರು.—ಸ್ವಾಮಿ, ಈಗ ನಮ್ಮ ಮುಂದೆ ತಂದಿರತಕ್ಕಂಥ ವಿಷಯ ಈ ಸಭೆಗೆ ಎಂದರೆ ಹಿಂದೆ ಇದ್ದಂಥ ನ್ಯಾಯವಿಧಾಯಕ ಸಭೆಗೆ ಹೊಸದೇನೂ ಅಲ್ಲ. ಸಿಂಗಲ್ ಪಾಯಿಂಟ್, ಎಂದರೆ ಏನು, ಮಲ್ಟಿಪಾಯಿಂಟ್ ಎಂದರೆ ಏನು ಎಂಬ ವಿಷಯದಲ್ಲಿ ವಿಪುಲವಾಗಿ ಡಿಬೇಟ್ ನಡೆದೂ ನಡೆದೂ ಇವತ್ತು ಹೊಸ ವಿಚಾರ ಯಾರು ಹೇಳುವುದಕ್ಕೂ ಸಾಧ್ಯವಿಲ್ಲವಾಗಿದೆ. ಪುನರಪಿ ಹೇಳಿದ್ದೇ ಹೇಳಬೇಕೇ ಹೊರತು ಹೊಸ ವಿಷಯ ಯಾವುದೂ ಇಲ್ಲ. ಈಗ ಮಲ್ಟಿಪಾಯಿಂಟ್ ಹಾಕಿರುವುದರಿಂದ ಅನೇಕ ತೊಂದರೆಗಳಿವೆ.

ಸಿಂಗಲ್ ಪಾಯಿಂಟ್ ಹಾಕಿದರೆ ಆಗಲೂ ಅನೇಕ ತೊಂದರೆಗಳು ಬರುತ್ತವೆ. ತೊಂದರೆ ಇಲ್ಲದೇ ಇರುವ ತೆರಿಗೆ ಇದೆ ಎಂಬುದನ್ನು ನಾನಂತೂ ಕೇಳಿಲ್ಲ. ತೆರಿಗೆ ಕೊಡುತ್ತಾ ಕೊಡುತ್ತಾ ಅದು ಜಾರಿಗೆ ಬಂದು ಮಾವೂ ನಾಗಿ ಹೋದರೆ ತೊಂದರೆ ಕಾಣುವುದಿಲ್ಲ ಅಷ್ಟೆ. ಶ್ರೀ ವಿ. ಎಸ್. ನಾರಾಯಣರಾಯರು ಮೊದಲು ಹೊಸದಾಗಿ ಸೇಲ್ಸ್ ಟ್ಯಾಕ್ಸ್ ಹಾಕಿದಾಗ ಏನೋ ಒಂದು ದೊಡ್ಡ ಏಪತ್ತು ನಮ್ಮ ಸಂಸ್ಥಾನಕ್ಕೆ ಬಂತು ಎಂಬ ಭಾವನೆ ಇತ್ತೆಂದೂ ಹೇಳಿದರು. ಬೊಂಬಾಯಿ ಮದರಾಸು, ಈ ಪ್ರಾಂತಗಳಲ್ಲೆಲ್ಲಾ ಈ ತೆರಿಗೆ ಇದೆ. ಎಲ್ಲಾ ಕಡೆಗಳಲ್ಲೂ ಇರುವುದರಿಂದ ಈಗ ಹಿಂದೆ ಇದ್ದಂಥ ಒಂದು ತೀವ್ರತೆಯ ವಿರೋಧಪಕ್ಷ ಇಲ್ಲವೆಂದು ಹೇಳಬಹುದು.

ಶ್ರೀ ಸೂರ್ಯನಾರಾಯಣ ಶೆಟ್ಟರು ಒಂದು ವಿಷಯ ಬಹಳ ಚೆನ್ನಾಗಿ ಹೇಳಿದರು. 3 ಕಾಸು ಏಕೆ ತೆಗೆದುಕೊಳ್ಳುತ್ತೀರಿ, ಸಿಂಗಲ್‌ಪಾಯಿಂಟ್‌ನಲ್ಲಿ 6 ಕಾಸು, 9 ಕಾಸು ಅಥವಾ ಒಂದಾಣೆ ಬೇಕಾದರೂ ತೆಗೆದು ಕೊಳ್ಳಿ ಎಂದು ಹೇಳಿದರು. ಆ ಸಲಹೆಯನ್ನು ನಾನು ಖಂಡಿತವಾಗಿಯೂ ಯೋಚನೆಮಾಡುತ್ತೇನೆ. ಈಗ ಬೊಂಬಾಯಿನಲ್ಲಿ ಹೇಗಿದೆ ಎಂಬುದನ್ನು ನೋಡೋಣ. ಅಲ್ಲಿ ಸಿಂಗಲ್‌ಪಾಯಿಂಟ್ ಇದೆ, ನಿಜ, ಒಪ್ಪಿಕೊಳ್ಳುತ್ತೇನೆ. ಆದರೆ ಎರಡು ವಿಚಾರ ತಿಳಿದುಕೊಳ್ಳಬೇಕು. ಅಲ್ಲಿ ಹೋಲ್‌ಸೇಲ್ ವ್ಯಾಪಾರ ಹೆಚ್ಚಾಗಿರುವುದರಿಂದ ಸಿಂಗಲ್‌ಪಾಯಿಂಟ್ ಹಾಕಿದರೆ ಬೇಕಾದಷ್ಟು ದುಡ್ಡು ಬರುತ್ತದೆ. ಮೊನ್ನೆ ದಿನ ಇದೇ ವಿಚಾರವಾಗಿ ಪ್ರಶ್ನೆ ಬಂದಾಗ ಶ್ರೀ ಸಿದ್ದವೀರಪ್ಪನವರು ಬೊಂಬಾಯಿನಲ್ಲಿ ಇದನ್ನು ಪುನರ್ವಿಮರ್ಶೆಮಾಡಲು ಒಂದು ಸಮಿತಿ ರಚನೆಯಾಗಿಲ್ಲವೇ ಎಂದು ಕೇಳಿದಾಗ ಹೌದು ಎಂದು ಉತ್ತರಕೊಟ್ಟೆ. ಆದರೆ ಅವರು ಮುಂದಿನ ಪ್ರಶ್ನೆ ಹಾಕಲಿಲ್ಲ. ಗ್ಯಾಡ್‌ಗಿಲ್ ಸಮಿತಿ ಎಂಬುದು ಇದೆ. ಅವರ ತೀರ್ಮಾನ ಏನು ಎಂದು ಅವರು ಕೇಳಬೇಕಾಗಿತ್ತು. ಸಿಂಗಲ್‌ಪಾಯಿಂಟ್ ಅಷ್ಟು ಒಳ್ಳೆಯದಲ್ಲ. ಮಲ್ಟಿಪಾಯಿಂಟೇ ಸೂಕ್ತ ಎಂಬುದಾಗಿ ಗ್ಯಾಡ್ಗಿಲ್ ಸಮಿತಿಯವರು ತೀರ್ಮಾನಮಾಡಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಒಳ್ಳೆಯ ಪದ್ಧತಿ ಎಂದರೆ ಹೆಚ್ಚು ಆದಾಯ ಬರುತ್ತದೆ ಎಂತಲೇ?—

ಶ್ರೀ ಎಚ್. ಸಿ. ದಾಸಪ್ಪನವರು.—ಮಲ್ಟಿಪಾಯಿಂಟ್ more scientific and more rational ಎಂದು ಹೇಳಿದ್ದಾರೆ.

Sri A. BHEEMAPPA NAIK (Chitaldrug District General).—From the point of view of income also multi-point is better.

ಶ್ರೀ ಎಚ್. ಸಿ. ದಾಸಪ್ಪನವರು.—ಈ ವಿಚಾರದಲ್ಲಿ ಸಿಂಗಲ್‌ಪಾಯಿಂಟ್ ಇದ್ದರೆ ಹೇಗಾಗುತ್ತದೆಂಬುದನ್ನು ನೋಡಿ. ಬೊಂಬಾಯಿನಲ್ಲಿ 9 ಕಾಸಿನಂತೆ ಹಾಕಿದ್ದಾರೆ. ಅದೇ ಪ್ರಕಾರ ನಾವು ಹಾಕುವುದಾದರೆ, ಈಗ ಹೋಟೆಲಿಗೆ ಹೋಗಿ ಒಂದು ರೂಪಾಯಿನ ಸಾಮಾನು ತೆಗೆದುಕೊಂಡರೆ ಈಗಿರುವಂತೆ ಮೂರು ಕಾಸು ಕೊಡುವ ಬದಲು 9 ಕಾಸು ಕೊಡಬೇಕಾಗಿ ಬರುತ್ತದೆ.

Sri A. BHEEMAPPA NAIK.—Not on food in hotels.

ಶ್ರೀ ಎಚ್. ಸಿ. ದಾಸಪ್ಪನವರು.—ಹೋಟೆಲುಗಳಲ್ಲೂ ಕೊಡಬೇಕು. On the turnover it is being taken. ಹೀಗಿರುವಾಗ ಒಂದು ರೂಪಾಯಿ ಬೆಲೆಗೆ ಏನಾದರೂ ತರುವಾಗ ಮೂರು ಕಾಸು ಹೆಚ್ಚಿಗೆ ಕೊಡಬೇಕು ಎಂದು ಹೇಳುವುದಕ್ಕೆ ಬದಲು ಏಕ್‌ದಂ 9 ಕಾಸು ಕೊಡಬೇಕೆಂದರೆ ಹೇಗಾಗುತ್ತದೆ. ಎಂಬುದನ್ನು ನೀವೇ ಯೋಚಿಸಿ. ಆದರೆ ಮಲ್ಟಿಪಾಯಿಂಟ್ ಎಂದರೆ ಒಂದೊಂದು ಪಾಯಿಂಟ್‌ನಲ್ಲಿ ಮೂರು ಕಾಸು ಮಾತ್ರ ಹಾಕುತ್ತೇವೆ. ನಮ್ಮ ದೇಶ ಒಂದು ಸಣ್ಣ ದೇಶವಾಗಿರುವುದರಿಂದ ಯಾವ ಪದಾರ್ಥವೂ ಬಹುಶಃ ಎರಡು ಮೂರು ಕೈಗಳಿಗಿಂತ ಹೆಚ್ಚಿಗೆ ಮುಂದೆ ಹೋಗಲಾರದು ಆದ್ದರಿಂದ ಎಲ್ಲರೂ ಕೊಡುವ ಸೇಲ್ಸ್ ಟ್ಯಾಕ್ಸ್ ಒಟ್ಟಿಗೆ ಸೇರಿ ಒಂದು ಪದಾರ್ಥದ ಮೇಲೆ 9 ಕಾಸು ಅಥವಾ ಒಂದಾಣೆ ಆಗಬಹುದು. ಹಾಗಿಲ್ಲದೆ ಸಿಂಗಲ್ ಪಾಯಿಂಟ್ ಇದ್ದು ಪ್ರತಿಯೊಬ್ಬರೂ 9ಕಾಸು ಕೊಡ ಬೇಕೆಂದರೆ, ಅದೂ ಇಷ್ಟು ಚಿಕ್ಕ ಪ್ರದೇಶದಲ್ಲಿ, ಬಹಳ ಕಷ್ಟವಾಗುತ್ತದೆ. ಅದರಲ್ಲೂ, ಸೆಕ್ಷನ್ 9ರ ಪ್ರಕಾರ ಸಂಸ್ಥಾನದಿಂದ ಹೊರಗಡೆ ರಫ್ತಾಗುವ ನಮ್ಮಲ್ಲಿ ತಯಾರಾದ ಪದಾರ್ಥಗಳಿಗೆ ಅರ್ಧ ಭಾಗದಷ್ಟು ಮಟ್ಟಿಗೆ ಸೇಲ್ಸ್‌ಟ್ಯಾಕ್ಸ್ ರಿಬೇಟ್ ಕೊಡಬಹುದೆಂದಿದೆ. ಈಗಿರುವ ಪ್ರಕಾರ ರೂಪಾಯಿಗೆ $1\frac{1}{2}$ ಕಾಸಿನಷ್ಟು ಮಾತ್ರ ಬೀಳುತ್ತದೆ. ಆದರೆ ಸಿಂಗಲ್ ಪಾಯಿಂಟ್ ಹಾಕಿದರೆ ಇವಕ್ಕೂ 6 ಕಾಸಿನವರೆಗೆ ತೆರಿಗೆ ಕೊಡಬೇಕಾಗುತ್ತದೆಂದರೆ ನಮ್ಮ ರಫ್ತು ವ್ಯಾಪಾರವನ್ನು ಅಭಿವೃದ್ಧಿಪಡಿಸುವುದು ಹೇಗೆ?

ಆ ಮೇಲೆ "evasion of tax" ವಿಚಾರ ಹೇಳಿದರು. ಬೊಂಬಾಯಿನಲ್ಲೂ ಕೂಡ ಈ ತೆರಿಗೆ ತಪ್ಪಿಸಿಕೊಳ್ಳುವವರಿದ್ದೇ ಇದ್ದಾರೆ. ಇದನ್ನು ತಡೆಯುವುದಕ್ಕಾಗಿ ಅವರೂ ಬಹಳವಾಗಿ ಯೋಚಿಸಿದ್ದಾರೆ. ಆದ್ದರಿಂದ ಸಿಂಗಲ್‌ಪಾಯಿಂಟ್ ಆಗಲಿ, ಮಲ್ಟಿಪಾಯಿಂಟ್ ಆಗಲಿ, "tax evasion" ತಪ್ಪಿಸುವುದು ಸಾಧ್ಯವಿಲ್ಲ. ಆ ಮೇಲೆ ಇನ್ನೊಂದು ವಿಚಾರವೇನೆಂದರೆ, ಸಿಂಗಲ್‌ಪಾಯಿಂಟ್ ಮಾಡಿದಮೇಲೆ ಅದಕ್ಕೆ ಸರಿಯಾಗಿ Turn-over minimum ಎಷ್ಟೆಂಬುದನ್ನು ನಿಗದಿ ಮಾಡಬೇಕು. ಈಗ ಹಾಲಿ 10,000 ರೂಪಾಯಿಗಳೆಂದು ಹೇಳಿದ್ದೇವೆ. ಬೊಂಬಾಯಿನಲ್ಲಿ ಮಲ್ಟಿಪಾಯಿಂಟ್ ಇಟ್ಟುಕೊಂಡು 30,000ರೂಪಾಯಿಗಳನ್ನಿಟ್ಟುಕೊಂಡಿದ್ದಾರೆ. ಆದ್ದರಿಂದ ನಾವು limit ಎಷ್ಟು ಜಾಸ್ತಿಮಾಡಬೇಕೆಂದರೂ ಅಲ್ಲಿನಷ್ಟು ಜಾಸ್ತಿಮಾಡುವುದಕ್ಕಾಗುವುದಿಲ್ಲ. ಹಾಗೆ ಜಾಸ್ತಿಮಾಡಿತೆಂದರೆ ನಮಗೆ ಬರುವ ಹಣವೂ ಕಡಿಮೆಯಾಗುತ್ತದೆ.

Sri G. A. ACHARYA.—Are there not merchants whose turn-over is Rs. 7,500?

Sri H. C. DASAPPA.—There are people who have a turn-over of Rs. 10,000 and more.

Sri G. A. ACHARYA.—Who are more in number?

Sri H. C. DASAPPA.—Those between Rs. 10,000 and Rs. 30,000 will be a large number. So if you fix at Rs. 30,000 you will have to forgo a large slice of revenue. We have followed a *via media* and on a large number of articles we tax at a single point. Mill goods, cotton yarn, silk filature, and so on; Spun silk, gold bullion

species, newspapers, kerosene, cigarettes, cheroots, beedies, snuff and so on—all these are now taxed at single point With regard to so many articles which we export from out of the State like ground-nut, areca, copra, coconut, cardamom, raw coffee, unmanufactured tobacco, all these are taxed at single point and not at very heavy rate.

ಆದ್ದರಿಂದ ಈ ವಿಚಾರದಲ್ಲಿ ನಾನು ಹೆಚ್ಚಾಗಿ ಇನ್ನೇನೂ ಹೇಳಬೇಕಾಗಿಲ್ಲ. ಎಲ್ಲ ಜನರಿಗೆ ವಿಶೇಷವಾಗಿ ತೊಂದರೆಯುಂಟಾಗುತ್ತದೆಂದು ಕಂಡು ಬರುತ್ತದೋ ಅಂಥ ಕಡೆಗಳಲ್ಲೆಲ್ಲಾ ಸಿಂಗಲ್ ಪಾಯಿಂಟ್ ನಲ್ಲಯೇ ಹಾಕಿರುವುದಲ್ಲದೆ, ಅಲ್ಲಯೂ ಹೆಚ್ಚಿನ ದರದಲ್ಲೂ ಕೂಡ ಹಾಕಿಲ್ಲ. ಉದಾಹರಣೆಗೆ ಬಟ್ಟೆಗೆ ಕೇವಲ ಆರು ಕಾಸು ಮಾತ್ರ ಹಾಕಿದ್ದೇವೆ, ಈ ಪ್ರಕಾರ ಪ್ರತಿಯೊಂದು ವಿಷಯದಲ್ಲಿಯೂ ಒಂದು ತರದಲ್ಲಿ ರಿಕ್ಯಾಚಾರದ ರೀತ್ಯಾ ಹೋಗಿದ್ದೇವೆ. ಇಷ್ಟೆಲ್ಲಾ ಹೇಳಿದರೂ ಮಾನ್ಯ ಸದಸ್ಯರು ಸಿಂಗಲ್ ಪಾಯಿಂಟೇ ಇರಬೇಕೆಂದು ಹೇಳುವುದಾದರೆ —ಅವರೂ ಹೇಳುವುದಿಲ್ಲವೆಂದು ನಂಬಿದ್ದೇನೆ. ಏಕೆಂದರೆ ದೇಶದ ಹಿತದೃಷ್ಟಿಯಲ್ಲಿ ಇದೇ ಉತ್ತಮ ನಾವೇನೂ ಬೇರೆ ಹೇಳುವುದಕ್ಕಾಗುವುದಿಲ್ಲ.

ಆದರೆ, ಒಂದು ಅಂಶವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಿಚ್ಛಿಸುತ್ತೇನೆ. ಯಾವುದೇ ತೆರಿಗೆಯ ಕಾನೂನಿನ ವಿಚಾರದಲ್ಲೇ ಆಗಲಿ ಅದನ್ನು ಪದೇ ಪದೇ ಮಧ್ಯೆ ಮಧ್ಯೆ ಕೆದಕುವುದಕ್ಕೆ ಹೋಗುತ್ತಿರಕೂಡದು. ಯಾವಾಗ ಒಮ್ಮೆ ಈ ಮಹಾ ಸಭೆಯಲ್ಲಿ ಮತ್ತು the most popular House in the whole of India ಆಗಿರುವ ಪ್ರಜಾಪ್ರತಿನಿಧಿ ಸಭೆಯಲ್ಲೂ ಅಂಗೀಕೃತವಾಗಿ ರಾಜಮುದ್ರೆ ಅದಕ್ಕೆ ಬಿತ್ತೋ, ಅದನ್ನು ಮತ್ತೆ ಕೆದಕುವುದಕ್ಕೆ ಹೋಗಕೂಡದೆಂಬುದು ಒಂದು ರಾಜನೀತಿ. ಸ್ವಲ್ಪ ಕಾಲದವರೆಗೆ ಅದು ಕೆಲಸ ಮಾಡಿ ಒಂದು ವಿಧದಲ್ಲಿ ನೆಲೆಗೊಳ್ಳುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಎ. ಭೀವಪ್ಪನಾಯಕರು.—ಇದಕ್ಕೆ ರಾಜಮುದ್ರೆ ಯಾವಾಗ ಬಿತ್ತು ?

ಶ್ರೀ ಎಚ್. ಸಿ. ದಾಸಪ್ಪನವರು.—ಇದಕ್ಕೆ ಹಿಂದೆಯಿದ್ದ ರೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಯೇ ಅಂಗೀಕೃತವಾಗಿರುವುದಲ್ಲದೆ, ಆಗಿನ ಪ್ರಜಾಪ್ರತಿನಿಧಿ ಸಭೆಯಲ್ಲೂ ಅಂಗೀಕೃತವಾಗಿದೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಇದುವರೆಗೂ ದೇಶದಲ್ಲಿ ಈ ಸೇಲ್ಸ್‌ಟ್ಯಾಕ್ಸ್ ಕಾನೂನು ಯಾವ ರೀತಿ ಕೆಲಸಮಾಡುತ್ತಿದೆ, ಇದುವರೆಗೆ ಕೆಲಸಮಾಡಿರುವುದನ್ನು ನೋಡಿರುವುದರಲ್ಲ ಹೇಗೆ ಕೆಲಸಮಾಡುತ್ತಿದೆ, ಜನತೆಗೆ ಏನೇನು ತೊಂದರೆಗಳಾಗುತ್ತಿದೆ, ಸಾರ್ವಜನಿಕರಿಂದ ಪದೇ ಪದೇ ಏನೇನು ದೂರುಗಳೂ ಬೇಡಿಕೆಗಳೂಬಂದಿವೆ, ಅವುಗಳನ್ನು ಪರಿಹಾರ ಮಾಡುವುದಕ್ಕೆ ಏನು ಕಾರ್ಯಕ್ರಮಕ್ಕೆಕೊಳ್ಳಲಾಯಿತು—ಎಂಬುದನ್ನೆಲ್ಲಾ ನಿಮ್ಮ ಅಡ್ಮಿನಿಸ್ಟ್ರೇಷ್ ರಿಪೋರ್ಟಿನಲ್ಲಿ ತಿಳಿಸಿಲ್ಲ. ಏನಾದರೂ ನ್ಯೂನತೆಗಳು ಕಂಡು ಬಂದಿದ್ದರೆ ಅದನ್ನು ನಿರಿಪಡಿಸುವುದಕ್ಕೆ ಏನು ಮಾಡಿದ್ದೀರೆಂಬುದನ್ನು ತಿಳಿಸುತ್ತೀರಾ ?

ಶ್ರೀ ಎಚ್. ಸಿ. ದಾಸಪ್ಪನವರು.—ಪದೇ ಪದೇ ನಮಗೆ ನ್ಯೂನತೆಗಳು ಕಂಡು ಬಂದ ಹಾಗೆಲ್ಲಾ ಅವನ್ನು ನಿರಿಪಡಿಸಿದ್ದೇವೆ. ಉದಾಹರಣೆಗೆ ಪವರ್‌ಲೂಂ ನೀರೆಗಳ ವಿಷಯದಲ್ಲಿ ಕೈಮಗ್ಗದವರಿಗೆ ಹಾಕುವುದಕ್ಕೆ ಬದಲಾಗಿ consumer ಮೇಲೆ ಹಾಕಿ ಎಂದು ಕೇಳಿಕೊಂಡರು. They asked to pass it on to the consumers' level. Immediately we obliged them. What about silk ? Same thing with regard to cotton. ಇವೆಲ್ಲಾ ಒಂದೊಂದಾಗಿ ನಮ್ಮ ಗಮನಕ್ಕೆ ಬಂದು ಆಜ್ಞೆರಾಗಿ ಈ ರೀತಿಯಾಗಿದೆಯೇ ಹೊರತು ಇನ್ನೇನೂ ಇಲ್ಲ. ಆದ್ದರಿಂದ ಮುಖ್ಯವಾಗಿ—ನಾವು ಯಾವುದೊಂದು ಇಂಥಾ ತೆರಿಗೆಯ ಕಾನೂನು ರಚಿಸಿದರೂ, ಅದಕ್ಕೆ ಪ್ರಜಾಪ್ರತಿನಿಧಿ ಸಭೆಯವರು, ನ್ಯಾಯವಿಧಾಯಕ ಸಭೆಯವರು—ಅವರಾರೂ ಹೊರಗಿನವರಲ್ಲ, ನಮ್ಮ ಪ್ರತಿನಿಧಿಗಳೇ—ಒಪ್ಪಿಗೆ ಕೊಟ್ಟಿದ್ದಾರೆಂದ ಮೇಲೆ ನಾವದನ್ನು ಮತ್ತೆ ಮತ್ತೆ ಪ್ರಶ್ನಿಸಕೂಡದು. ಆಗಲೂ ಕೂಡ, ಮಲ್ಟಿ ಪಾಯಿಂಟ್ ಮಾಡೋಣವೇ, ಸಿಂಗಲ್ ಪಾಯಿಂಟ್ ಮಾಡೋಣವೇ ಎಂದು ಬಹುಮಟ್ಟಿಗೆ ಚರ್ಚೆಯಾಗಿ ಕೊನೆಗೆ ಸೆಲೆಕ್ಟ್ ಕಮಿಟಿಗೂ ಹೋಗಿ ಚರ್ಚೆಯಾಗಿ ಆಜ್ಞೆರಿನಲ್ಲಿ ಒಂದು ಪರಸ್ಪರ ಒಡಂಬಡಿಕೆಗೆ ಬಂದು ಎಲ್ಲರೂ ಒಮ್ಮತದಿಂದ ಒಪ್ಪಿ ಸಿಂಗಲ್ ಪಾಯಿಂಟೇ ಇರಬೇಕೆಂದು ತೀರ್ಮಾನಮಾಡಿ ನಿರ್ಧಾರಮಾಡಿದ್ದೇವೆ.

Sri G. VEERAPPA.—Is this House not competent to change it ?

Sri H. C. DASAPPA.—I am not saying that. What is it that this House is not competent to do ? Tomorrow it can pin the whole Act. There is no question of competency here.

ಯಾವಾಗ್ಯೂ ಒಂದು ಕಾಲಾವಧಿಕೊಟ್ಟು ನಿಧಾನವಾಗಿ ಮುಂದುವರಿಯುವುದು ಕ್ಷೇಮವೆಂದು ಹೇಳುತ್ತೇನೆ. ಇಷ್ಟೇ ಅಲ್ಲದೆ ಇನ್ನೂ ಒಂದು ವಿಚಾರವನ್ನು ಶ್ರೀ ವೀರಪ್ಪನವರ ಗಮನಕ್ಕೆ ತರುತ್ತೇನೆ. ಈಗ ಭಾರತದ ಅನೇಕ ಪ್ರಾಂತ್ಯಗಳಿಂದ ಈ ಸೇಲ್ಸ್‌ಟ್ಯಾಕ್ಸ್ ವಿಚಾರವಲ್ಲ ಕೇಂದ್ರಕ್ಕೆ ವರದಿಗಳು ಹೋಗಿವೆ. ಒಂದು ಕಡೆ ಸಿಂಗಲ್ ಪಾಯಿಂಟ್ ಇರುವುದು ಇನ್ನೊಂದು ಕಡೆ ಮಲ್ಟಿಪಾಯಿಂಟ್ ಇರುವುದು—ಹೀಗೆಲ್ಲಾ ಇದ್ದುಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ಪದಾರ್ಥಗಳ ರವಾನೆಗಳ ವಿಷಯದಲ್ಲಿ ಕೊಂದರೆ ಬಂದಿದೆ. ಸೇಲ್ಸ್ ಟ್ಯಾಕ್ಸ್ ಎಂಬುದು Provincial Revenue ಆಗಿದ್ದರೂ ಕೂಡ ಕೇಂದ್ರದವರೇ ಇದರ ವಿಚಾರದಲ್ಲಿ ಒಂದು ಕಾನೂನನ್ನೇರ್ಪಡಿಸುವುದು ಸೂಕ್ತವೆಂದು ಭಾವಿಸಿದ್ದಾರೆ. ಅದು ಅವರ ಪರ್ಯಾಲೋಚನೆಯಲ್ಲಿದೆ.

ಶ್ರೀ ಬಿ. ಹುಚ್ಚೇಗೌಡರು.—ಕಾಗಾದರೆ ಸೇಲ್ಸ್ ಟಾಕ್ಸ್ ಕೂಡ ಕೇಂದ್ರಕ್ಕೆ ಹೋಗುತ್ತದೆಯೆ ?

ಶ್ರೀ ಎಚ್. ಸಿ. ದಾಸಪ್ಪನವರು.—ಕೇಂದ್ರಕ್ಕೆ ಹೋಗುತ್ತದೆಂದು ಹೇಳಲಿಲ್ಲ. ಕೇಂದ್ರದವರೇ ಈ ವಿಚಾರದಲ್ಲಿ ಭಾರತಕ್ಕೆಲ್ಲಾ ಏಕರೀತಿಯಾಗಿರುವಂತೆ ಒಂದು ಕಾನೂನು ರಚಿಸುವುದಕ್ಕೆ ಜವಾಬ್ದಾರಿವಹಿಸಿಕೊಳ್ಳುವವರಾಗಿದ್ದಾರೆಂದು ಹೇಳಿದೆ. ಇಷ್ಟೆಲ್ಲಾ ಗವ ನದಲ್ಲಟ್ಟುಕೊಂಡು ಮತ್ತು ನಾನು ಕೊಟ್ಟ ಭರವಸೆಯ ಮೇಲೆ ಶ್ರೀವೀರಪ್ಪನವರು ತಮ್ಮ ನಿರ್ಣಯವನ್ನು ಒತ್ತಾಯಪಡಿಸುವುದಿಲ್ಲವೆಂದು ನಂಬಿದ್ದೇನೆ.

Sri G. VEERAPPA.—What about the suggestion of Sri Kadidal Manjappa ?

Sri H. C. DASAPPA.—That I will certainly examine. I would not like to do anything in haste. If it calls for a

committee, I will have members of this august Assembly to help me in advising.

Sri G. VEERAPPA.—In the light of what the Hon'ble Minister has assured us and of course as there has been a unanimous opinion with regard to this aspect of single point taxation even from the Opposition Bench, I am sure.....

Sri H. C. DASAPPA.—No speech is allowed.

Sri G. VEERAPPA.—I withdraw the resolution.

The resolution was, by leave of the Assembly, withdrawn.

Sri L. SIDDAPPA.—There is a sting in what he said "Even the Opposition Bench." Opposition Bench always supports reasonable measures.

Mr. SPEAKER.—The House will now rise for lunch and meet again 4-10.

The Assembly adjourned for lunch at Forty Minutes past Three of the Clock, and re-assembled at Ten Minutes past Four of the Clock, Mr. Deputy Speaker (Sri L. H. Thimma Boyi) in the Chair.

Mr. DEPUTY SPEAKER (Sri L. H. THIMMA BOYI).—Resolution No. 11.

Sri H. C. LINGA REDDY (Kolar District—General).—Sir, I am not moving the resolution standing in my name.

Mr. DEPUTY SPEAKER.—Resolution No. 12.

(Janab Syed Abdur Rahman who had tabled it was absent when called).

Mr. DEPUTY SPEAKER.—Resolution No. 13.

Sri T. RAMACHAR (Kolar District—General).—Sir, I do not propose to move my resolution.

Mr. DEPUTY SPEAKER.—No. 14.

RESOLUTION No. 14.

Payment to Raiyats to encourage Grow More Food Stuffs.

Sri B. HUTCHE GOWDA (Tumkur District—General).—Sir, I beg to move:

"That this Assembly is of the opinion that with a view to encourage raiyats to grow more food-stuffs throughout the State, they may be paid at least an amount not less than that spent by them to grow the respective food-grains at the time of acquisition."

ಸ್ವಾಮಿ, ದೇಶದಲ್ಲಿ ಆಹಾರಾಭಾವ ಕಳೆದ ಹತ್ತು ವರ್ಷಗಳಿಂದಲೂ ಒಂದೇ ಸಮನಾಗಿದೆ. ಇದನ್ನು ನಿವಾರಣೆಮಾಡತಕ್ಕ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರು. ಳಿಂದ ಅನೇಕ ರೀತಿಯ ಅಭಿಪ್ರಾಯಗಳು ಬರುತ್ತವೆ ಆದರೆ ಅವುಗಳ ಪೈಕಿ ಹೆಚ್ಚು ಆಹಾರ ಬೆಳೆಯಬೇಕೆಂಬುದು ಒಂದು. ಹಾಗೂ ನಮಗೆ ಅಷ್ಟನ್ನು ಬೆಳೆದಾಗ್ಯೂ ಜೋತಾ ಆಗುವುದನ್ನು ಹೊರಗಡೆಯಿಂದ ತರಿಸಿಕೊಳ್ಳುವುದು ಎರಡನೆಯದು. ಆದರೆ ನಾವೀಗ ವರ್ಷಂಪ್ರತಿ ಹೀಗೆ ಹೊರಗಡೆಯಿಂದ ಆಹಾರ ಪದಾರ್ಥಗಳನ್ನು ತರಿಸುವುದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತ ಬಂದಿದ್ದೇವೆ. ಹೀಗೆ ಈ ಒಂದು ಬಾಬುಗಾಗಿ ಇಷ್ಟು ಹಣ ಖರ್ಚಾಗುತ್ತಿರುವುದೇ ದೇಶದಲ್ಲಿ ಜನರ ನಾನಾ ವಿಧವಾದ ಮುಗ್ಗಟ್ಟುಗಳಿಗೆ ಕಾರಣವಾಗಿದೆ. ಈ ವಿಚಾರಗಳನ್ನೆಲ್ಲ ನಾವೆಲ್ಲರೂ ಮನಗಂಡವರಾಗಿದ್ದೇವೆ. ಆದಕಾರಣ ಅಷ್ಟು ಆಹಾರ ಸಾಮಗ್ರಿಗಳನ್ನು ನಮ್ಮ ದೇಶದಲ್ಲೇ ಹೆಚ್ಚಾಗಿ ಬೆಳೆಯಲು ಪ್ರಯತ್ನಪಡಬೇಕು. ಇದಕ್ಕಾಗಿ ಬೆಳೆಯತಕ್ಕವನಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯಬೇಕು. ಆದರೆ ಈಗ ಅವರಿಗೆ ದೊರೆಯುತ್ತಿರುವ ಪ್ರೋತ್ಸಾಹಗಳು ಎಷ್ಟರ ಮಟ್ಟಿಗೆ ಫಲಕಾರಿಯಾಗಿವೆಯೆಂಬುದನ್ನು ಮಾನ್ಯ ಸದಸ್ಯರೇ ಊಹಿಸಬೇಕಾಗಿದೆ. ನಿಜವಾಗಿಯೂ ಹೇಳುವುದಾದರೆ ರೈತನಲ್ಲಿ ಹೆಚ್ಚು ಬೆಳೆ ಬೆಳೆಯಬೇಕೆಂಬ ಉತ್ಸಾಹವೇ ಇಲ್ಲ. ಅವನು ಬಹಳ ನಿರುತ್ಸಾಹಯಾಗಿದ್ದಾನೆ. ಆತನ ಸ್ಥಿತಿ ಬಹಳ ಚಿಂತಾಜನಕವಾಗಿದೆ, ಕಳೆದ ಯುದ್ಧದಿಂದೀಚೆಗೆ ಪ್ರತಿಯೊಂದು ಸಾಮಾನಿನ ಬೆಲೆಯೂ ಏರಿಹೋಗಿ ತನ್ಮೂಲಕ ಕೂಲಿಯ ದರಗಳೆಲ್ಲ ವಿಪರೀತವಾಗಿ ಹೆಚ್ಚಿಹೋಗಿವೆ. ರೈತನು ಬೆಳೆದ ಸಾಮಾನುಗಳಿಗೆ ಬೆಲೆ ಕಡಿಮೆ. ಆದರೆ ಅದನ್ನು ಬೆಳೆಯತಕ್ಕ ವೆಚ್ಚ ಹೆಚ್ಚಾಗಿದೆ. ಪರಿಸ್ಥಿತಿ ಹೀಗಿರುವಲ್ಲಿ ತನ್ಮಧ್ಯೆ ಸರ್ಕಾರದವರು ಅರ್ಬಿಟ್ರರಿಯಾಗಿ ಅತನು ಬೆಳೆಯುತಕ್ಕ ವಸ್ತುಗಳ ಬೆಲೆ ಹೀಗೆ ಇರಬೇಕೆಂದು ನಿಷ್ಕರ್ಷೆಮಾಡಿದಮೇಲಂತೂ ರೈತನ ಹುಮ್ಮಸ್ಸೆಲ್ಲಾ ಮಣ್ಣುಪಾಲಾಗಿದೆ. ಈ ವಿಧಾನದಿಂದ ಹೆಚ್ಚು ಬೆಳೆ ಬೆಳೆಯುವಂತೆ ಮಾಡಲು ಖಂಡಿತ ಸಾಧ್ಯವಿಲ್ಲ. ಅದೇ ಆಹಾರ ಸಾಮಗ್ರಿಗಳಿಗೆ ಹೊರಗಡೆಯಾದರೆ ಏನು ಬೆಲೆ ಕೊಟ್ಟಿರುತ್ತಾರೋ, ಆ ಬೆಲೆಯನ್ನಾದರೂ ಇಲ್ಲಿ ಬೆಳೆಯತಕ್ಕವರಿಗೆ ಕೊಡುತ್ತೇವೆಂದು ಹೇಳಿದ್ದರೆ ಎಷ್ಟೋ ಉತ್ಸಾಹವಿರುತ್ತಿತ್ತು. ಹೀಗಾಗಿ ಹೊರಗಡೆಯವರಿಗೆ ನಮ್ಮವರು ಕೊಡತಕ್ಕ ಬೆಲೆಯನ್ನು ನಮ್ಮವ್ಯರತಕ್ಕ ರೈತನಿಗೆ ಕೊಡುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ನೀವು ಹೊರಗಡೆಯಿಂದ ಅಕ್ಕಿಯನ್ನು ಪಲ್ಲಾ ಒಂದಕ್ಕೆ ರೂ. 75-8-0 ಗಳ ಪ್ರಕಾರ ತರುತ್ತಿದ್ದೀರಿ. ಆದರೆ ಅದೇ ಅಕ್ಕಿಯನ್ನು ನಮ್ಮಲ್ಲಿ ಬೆಳೆದರೆ ಆಗ ರೈತನಿಗೆ ತಾವು ಕೊಡುತ್ತಿರು

ವುದು ಕೇವಲ 40 ರೂಪಾಯಿಗಳು ಮಾತ್ರ. ಇದು ಪರಮಾವಧಿಯ ಬೆಲೆ. ಹೀಗಾದರೆ ಯಾವ ರೈತನಿಗೆ ತಾನೆ ಹೆಚ್ಚು ಆಹಾರ ಬೆಳೆಯಲು ಉತ್ಸಾಹ ಬರುತ್ತೆ? ಹಿಂದಿನ ಕಾಲದಲ್ಲಿ ಕೂಲಿಯ ದರಗಳು ಕಮ್ಮಿಯಿದ್ದಾಗ ಈ ವ್ಯವಸಾಯವು ಒಂದು ಮುಖನಾಗಿ ನಡೆದುಕೊಂಡು ಬರುತ್ತಿತ್ತು. ಆದರೆ ಕಳೆದ ಯುದ್ಧಾನಂತರದಿಂದೀಚೆಗೆ ಜನರಿಗೆ ಬುದ್ಧಿಶಕ್ತಿಗಳು ಹೆಚ್ಚಾಗಿ ತಮ್ಮ ದುಡಿಮೆಯನ್ನು ನಾನಾಮಾರ್ಗಗಳಲ್ಲಿ ಮಾಡಿಕೊಳ್ಳುತ್ತಿದ್ದಾರೆ, ಕಂಟ್ರೋಲ್ ಬಂದಮೇಲಂತೂ ಜನರ ದುಡಿಮೆಗೆ ಪಾರವೇ ಇಲ್ಲದಂತಾಯಿತು. ಜನರು ದುಡ್ಡನ್ನು ನಾನಾ ದಾರಿಗಳಲ್ಲಿ ಸಂಪಾದನೆಮಾಡಲು ಹೊರಟಿದ್ದಾರೆ.

ಈ ಸಂಬಂಧದಲ್ಲಿ ನಾನೀಗ ಮತ್ತೊಂದು ಅಂಶವನ್ನು ಪ್ರಸ್ತಾಪಮಾಡಬೇಕಾಗಿದೆ. ಸರ್ಕಾರದವರು ಈಗ ಅನೇಕ ಪದಾರ್ಥಗಳ ಬೆಲೆಯನ್ನು ನಿಷ್ಕರ್ಷೆಮಾಡಿದ್ದಾರೆ. ಹೀಗೆ ನಿಷ್ಕರ್ಷೆ ಮಾಡುವಾಗ ಅದನ್ನು ಒಂದು ಲೆಕ್ಕಾಚಾರದ ಆಧಾರದ ಮೇಲೆಯೇ ಮಾಡಿರುತ್ತಾರೆ. ಹಾಗೆ ಒಂದು ಪದಾರ್ಥದ ಬೆಲೆಯನ್ನು ನಿಷ್ಕರ್ಷೆಮಾಡುವಾಗ ಮುಖ್ಯವಾಗಿ ಆಲೋಚನೆ ಮಾಡಬೇಕಾಗಿರುವುದು, ಕಚ್ಚಾ ಮಾಲಿನ ಬೆಲೆ ಎಷ್ಟು, ಅದನ್ನು ಒಂದು ಸ್ಥಳದಿಂದ ಮತ್ತೊಂದು ಕಡೆಗೆ ರವಾನೆಮಾಡಲು ತಗುಲುತಕ್ಕ ಖರ್ಚೆಷ್ಟು, ಮ್ಯಾನೇಜಿಂಗ್ ಶಿಬ್ಬಂದಿಯ ಮತ್ತು ಏಜನ್ಸಿಗಳ ಖರ್ಚೆಷ್ಟು, ಹಾಕಿರತಕ್ಕ ಮೂಲ ಬಂಡವಾಳಕ್ಕೆ ಬಡ್ಡಿಯೇನಾಗುತ್ತದೆ ಎಂಬಿತ್ಯಾದಿ ಅನೇಕ ವಿಷಯಗಳನ್ನು ಪರಿಶೀಲನೆ ಮಾಡಿ ಆ ಒಂದು ವಸ್ತುವಿನ ಬೆಲೆಯನ್ನು ನಿರ್ಧಾರಮಾಡುವುದು ಲೋಕಾರೂಢಿಯಲ್ಲಿದೆ. ಈ ಆಧಾರದ ಮೇಲೆಯೇ ತಾವೀಗ ಬಟ್ಟೆ ಬೆಲೆಯನ್ನು ನಿರ್ಧರಮಾಡಿದ್ದೀರಿ. ಹೀಗೆಯೇ ಇನ್ನೂ ಅನೇಕ ಸಾಮಾನುಗಳು, ಉದಾಹರಣೆಗೆ ಉಪ್ಪು, ಶೀಮೆ ಎಣ್ಣೆ, ಸಿಮೆಂಟ್, ಪೆಟ್ರೋಲ್ ಇತ್ಯಾದಿ ಸಾಮಾನುಗಳಿಗೆ ಬೆಲೆಯನ್ನು ನಿಷ್ಕರ್ಷೆಮಾಡುತ್ತೀರಿ. ಹೀಗೆ ಈ ಪ್ರತಿಯೊಂದು ಬಾಬುಗಳಲ್ಲಿಯೂ ಖರ್ಚುಗಳಿಗಿಂತಲೂ ಬರತಕ್ಕ ಉತ್ಪತ್ತಿ ಹೆಚ್ಚಾಗಿದೆ. ಆ ಕಾರಣದಿಂದಲೇ ದಿನೇ ದಿನೇ ಈ ವಸ್ತುಗಳ ತಯಾರಿಯು ಅಭಿವೃದ್ಧಿ ಹೊಂದಿ ದೇಶದ ನಾನಾ ಕಡೆಗಳಲ್ಲಿ ನಿರಾತಂಕವಾಗಿ ಬೆಳೆದುಕೊಂಡುಬರುತ್ತಿವೆ. ಆದರೆ ದುರಾದೃಷ್ಟವಶಾತ್ ರೈತನ ಕನಸು ಹಾಗಿಲ್ಲ. ವ್ಯವಸಾಯಗಾರನಿಗೆ ಯಾವಾಗ್ಯೂ ಉತ್ಪತ್ತಿಗಿಂತ ಖರ್ಚೇ ಹೆಚ್ಚಾಗಿದೆ. ಇದು ಕ್ಷೀಣಗತಿಗೆ ಬರುತ್ತಿರುವುದಕ್ಕೆ ಇದೂ ಒಂದು ಮುಖ್ಯ ಕಾರಣ. ರೈತನು ಬೆಳೆಯತಕ್ಕ ಪದಾರ್ಥಗಳ ಬೆಲೆಯನ್ನೂ ಸಹ ತಾವು ಏಕೆ ಅದೇ ರೀತಿಯಲ್ಲಿ ನಿರ್ಧರಿಸಿಲ್ಲ? ಬಹುಶಃ ಅವರು ಬಂದು ತಮ್ಮಲ್ಲಿ ಕೇಳಿಕೊಳ್ಳಲಿಲ್ಲವೇನೋ! ಆದರೆ ನಮ್ಮ ಮೈಸೂರು ದೇಶದ ವ್ಯವಸಾಯಗಾರರಲ್ಲಿ ಸೇಕಡ 50 ರಷ್ಟು ರೈತರು ಕೇವಲ ಸಣ್ಣ ಸಣ್ಣ ಹಿಡುವಳಿದಾರರಾಗಿ ಒಬ್ಬೊಬ್ಬನಿಗೆ ಅರ್ಧ ಎಕರೆ, ಒಂದು ಎಕರೆ, ಕೆಲವರು 2 ಎಕರೆ ಹೀಗೆ 5 ಎಕರೆಗಳಿಗಿಂತಲೂ ಹೆಚ್ಚಾದ ಜಮೀನ್ದಾರರಾಗಿರುವುದಿಲ್ಲ. ಇವರೆಲ್ಲರೂ ಒಗ್ಗಟ್ಟಾಗಿ ಬಂದು ಸರ್ಕಾರದವರಲ್ಲಿ ತಮ್ಮ ಕುಂದು ಕೊರತೆಗಳನ್ನು ಹೇಳಿಕೊಳ್ಳಲು ಅವಕಾಶವಿಲ್ಲದಂತಾಗಿದೆ. ಸರ್ಕಾರದವರು ಹೀಗೆ ಆತನ ಮೇಲೆ ಅನೇಕ ತೆರನಾದ ಕಟ್ಟುನಿಟ್ಟುಗಳನ್ನು ಹಾಕಿರುವುದರಿಂದ ಆತನು ಈ ಆಹಾರ ಸಾಮಗ್ರಿಗಳನ್ನು ಬೆಳೆಯುವುದನ್ನೇ ಕೈಬಿಟ್ಟಿದ್ದಾನೆ. ಬೆಳೆದು ಹೀಗೆ ನಾನಾ ತೊಂದರೆಗಳಿಗೂ, ನಷ್ಟಕ್ಕೂ ಈಡಾಗುವುದರ ಬದಲು ಬೆಳೆಯದೆ ಸುಮ್ಮನಿರುವುದೇ ಲೇಸೆನಿಸಿದೆ ಆತನಿಗೆ. ಹಾಗೊಂದುವೇಳೆ ಕೆಲವರು ತಮ್ಮ ಹೊಟ್ಟೆಯಪಾಡಿಗಾಗಿ ಬೆಳೆದರೆ ಸರ್ಕಾರದವರು ಹೇಳದೆ ಕೇಳದೆ ಆತನ ಮನೆಯನ್ನು ನುಗ್ಗಿ ಎಲ್ಲವನ್ನೂ ಜಪ್ತಿ ಮಾಡಿಕೊಂಡು ತಂದುಬಿಟ್ಟಿದ್ದಾರೆ. ಇದನ್ನೆಲ್ಲಾ ನೋಡಿದರೆ ರೈತನು ಬೆಳೆಯುವುದೇ ಒಂದು ಅಪರಾಧವಾಗಿ ಪರಿಣಮಿಸಿ ಕೊನೆಗೆ ಬೆಳೆಯೇ ಕಡಿಮೆಯಾಯಿತು.

ಶ್ರೀ ಜಿ. ಎ. ಆಚಾರ್ಯರು.—ಬೆಳೆಯುವುದೂ ಅಪರಾಧವೇ?

ಶ್ರೀ ಬಿ. ಹುಚ್ಚೇಗೌಡರು.—ಹೌದು. ಬೆಳೆಯುವುದೂ ಒಂದು ಅಪರಾಧವೆ.

ಶ್ರೀ ಜಿ. ಎ. ಆಚಾರ್ಯರು.—ಬೆಳೆದಿದ್ದನ್ನು ಕೊಡದಿದ್ದರೆ ಆಗ ಅಪರಾಧವಾಗುತ್ತದೆ.

Mr. DEPUTY SPEAKER.—He is just explaining the fate of the raiyat. He may be given a patient hearing.

ಶ್ರೀ ಬಿ. ಹುಚ್ಚೇಗೌಡರು.—ಆತನು ಬೆಳೆದದ್ದನ್ನು ಕೊಡಲೇಬೇಕೆಂದು ಕೇಳುವುದಕ್ಕೆ ಅದು ಯಾರಪ್ಪನ ಸಾಲ? ಅದಕ್ಕೆ ಯಾರು ನೀರುಹಾಕಿ, ಕಷ್ಟಪಟ್ಟು ಬೆಳೆದದ್ದು? ವರ್ತಕನ ಬಳಿ ಇರತಕ್ಕ ಪದಾರ್ಥಗಳಿಗೆ ಎದ್ದರೆ ಲಾಭ, ನಿಂತರೆ ಲಾಭ, ಒಂದು ಕೈ ಬದಲಾಯಿಸಿ ಮತ್ತೊಂದು ಕೈಗೆ ಹೋದರೆ ಲಾಭ—ಹೀಗೆ ತಮ್ಮದಕ್ಕಾದರೆ ಈ ವರ್ತಕರಿಗೆ ನಿರ್ಬಂಧವಿಲ್ಲ. ರೈತನು ಎಷ್ಟು ಭಾರ ಹೊರಬೇಕಾಗಿದೆ. ಆತನು ಕಾರ್ಯವೆಶಾತ್ ಖಜಾನೆಗೆ ಬಂದರೆ ಹಣ ಕಟ್ಟಬೇಕಾದರೆ ಹತ್ತಾವರ್ತಿ, ಹತ್ತಾರು ಜನಗಳ ಹತ್ತಿರ ಸುತ್ತಾಡಬೇಕಾಗಿದೆ. ಅವನು ಅಷ್ಟು ಅನಕ್ಷರಸ್ಥನಾಗಿದ್ದಾನೆ. ಅಂಥಾದ್ದನ್ನೆಲ್ಲಾ ನಿವಾರಣೆಮಾಡಲು ಏನು ಸಹಾಯಗಳನ್ನು ನೀವು ಆತನಿಗೆ ನೀಡಿದ್ದೀರಿ?

ಅದೂ ಅಲ್ಲದೆ ಕೈಗಾರಿಕಾ ಕಾರ್ಖಾನೆಗಳವರು ಕೂಲಿಗಾರರಿಗೆ ಸಾಕಷ್ಟು ಕೂಲಿ ಕೊಡುತ್ತಾರೆ ಮತ್ತು ಆ ಕೂಲಿಯಿಂದ ಪಟ್ಟಣವಾಸದಲ್ಲಿ ಅರ್ಧ ಪಾವು ಅಥವಾ ಒಂದು ಪಾವು ರೇಷನ್ ಪದಾರ್ಥ ಪಡೆದು ಜೀವನ ಮಾಡಬಹುದು. ರೇಷನ್ ಪಟ್ಟಣದಲ್ಲಿ ತೊಂದರೆಯಿಲ್ಲದೆ ನಿಗದಿಯಾಗಿರುವಷ್ಟು ಸಿಕ್ಕುತ್ತದೆ. ಅದೇ ವ್ಯವಸಾಯಗಾರನಿಗೆ ಆ ಅನುಕೂಲತೆಯಿಲ್ಲ. ರೈತ ಫಸಲನ್ನು ಹಗಲೂ ರಾತ್ರಿ ಕಾಯಬೇಕು. ಇಲ್ಲದಿದ್ದರೆ ದನಗಳು ಮೇದುಕೊಂಡು ಹೋಗುತ್ತವೆ. ಸಕಾಲದಲ್ಲಿ ಸಾಕಷ್ಟು ಮಳೆ ಬೀಳದಿದ್ದರೆ ಫಸಲು ಹೋಗಿಬಿಡುತ್ತದೆ. ಅಂಥ ಕಾಲದಲ್ಲಿ ಅವನಿಗೆ ರೇಷನ್ ಕೊಡಲು ಸರ್ಕಾರದವರು ಏನಾದರೂ ಏರ್ಪಾಡುಮಾಡಿದ್ದಾರೆಯೆ? ಏನೂ ಇಲ್ಲ. ಶ್ರೀಮನ್ಮಹಾರಾಜರವರ ಭಾಷಣದಲ್ಲಿ ಹೇಳಿರುವಂತೆ ಬೆಳೆದವನ ಅವಶ್ಯಕತೆಗಳಿಗಿಂತ ಹೆಚ್ಚಾಗಿರುವುದನ್ನು ತೆಗೆದುಕೊಳ್ಳುತ್ತಿದ್ದೇವೆಂದು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಅಷ್ಟನ್ನು ಬೆಳೆದವನಿಂದ ತೆಗೆದು ಕೊಂಡ ಮೇಲೆ ಅವನಿಗಿಲ್ಲದೇ ಇರುವಾಗ ಕೊಡುವುದಕ್ಕೆ ಜವಾಬ್ದಾರಿ ಬೇಡವೆ? ಹಾಗಿಲ್ಲದೇ ಇದ್ದಮೇಲೆ ಅವನೇಕೆ ಬೆಳೆಯಬೇಕು? ವ್ಯವಸಾಯದ ಕಸಬನ್ನೇಕೆ ಮಾಡಬೇಕು? ಮಿಲ್ಲಿಗೆ ಹೋಗಿ ಏಕೆ ಕೆಲಸಮಾಡಬಾರದು? ಅವನು ಬೆಳೆದು ಕಷ್ಟ ನಷ್ಟವನ್ನೇಕೆ ಅನುಭವಿಸಬೇಕು? ಉದಾಹರಣೆಗೆ ಹಿಂದೆ ಮಲೆನಾಡಿನ ಬೇಸಾಯಕ್ಕಾಗಿ ಮೈದಾನದಿಂದ ಬೇಕಾಡಷ್ಟು ಜನರು ಹೋಗುತ್ತಿದ್ದರು. ಸಾಮಾನ್ಯವಾಗಿ ಒಬ್ಬ ರೈತ ವ್ಯವಸಾಯಮಾಡಿದರೂ ಕಳೆ ಕೀಳುವುದಕ್ಕೆ, ಬೆಳೆ ಕೊಯ್ದು ರೇಖೆಮಾಡುವುದಕ್ಕೆ ಮತ್ತು ಇತರ ಬೇಸಾಯದ ಕಸಬುಗಳಿಗೆ ಹೆಚ್ಚು ಮಂದಿ ಕೂಲಿಯಾಳುಗಳು ಬೇಕು. ಒಬ್ಬನೇ ಎಲ್ಲವನ್ನೂ ಮಾಡಲು ಸಾಧ್ಯವಿಲ್ಲ. ಕೂಲಿಗಳಿಗೆ ಹಿಂದೆದವಸ ಕೊಡುತ್ತಿದ್ದರು. ಈಗ ಸಾಲದೆ ಹಣ

ಕೊಟ್ಟರೆ ಅವರಿಗೆ ತೊಂದರೆ. ಹೀಗಾಗಿ ದವಸ ಪಡೆಯುವುದು ಕಷ್ಟವಾಗಿದೆ. ಹಳ್ಳಿಗಳಲ್ಲಿ ಸಾಮಾನ್ಯವಾಗಿ ಕಾಳ ಸಂತೆ ವ್ಯಾಪಾರವಿದೆಯೆಂದು ಹೇಳುತ್ತಾರೆ. ಆದರೆ ಧಾನ್ಯವಿರುವವರು ಯಾರೂ ಆ ರೀತಿ ಮಾಡಲಾರರು. ಯಾರಿಗೆ ಆಹಾರ ಪದಾರ್ಥವಿಲ್ಲವೋ ಅಂಥವರು ಕಾಳ ಸಂತೆಯಲ್ಲಿ ಬೇರೆ ಸಿಕ್ಕದೆ ಕೊಳ್ಳಬೇಕಾಗುತ್ತದೆ. ಹಾಗೆ ಕೊಂಡು 50 ಸೇರು ಅಥವಾ ಒಂದು ಪಲ್ಲ ಇಟ್ಟಿದ್ದರೆ ಅದನ್ನು ಏನೋ ಲೆಕ್ಕಹಾಕಿ ತೆಗೆದುಕೊಂಡು ಹೋಗುತ್ತಾರೆ: 10 ಪಲ್ಲ ಇದ್ದರೆ ಲೆಕ್ಕದ ಪ್ರಕಾರ 5 ಪಲ್ಲ ಕೊಡಬೇಕೆಂದು ಕಿತ್ತುಕೊಂಡು ಬರುತ್ತಾರೆ. ಹೀಗೆ ಅವಶ್ಯಕವಾಗಿ ಜೀವನಕ್ಕೇ ಸಾಲದಷ್ಟು ಇಟ್ಟುಕೊಂಡಿದ್ದರೂ ಅದನ್ನೂ ಬಿಡುವಹಾಗಿಲ್ಲ. ಇಂಥ ಉದಾಹರಣೆಗಳು ಬೇಕಾದಷ್ಟಿವೆ. ಅವನ್ನು ಹೇಳಲು ಇಷ್ಟವಿಲ್ಲ. ಈ ಸಭೆಯಲ್ಲಿ ಹಳ್ಳಿಗಳಿಂದ ಬಂದಿರುವ ಸದಸ್ಯರು ಬಹಳ ಮಂದಿ ಇದ್ದಾರೆ: ಅವರಿಗೆ ಈ ವಿಚಾರ ಚೆನ್ನಾಗಿ ಅನುಭವವಿರುವುದರಿಂದ ಹೆಚ್ಚಾಗಿ ಹೇಳುವುದಿಲ್ಲ. ದೇಶದಲ್ಲಿ ಹೆಚ್ಚು ಆಹಾರ ಬೆಳೆಯಬೇಕು, ಸರ್ಕಾರಕ್ಕೂ ತೊಂದರೆಯಾಗಬಾರದು, ಆಹಾರಕ್ಕಾಗಿ ಹಂಬಲಿಸುವುದೂ ತಪ್ಪಬೇಕು ಎಂಬ ಉದ್ದೇಶದ ಮೇಲೆ ಇಷ್ಟು ವಿಚಾರ ಹೇಳುತ್ತಿದ್ದೇನೆ. ಈಗ ಇರುವ ತೊಂದರೆಯನ್ನು ವಿವರಿಸುವುದಕ್ಕೆ ನಾನು ನಿಂತಿಲ್ಲ. ಆಹಾರವು ಕಡಮೆಯಾಗದಂತೆ ನೋಡಿಕೊಳ್ಳಲು ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬುದನ್ನು ವಿವರಿಸಬೇಕೆಂದಿದ್ದೇನೆ.

ಇನ್ನೊಂದು ವಿಚಾರ. ಒಬ್ಬ ರೈತ ತನ್ನ ಜಮೀನಿನಲ್ಲಿ ಹಣ ಬರುವ ಬೆಳೆಯನ್ನು ಅಂದರೆ ಹತ್ತೋಟಿಗೊಳಪಡದೇಯಿರುವುದನ್ನು ಬೆಳೆದರೆ ಅವನಿಗೆ ಯಾವ ಕಷ್ಟವೂ ಇಲ್ಲ. ಆಹಾರಧಾನ್ಯ ಬೆಳೆದರೆ ಮಾತ್ರ ಕಷ್ಟ. ಒಂದು ಪ್ಲಾಯಿನಿನಲ್ಲಿ ಕಡಲೇಕಾಯಿ, ಆಲೂಗೆಡ್ಡೆ ಮುಂತಾದ್ದು ಬೆಳೆದರೆ ಎಷ್ಟು ರೂಪಾಯಿ ಉತ್ಪತ್ತಿ ಬರುತ್ತದೆಯೋ ಅಷ್ಟು ರಾಗಿ, ಬತ್ತ ಅಥವಾ ವೀಟ್ಸ್ ಬೆಳೆದರೆ ಬರುವುದಿಲ್ಲ. ಆದ್ದರಿಂದ ಆಹಾರ ಧಾನ್ಯವನ್ನೇಕೆ ಬೆಳೆಯಬೇಕು? ಇದನ್ನು ಯೋಚನೆಮಾಡಬೇಕು. ದೇಶಾಭಿಮಾನ ಏರಬೇಕು, ಬೇಕಾದಷ್ಟು ಆಹಾರ ಬೆಳೆಯಬೇಕು, ಸಹಾಯಮಾಡಿ ಎಂದು ನಮ್ಮನೆ ಪ್ರಚಾರಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ಮನುಷ್ಯನ ಸ್ವಭಾವ ಯಾವಾಗಲೂ ಉತ್ಪತ್ತಿ ಜಾಸ್ತಿ ಬರುವ ಕಡೆ ನಿಗಾ ಇಡುವುದೇ ಆಗಿದೆ. ಯಾರದೂ ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಯಾವ ಮನುಷ್ಯನಿಗೇ ಆಗಲಿ ಆಹಾರ ಬೇಕು. ಬೆಳೆಯಕೂಡದೆಂದು ಯಾರೂ ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ ಬೆಳೆಯುವವನಿಗೆ ಅವನ ಕೆಲಸಕ್ಕೆ ತಕ್ಕಷ್ಟು ಪ್ರತಿಫಲ ಬರಬೇಡವೆ? ಅದನ್ನು ನೋಡದಿದ್ದರೆ ಏನು ಪ್ರಯೋಜನ?

ಪೊನ್ನೆ ಶ್ರೀ ಟಿ. ಮರಿಯಪ್ಪನವರು ವೃತ್ತಪತ್ರಿಕಾ ಕರ್ತರ ಸಮ್ಮೇಳನದಲ್ಲಿ ಹೆಚ್ಚಾಗಿ ಆಹಾರ ಬೆಳೆಯುವ ಯೋಜನೆ ಒಂದನ್ನು ವಿವರಿಸಿದರು. ಅದರಲ್ಲಿ ಮುಖ್ಯವಾದ ಒಂದು ಅಂಶವಿದೆ. ಇನ್ನು ಮುಂದೆ ವ್ಯವಸಾಯವನ್ನು ಒಂದು ಕೈಗಾರಿಕೆಯೆಂದು ಭಾವಿಸಿ ನಾವು ಅದನ್ನು ನೋಡುತ್ತೇವೆಂದು ಹೇಳಿದರು. ಅದು ರೈತರಿಗೆ ದೊಡ್ಡ ಉಪಕಾರ. ಇನ್ನು ಮುಂದಾದರೂ ಎಲ್ಲವೂ ಸರಿಹೋಗುತ್ತದೆಯೆಂದು ಪೂರ್ಣ ನಂಬಿಕೆಯಿಟ್ಟು ಅದಕ್ಕೆ ಕೃತಜ್ಞತೆಯನ್ನು ಮಾನ್ಯ ನಚಿವರಿಗೆ ಸೂಚಿಸುತ್ತೇನೆ. ಆದರೆ ಈಗ ಸ್ವಲ್ಪ ದಿವಸಗಳ ಹಿಂದೆ ಧಾರಣೆಯನ್ನು ಪಲ್ಲಾ ಒಂದಕ್ಕೆ ಒಂದು ರೂಪಾಯಿ ಇಳಿಸಿದರು. ಅದಕ್ಕೆ ಯಾವ ಸೈಂಟಿಫಿಕ್ ಬೇಸಿಸ್ ಇದೆ? ಆರ್ಬಿಟ್ರರಿಯಾಗಿ ಇಷ್ಟೇ ಬೆಲೆ ಕೊಡಬೇಕೆಂದು ಹೇಳುವುದೇಕೆ? ಅದರಿಂದ ಅನುಕೂಲವೇನಾಗಿದೆ? ತನಗಾಗಿ ಹೆಚ್ಚಾಗಿರುವುದನ್ನು ಯಾವುದಾದರೂ ಮಾರಲೇಬೇಕು. ತನ್ನ ಕುಟುಂಬಕ್ಕೆ ಮತ್ತು ಕೂಲಿಗಳಿಗೆ ಕೊಡುವುದಕ್ಕೆ ಬೇಕಾದಷ್ಟನ್ನು ಇಟ್ಟುಕೊಳ್ಳಲು ಅವಕಾಶ ಕೊಡದಿದ್ದರೆ ಹೇಗೆ? ನಾನೇ ನೋಡಿರುವಹಾಗೆ ಚೆನ್ನಗಿರಿಯಲ್ಲಿ ಒಬ್ಬೊಬ್ಬ ರೈತ 2-3 ಸಾವಿರ ಪಲ್ಲ ಬೆಳೆಯುತ್ತಾನೆ. ಕೊನೆಗೆ ಅವನಿಗೆ 3 ಪಲ್ಲ ದಿನಸಿಯಾದರೂ ಬೇಡವೆ? 60 ಎಕರೆ ಸಾಗುಮಾಡಿದರೂ ಒಬ್ಬನೇ ಹೇಗೆ ರೇಖೆ ಮಾಡುವುದಕ್ಕೆ ಸಾಧ್ಯ? ಕಯ್ಯಾಗೆ, ರೇಖೆ ಮಾಡುವುದು ಮಗ್ಯೆರೆ ಕಸಬಿಗೆ ಬೇಕಾದಷ್ಟು ಕೂಲಿ ಬೇಕು.

ಉಪಾಧ್ಯಕ್ಷರು.—ಈಗ ಕೊಟ್ಟಿರುವುದು ಜಾಸ್ತಿ ಅಥವಾ ಕಡಿಮೆ ಎಂಬ ಆ ವಿಚಾರದಲ್ಲಿ ಮಾತ್ರ ಸರ್ಕಾರಕ್ಕೆ ಸಲಹೆ ಕೊಡಿ, ಬಾಕಿ ವಿಚಾರಗಳು ಅನಾವಶ್ಯಕ.

ಶ್ರೀ ಎ. ಹುಚ್ಚೆಗೌಡರು.—ಕೂಲಿ ಎಲ್ಲಾದರೂ ಸಿಕ್ಕಿದರೂ ಕೂಡ ಅವರಿಗೆ ದಿನಸಿ ಸಿಕ್ಕುವುದಿಲ್ಲ. ಕೂಲಿಗೆ ತಕ್ಕಷ್ಟು ದಿನಸಿ ಬೇಕು. ಅದೇ ಆಫೀಸುಗಳಲ್ಲಿ 11 ಗಂಟೆಯಿಂದ 5 ಗಂಟೆಯವರೆಗೆ ಕೆಲಸಮಾಡುವವರಿಗೆ ದುಡ್ಡು ಕೊಟ್ಟರೆ ದಿನಸಿ ಸಿಕ್ಕುತ್ತದೆ. ಹಾಗಿರುವಾಗ ಹೊರಗಡೆ ದುಡಿಯುವ ಕೂಲಿಗೆ ಸರಿಯಾಗಿ, ದುಡ್ಡಿಗೆ ದಿನಸಿ ಸಿಕ್ಕದಿದ್ದರೆ ಆ ಕೆಲಸ ಏಕೆ ಮಾಡಬೇಕು?

ಯಾವಾಗ ಮನುಷ್ಯನಿಗೆ ವ್ಯವಸಾಯದಿಂದ ತಾನು ದುಡಿಯುವುದಕ್ಕೆ ತಕ್ಕಷ್ಟು ಕೂಲಿ ಸಿಕ್ಕುವುದಿಲ್ಲವೋ ಆಗ ಅವನು ಏಕೆ ಆ ಕೆಲಸ ಮಾಡಬೇಕು? ಒಂದು ಆಹಾರ ಪದಾರ್ಥದ ಧಾರಣೆಯನ್ನು ಗೊತ್ತುಮಾಡಬೇಕಾದರೆ, ಅನೇಕ ವಿಷಯಗಳನ್ನು ಗಮನಿಸಬೇಕು. ಅದನ್ನು ಉತ್ಪತ್ತಿ ಮಾಡಲು ಹಾಕುವ ಬಂಡವಾಳ ಎಷ್ಟು, ಕೂಲಿ ಎಷ್ಟು, ವ್ಯವಸಾಯದ ಇತರ ಖರ್ಚುಗಳೆಷ್ಟು ಬೀಳುತ್ತವೆ, ಗೊಬ್ಬರಕ್ಕೆ ಎಷ್ಟು ಖರ್ಚು ಮಾಡಬೇಕಾಗುತ್ತದೆ, ನೀರು ಹಾಯಿಸುವುದಕ್ಕೆ ಎಷ್ಟು ಖರ್ಚಾಗುತ್ತದೆ, ಹೊಲದಲ್ಲಿ ಬೆಳೆಯುವುದಕ್ಕೆ ಎಷ್ಟು ಖರ್ಚಾಗುತ್ತದೆ, ಗದ್ದೆಯಲ್ಲಿ ಬೆಳೆಯುವುದಕ್ಕೆ ಎಷ್ಟು ಖರ್ಚಾಗುತ್ತದೆ, ಬೆಳೆಯನ್ನು ಕಯ್ಯುವುದಕ್ಕೆ ಎಷ್ಟು ಖರ್ಚಾಗುತ್ತದೆ, ರೇಖೆ ಮಾಡಿ ಸಾಗಿಸಲು ಎಷ್ಟು ಖರ್ಚಾಗುತ್ತದೆ, ಇವೇ ಮುಂತಾದ ಅನೇಕ ಬಾಬುಗಳಿಗಾಗುವ ಖರ್ಚನ್ನು ಲೆಕ್ಕ ಹಾಕಿ ಅದರ ಮೇಲೆ ಪದಾರ್ಥಗಳ ಬೆಲೆಯನ್ನು ನಿಗದಿ ಮಾಡಬೇಕೆಂದು ನನ್ನ ಅಭಿಪ್ರಾಯ. ಈ ರೀತಿ ಆಯಾ ಪದಾರ್ಥಗಳನ್ನು ಉತ್ಪತ್ತಿ ಮಾಡಲು ತಗಲುವ ಖರ್ಚಿಗೆ ತಕ್ಕಂತೆ ಎಲ್ಲಿಯವರೆಗೆ ಸಾಧ್ಯವಿಲ್ಲವೋ ಅಲ್ಲಿಯವರೆಗೆ ಆಹಾರ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ಸಾಧ್ಯವಿಲ್ಲವೆಂದು ಇಂಡಿಯಾ ಸರ್ಕಾರದವರು ನಿರ್ಪಡಿಸಿದ ಸಮಿತಿಯವರು ಕೂಡ ಅಭಿಪ್ರಾಯಪಟ್ಟಿದ್ದಾರೆ. ಯಾವಾಗ ಆಹಾರ ಧಾನ್ಯಗಳನ್ನು ಬೆಳೆಯುವುದರಿಂದ ಹೆಚ್ಚಿನ ಬೆಲೆ ಬರುವುದಿಲ್ಲವೋ ಆಗ ವ್ಯವಸಾಯಗಾರರು ಲಾಭದಾಯಕವಾದ ಹತ್ತಿ ಮುಂತಾದ ಬೆಳೆಗಳನ್ನು ಬೆಳೆಯಲು ಪ್ರಯತ್ನಿಸುತ್ತಾರೆ. ಇದು ಮನುಷ್ಯ ಸ್ವಭಾವ. ಆದುದರಿಂದ ನಾನು ಹೇಳುವುದಿಷ್ಟೆ. ಸರ್ಕಾರದವರು ತಕ್ಕ ಕಾರ್ಯಕ್ರಮ ಕೈಕೊಂಡು ವ್ಯವಸಾಯ ಕಸಬು ಒಂದು ಆಕರ್ಷಣೀಯವಾದ ಕಸಬನ್ನಾಗಿ ಮಾಡಬೇಕು. ಹೀಗೆ ಮಾಡಿ ಯಾರು ಯಾರು ಹಳ್ಳಿಗಳಿಂದ ವ್ಯವಸಾಯದ ಕಸಬನ್ನು ಬಿಟ್ಟು ಪಟ್ಟಣಗಳಿಗೆ ಬಂದು ಸೇರಿದ್ದಾರೋ ಅವರು ಹಿಂದಕ್ಕೆ ಹೋಗಿ ವ್ಯವಸಾಯವನ್ನು ಮಾಡಲು ಅವಕಾಶವಾಗುವಂತೆ ಮಾಡಬೇಕು. ವ್ಯವಸಾಯಗಾರರಿಗಾಗುವ ಖರ್ಚುಗಳೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಅದರ ಮೇಲೆ ಧಾನ್ಯಗಳ ಬೆಲೆ ಗೊತ್ತುಮಾಡಬೇಕು.

ಶ್ರೀ ಎಸ್. ರಂಗರಾಮಯ್ಯನವರು.—ಹಾಗಾದರೆ ಆಹಾರ ಧಾನ್ಯಗಳ ಬೆಲೆ ಹೆಚ್ಚು ಮಾಡಬೇಕೆಂದು ನಿಮ್ಮ ಅಭಿಪ್ರಾಯವೇ?

ಶ್ರೀ ಬಿ. ಹುಚ್ಚೇಗೌಡರು.—ಈಗಿರುವ ಬೆಲೆ ವ್ಯವಸಾಯಗಾರರಿಗೆ ಸಾಲದೇಯಿರುವುದರಿಂದ ಅವರು ವ್ಯವಸಾಯವನ್ನು ಬಿಟ್ಟು ಬೇರೆ ಕೆಲಸಗಳಿಗೆ ಹೋಗುತ್ತಿದ್ದಾರೆಂದು ನಾನು ಮೊದಲನಿಂದಲೂ ಹೇಳುತ್ತಲೇ ಇದ್ದೇನೆ.

ಇದರ ವಿಷಯದಲ್ಲಿ ಸರ್ಕಾರದವರು ತಾವು ವ್ಯವಸಾಯಗಾರರಿಗೆ ಅನೇಕ ರಿಯಾಯಿತಿಗಳನ್ನು ಕೊಡುತ್ತಿದ್ದೇವೆಂದು ಹೇಳಿಕೊಳ್ಳಬಹುದು. ಆದರೆ ಅದರಿಂದ ರೈತರಿಗೆ ಏನೂ ಉಪಯೋಗವಾಗುತ್ತಿಲ್ಲವೆಂದು ಹೇಳಬೇಕಾಗಿದೆ. ಅವರ ಕೈ ಸೇರುವುದೂ ಇಲ್ಲ. ಅವರಿಗೆ ಈ ರಿಯಾಯಿತಿಗಳನ್ನೇನೂ ಕೊಡದೆ, ವ್ಯವಸಾಯಕ್ಕಪಶ್ಯಕವಾದ ಪದಾರ್ಥಗಳನ್ನು ಅಸಲು ಬೆಲೆಗೆ ಕೊಟ್ಟು, ಯಾವ ಯಾವ ಧಾನ್ಯ ಬೆಳೆಯಲು ಎಷ್ಟೆಷ್ಟು ಖರ್ಚಾಗುತ್ತದೆಯೋ ಅದನ್ನು ನೋಡಿ ಬೆಲೆ ಗೊತ್ತು ಮಾಡಿದರೆ ಸಾಕಾಗಿದೆ. ಹೀಗೆ ಮಾಡುವವರೆಗೂ ಆಹಾರಾಭಾವ ಕಡಿಮೆಯಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಅದುದರಿಂದ ಸರ್ಕಾರದವರು ಈ ನಿರ್ಣಯವನ್ನು ಅಂಗೀಕಾರ ಮಾಡಿದ ಹೊರತು ಬೇರೆ ಮಾರ್ಗವಿಲ್ಲ. ಹಾಗೆ ಮಾಡದಿದ್ದರೆ ದೇಶದಲ್ಲಿ ಮುಂದೆ ಬಹಳ ಕಷ್ಟ ಸನ್ನಿವೇಶ ಬರುತ್ತದೆ. ಬೇರೆ ಪದಾರ್ಥಗಳ ಬೆಲೆಗಳು ಎಷ್ಟು ಹೆಚ್ಚಿವೆ ಎಂಬುದನ್ನು ನೋಡಬೇಕು, ಉದಾಹರಣೆಗೆ ಚಿನ್ನ ಹಿಂದೆ 21 ರೂಪಾಯಿ ಇದ್ದದ್ದು ಈಗ 121 ರೂಪಾಯಿ ಆಗಿದೆ. ಪಂಚೆ ಒಂದು ಜೊತೆಗೆ 2½ ರೂಪಾಯಿ ಇದ್ದದ್ದು ಈಗ 12 ರೂಪಾಯಿ ಆಗಿದೆ. ಎಲ್ಲ ಪದಾರ್ಥಗಳ ಬೆಲೆಯೂ ಏರಿದೆ. ಆದರೆ ವ್ಯವಸಾಯೋತ್ಪನ್ನಗಳಿಗೆ ಮಾತ್ರ ಸರ್ಕಾರದವರು ತಮ್ಮ ಇಷ್ಟಾನುಸಾರ ಧಾರಣೆ ಗೊತ್ತುಮಾಡುವುದರಲ್ಲಿ ಯಾವ ನೀತಿ, ನ್ಯಾಯ, ಧರ್ಮ, ತತ್ವ ಇದೆ ಎಂಬುದನ್ನು ಅವರೇ ಹೇಳಬೇಕು. ದೇಶಾಭಿಮಾನದಿಂದ ಬೆಳೆಯಬೇಕೆಂದು ನಮ್ಮನ್ನೆ ಪ್ರಚಾರ ಮಾಡುವುದರಿಂದ ಆಹಾರದ ಉತ್ಪತ್ತಿ ಹೆಚ್ಚಾಗುವುದಿಲ್ಲ. ಕಾರ್ಯತಃ ಸಾಧ್ಯವಾಗುವ ಮಾರ್ಗವನ್ನನುಸರಿಸಿ, ರೈತರಿಗೆ ಅನುಕೂಲ ಮಾಡಬೇಕು. ಸರಿಯಾದ ಮಾರ್ಗವೆಂದರೆ ಖರ್ಚು ಎಷ್ಟಾಗುತ್ತದೆಯೋ ಆ ಮಟ್ಟಕ್ಕೆ ತಕ್ಕಂತೆ ಬೆಲೆಗಳನ್ನು ಹೆಚ್ಚಿಸಿದ ಹೊರತು ಖಂಡಿತವಾಗಿ ಬೇರೆ ಮಾರ್ಗವಿಲ್ಲ. ಇಷ್ಟು ಹೇಳಿ ಈ ನಿರ್ಣಯವನ್ನನುಮೋದಿಸಿ ಸಭೆಯವರು ಇದನ್ನು ಒಪ್ಪ ಬೇಕೆಂದು ಕೋರುತ್ತೇನೆ.

Mr. DEPUTY SPEAKER.—Resolution moved:

"That the Assembly is of the opinion that with a view to encourage raiyats to grow more foodstuffs throughout the State, they may be paid at least an amount not less than that spent by them to grow the respective foodgrains at the time of acquisition."

Sri M. GOVINDA REDDY (Chitaldrug District—General).—Sir, I wish to say only one word. Sri Hutche Gowda's resolution as it is worded cannot be ccepted. Because, it goes to the extent f suggesting that the raiyats may be aid at least an amount not less that spent by them to grow the respective foodgrains at the time of acquisition; and that Government should pay the raiyat at the time of procurement. half the cost of the foodgrains. I think, Sir, that no Government can take the risk of paying half the expenses incurred by the raiyat for growing foodgrains.

A VOICE.—Where is half?

Sri M. GOVINDA REDDY.—At least the amount not less than that spent by the raiyat. How is it possible for a Government to arrive at such an estimate? If this is to be accepted, the Government will have to go into each case of production and spend an enormous amount even for estimating purposes.

Sri B. HUTCHE GOWDA.—The Government spends sufficient money over the Department which is meant to improve agriculture. Another factor is that the Government is the only agency which purchases foodgrains grown by the raiyat.

Sri T. MARIAPPA (Home Minister).—Sir, I am unable to accept the resolution in the form in which it is worded. The resolution is not only vague, but it will land us in a very ridiculous position if it is accepted. If it had been worded in the manner in which Sri Govinda Reddy indicated, namely, that the raiyats who surrender are entitled to the price which could give them sufficient return for the cost of cultivation, it would have been very happy. Unfortunately the Hon'ble Mover wants the Government to accept a resolution which states that at the time of acquisition, Government have to pay the money spent by the raiyats on the production of foodgrains. Sir, I have already stated that the resolution is very vague.

Sri L. SIDDAPPA (Shimoga District—General).—Sir, I rise to a point of order. If the Hon'ble Minister says that the resolution is vaguely worded, it is reflection on the Speaker in admitting the resolution, because the rules clearly say that if a resolution is vague, the Speaker will not allow such a resolution. Now that the resolution has been admitted by the Speaker, it is not open to the Hon'ble Minister to say that the resolution is vague. If he

says that, I submit that it is a reflection on the orders passed by the Speaker in admitting the resolution.

Mr. DEPUTY SPEAKER.—Let the Hon'ble Minister continue his speech.

Sri T. MARIAPPA.—The Hon'ble Mover perhaps is aware that the cost of cultivation varies from place to place and season to season. It also varies from year to year. Sir, the very same subject came up before the Food Ministers' Conference recently held and we were not able to put forward an agreed fair price with regard to the cost of production of paddy and millets. Therefore an overall picture of the cost of production was taken and a fair price fixed, so that the raiyat should not be put to any loss whatever in the production of foodgrains. Sir, one very encouraging feature of our raiyat is that he is not merely guided by the price that is fixed. The entire country ought to be grateful to him. Because he continues to ply his trade with a view to supply foodgrains to the country, and not with an eye on prices. Unlike a few people who continue to grow commercial crops, the raiyat in general goes on with the cultivation of foodgrains. But it must be admitted that there is a small shrinkage when commercial crops are grown. After all the shrinkage amounts to a very small area in the case of the cultivation of millets. But Sir, I must tell the Hon'ble Mover that the area under paddy has slightly increased during the last one or two years. It is true there are various factors which have to be taken into consideration, such a regularity of rainfall, adequate supply of manure, adequate supply of labour, etc. There it is an indeterminate factor which should be determined before we can fix the cost of cultivation. That is the very reason why the Government of India did not undertake to institute an inquiry into the cost of production of foodgrains. Therefore they are fixing fair prices taking an overall picture of the conditions that obtain in rural areas. Sir, to cite a few instances, in 1943 the prices of paddy varied from Rs. 9-8-0 to Rs. 12-4-0; the minimum was Rs. 7-12-0 to Rs. 10; price of ragi was 10-12-0 to 11. The Harvest Order of 1944 fixed prices which varied between 10 to 13, maximum 12 to 15 for paddy; for ragi it was 13-2-0 to 15. Under Harvest Order of 1947 the prices varied from 14 to 17 minimum 12 to 15. Harvest Order 1948 fixes the price of paddy from Rs. 20-0-0 to Rs. 22-0-0. Harvest Order of 1949 fixes price of paddy from Rs. 21 to Rs. 19. Sir, you will thus see that as conditions have changed and as the cost of cultivation has increased, the Government necessarily took all factors into consideration, and have accordingly raised or lowered the price of foodgrains. Therefore it cannot be said that the Government have fixed these prices arbitrarily. It is far, far from truth.

A VOICE.—What are the other factors?

Sri T. MARIAPPA.—It is far, far from the mind of the Government to fix arbitrary prices and see that the raiyat incurs loss.

Sri L. SIDDAPPA.—If I may interrupt the Hon'ble Minister for a moment.....

Sri T. MARIAPPA.—I am not inclined to yield unless it be a point of order.

Janab J. MAHOMED IMAM.—He is afraid of facing us!

Sri T. MARIAPPA.—I have faced you for 20 years. Do you mean to say that I am afraid now?

The Hon'ble Member has made out that the Government are not in a position to acquire money earned by others. But the Government have taken a very unpleasant responsibility of acquiring foodgrains with a view to provide food for the landless and insufficient producers. Sir, even though he digressed from the main resolution, I do not want to enter into the other details with regard to distribution of foodgrains. But I content myself by saying that the interest of the raiyats, the interest of the producer have always been borne in mind by the Government and we also see that his interests are safeguarded and that he does not suffer any loss in his agricultural operations. Sir, I am grateful to him for acknowledging one of my statements namely that agricultural operations be converted

into agricultural industry. It is true that it is not by merely fixing prices we can convert it into an agricultural industry. As I said a few minutes ago, we have raised prices from Rs. 12 to Rs. 21 for paddy and yet Sir, I am sorry to state that the increase in prices has not stimulated a proportionate increase in production. Therefore there are various factors operating either in the way of production or in the way of putting more initiative into agriculture and grow more. Therefore it is not merely a question of prices which would encourage him to grow more, but the agriculturist is labouring under so many disadvantages and handicaps which the Government are prepared to remedy.

Sri B. HUTCHE GOWDA.—On a point of order, Sir. ಬೆಳೆಯುವುದಕ್ಕೆ ಎಷ್ಟು ಖರ್ಚಾಗುತ್ತದೆಯೋ ಅಷ್ಟು ಕೊಡಬೇಕು. ಅದನ್ನು ಬಿಟ್ಟು ಬೇರೆ ರೀತಿಯಲ್ಲಿ ಪರಿಶೀಲನೆ ಮಾಡುತ್ತೇವೆ ಎಂದರೆ ಹೇಗೆ? ರೈತರಿಗೆ ಬೆಳೆಯುವುದಕ್ಕೆ ಎಷ್ಟು ಖರ್ಚಾಗುತ್ತದೆಯೋ ಅಷ್ಟು ಕೊಡುವುದಿಲ್ಲವೆಂದು ಖಚಿತವಾಗಿ ಹೇಳಿಬಿಡಿ.

Sri T. MARIAPPA.—Sir, perhaps my friend has not properly understood me.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಇನ್ನೊಂದು ವಿಚಾರ. 1945-46, 1946-47, 1947-48ರಲ್ಲಿ ಆಹಾರ ಪದಾರ್ಥಗಳ ಬೆಲೆ ಯಾವ ರೀತಿ ಹೆಚ್ಚಿಸಿದ್ದೀರಿ ಎಂಬುದನ್ನು ಹೇಳಿದಿರಿ. ಆದರೆ ರೈತ ಕೊಂಡುಕೊಳ್ಳತಕ್ಕ ಇತರ ಪದಾರ್ಥಗಳ ಬೆಲೆ 5 ರೂಪಾಯಿ ಇದ್ದದ್ದು ಈಗ 15 ರೂಪಾಯಿ ಆಗಿದೆ. ಬೆಲ್ಲಕ್ಕೆ 3ರಷ್ಟು ಬೆಲೆ ಆಗಿದೆ.

Sri A. BHEEMAPPA NAIK (Chitaldrug District—General).—Because he purchases jaggery at Rs. 15, is it to be counted for cost of cultivation?

ಶ್ರೀ ಎಲ್. ಸಿದ್ದಪ್ಪನವರು.—ಆ ಮೇಲೆ ಉಕ್ಕು, ಕಬ್ಬಿಣ, ರೈತ ಕೊಂಡುಕೊಳ್ಳತಕ್ಕ ಬಟ್ಟೆ ಇಂಥಾ ಅತ್ಯಾವಶ್ಯಕವಾದ ಪದಾರ್ಥಗಳ ಬೆಲೆ ಎಷ್ಟು ಮಟ್ಟಿಗೆ ಏರಿದೆ! ಒಂದಕ್ಕೆ 2-3ರಷ್ಟಾಗಿದೆ.

Sri T. MARIAPPA.—Sir, I am afraid even my Hon'ble friend Sri Siddappa has not properly understood the resolution. What Sri Hutche Gowda wanted to make out by this resolution is that the prices must be commensurate with the cost of cultivation. Whatever enters into the cost of cultivation alone must be taken into consideration in determining the price of foodgrains.

Sri L. SIDDAPPA.—Agricultural labour?

Sri T. MARIAPPA.—I am fully aware of the difficulties of the agriculturist. I am myself an agriculturist. Suppose I want to live luxuriously, suppose I want 1703 mull, suppose I want an aeroplane, it is not fair to ask that expenses for all that should be included under cost of production and the State should bear the charges. What affects cultivation alone must be taken into consideration in determining the cost of production.

Sri H. B. GUNDAPPA GOWDA.—Have you any data?

Sri T. MARIAPPA.—It is very difficult to collect data. As a matter of fact Sir, the subject came up before the conference of Food Ministers at Delhi. They said that it would be very difficult to determine the cost of cultivation because it would vary from place to place and depend upon so many uncertain factors. That is the reason why they took an overall picture and have fixed fair prices from province to province. Even for Mysore, as you will be pleased to see Sir, the prices have gradually increased keeping in view the cost of cultivation. That is the very reason why there is nothing arbitrary but on the other hand these prices have some relation to the cost of cultivation. But it is true that the cost of cultivation has not been determined as yet on any scientific enquiry. In fact during the Food Ministers' Conference, we urged on the attention of the Government of India that a committee of experts should go into this question. But they themselves feel very diffident about the accuracy of the results that they may obtain even after a scientific enquiry.

Sri H. SIDDAVEERAPPA.—Why not conduct a sample survey in our State?

Sri B. HUTCHE GOWDA.—Is the Hon'ble Minister satisfied with the present prices?

Sri T. MARIAPPA.—Therefore Sir, I once again state that the prices are fixed taking the overall picture into consideration and the various factors that enter into the cost of cultivation. In Mysore at any rate, I must tell the

House that we have insisted on fair prices being given to agricultural producers in this State. The Centre has got to fix the prices and before fixing prices they always consult the various State Governments and we for our part have always brought it to their notice that considering the seasonal conditions, considering the factors that affect the cost of cultivation, certain prices should be fixed and they have accordingly fixed these prices. Therefore it cannot be said that the prices are not fair or that they are not commensurate with the cost of cultivation. It is true that in recent years the cost of cultivation has increased and it is also equally true that the prices of foodgrains have also increased. Therefore, I am not prepared to accept the resolution in the form in which it is worded. But I must on this occasion express our gratitude to the raiyats who have inspite of seemingly, according to me, low prices, continued to cultivate and produce foodgrains. In fact we have conducted crop cutting experiments; the yield of paddy in certain areas has gone up to 20 to 22 pallas per acre. Therefore the entire country must be grateful to them because they have grown foodgrains not only with an eye on profit but with a view to help the country in its onward march.

Sri L. SIDDAPPA.—Gratitude and sympathy must be accompanied by some material benefit.

Sri H. B. GUNDAPPA GOWDA.—There was a Committee, if I remember right, for fixing the prices. I think the Krishnamachari Committee went round.....

Sri T. MARIAPPA.—It was a Fiscal Commission.

Sri H. B. GUNDAPPA GOWDA.—It was appointed in 1944. In 1944 when I had the occasion to handle this portfolio, I remember to have.....

Sri H. C. DASAPPA.—Must have been very antiquated now.

Sri H. B. GUNDAPPA GOWDA.—The whole defect is that we have no data. So far as the main food crops are concerned at least our State may make an effort to have data as to the cost of production of ragi, jola, paddy under tank area and under channel area. Let us be scientific in our attempts.

Sri A. BHEEMAPPA NAIK.—Supposing I spend Rs. 100 for one acre and grow one palla instead of 10 pallas, what is the cost? Is it one hundred rupees per palla? Let the Hon'ble Mover kindly answer. All these things depend not only on rain but on several other factors?

Mr. DEPUTY SPEAKER.—What does the Hon'ble Member propose to do with his resolution?

Sri B. HUTCHE GOWDA.—I am not satisfied with the reply. I press the resolution.

Mr. DEPUTY SPEAKER.—The question is.—

"That this Assembly is of the opinion that with a view to encourage raiyats to grow more foodstuffs throughout the State, they may be paid at least an amount not less than that spent by them to grow the respective foodgrains at the time of acquisition."

The motion was negatived.

Mr. DEPUTY SPEAKER.—The next resolution No. 15 stands in the name of Sri M. Govinda Reddy.

Sri M. GOVINDA REDDY (Chitaldrug District—General):—Sir, I am not moving the resolution.

Mr. DEPUTY SPEAKER.—The next resolution No. 16 stands in the name of Janab Mohamed Valiulla.

Janab MOHAMED VALIULLA (Kolar—Muslim):—I am not moving the resolution, Sir.

Mr. DEPUTY SPEAKER.—The next resolution No. 17 stands in the name of Sri L. Siddappa.

Sri L. SIDDAPPA (Shimoga District—General):—I do not propose to move the resolution.

Mr. DEPUTY SPEAKER.—The next resolution No. 18 stands in the name of Sri M. V. Krishnappa.

Sri M. V. KRISHNAPPA (Kolar—District—General):—I am not moving the resolution, Sir.

Mr. DEPUTY SPEAKER.—The next resolution No. 19 stands in the name of

Sri D. H. Chandrasekharaiya. Hon'ble Member is not present

The next resolution No. 20 stands in the name of Sri Bheemappa Naik.

RESOLUTION No. 20.

Introduction of Indian Administrative Service Scheme in Mysore after approval by the Legislative Assembly.

Sri A. BHEEMAPPA NAIK (Chitaldrug District--General):—Sir, I beg to move.

"That this Assembly is of the opinion that the proposed Indian Administrative Service scheme should not be introduced in Mysore without explaining the implications and obtaining prior approval of the Legislative Assembly".

ಸ್ವಾಮಿ, ಈ ನನ್ನ ತರಾವಿನ ಅರ್ಥ ಇಷ್ಟೆ. ಇಂಡಿಯ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ ಎನ್ನುವುದು Part (A) ಮತ್ತು Part (B) ಪ್ರಾಂತ್ಯಗಳಲ್ಲಿ ಒಂದೇ ಆಗಿದ್ದು ಭಾರತ ಸರ್ಕಾರದವರು ಇದರ ಮೇಲ್ಯುಚ್ಚಾರಣೆಯಿಟ್ಟುಕೊಂಡಿದ್ದಾರೆ. ಇದರ ಪ್ರಕಾರ ಪ್ರತಿಯೊಂದು ಪ್ರಾಂತ್ಯದ ಆಡಳಿತದಲ್ಲೂ ಕೆಲವು ಸ್ಥಾನಗಳನ್ನು ಕೇಂದ್ರದ ಅಧಿಕಾರಿಗಳಿಗೆ ಮೀಸಲಾಗಿಡಬೇಕೆಂದು ಒಂದು ಪದ್ಧತಿಯನ್ನು ಜಾರಿಗೆ ತರುವ ಏರ್ಪಾಡು ಮಾಡಿಕೊಂಡಿದ್ದಾರೆ. ಫೈನಾನ್ಷಿಯಲ್ ಇಂಟೆಗ್ರೇಷ್ ಹೇಗೋ ಹಾಗೆ ಇದೊಂದು ಸರ್ವಿಸ್‌ಗಳ ವಿಷಯದಲ್ಲಿ ಆಗಿರುವ ಇಂಟೆಗ್ರೇಷ್ ಎಂದು ಇದನ್ನಿಟ್ಟುಕೊಳ್ಳಬಹುದು. ಹೀಗೆ ಸರ್ವಿಸ್ಸಿನಲ್ಲಿಯೂ ಇಂಟೆಗ್ರೇಷ್ ಆಗುವುದರಿಂದ, ಅದರಲ್ಲೂ ಮೈಸೂರಿನ ವಿಷಯದಲ್ಲಿ ಏನಾಗುತ್ತದೆಂಬುದನ್ನು ಸ್ವಲ್ಪಮಟ್ಟಿಗೆ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಮೈಸೂರಿನಲ್ಲಿ ಈಗ್ಗೆ ಬಹಳ ಕಾಲದಿಂದಲೂ ಮೈಸೂರು ಸಿವಿಲ್ ಸರ್ವಿಸ್ ಪದ್ಧತಿಯೆಂಬುದು ಜಾರಿಯಲ್ಲಿದೆ. ಇದರ ಪ್ರಕಾರ ತಯಾರಾದ ನಮ್ಮ ತರುಣರು ಮೈಸೂರು ದೇಶದ ಸೇವೆಯನ್ನು ಎಷ್ಟರಮಟ್ಟಿಗೆ ನಲ್ಲಿಸುತ್ತಾ ಬಂದಿದ್ದಾರೆ ಎಷ್ಟು ಮಟ್ಟಿಗೆ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ, ಅವರ ಯೋಗ್ಯತೆ, ಪ್ರಾಮಾಣಿಕತೆ ಎಷ್ಟು ಮಟ್ಟಿಗೆ ಪ್ರಶಂಸನೀಯವಾಗಿದೆಯೆಂಬುದನ್ನು ನಾನು ಈ ಸಭೆಯ ಮುಂದೆ ವಿವರಿಸಿ ಹೇಳಬೇಕಾಗಿಲ್ಲ. ಮೈಸೂರು ದೇಶದ ಆಡಳಿತವನ್ನು ಪರಿಶೀಲಿಸಿದ ದಿವಾನರುಗಳು, ಎಲ್ಲಾ ವಿಚಾರಗಳಲ್ಲೂ ಮೈಸೂರು ಸಿವಿಲ್ ಸರ್ವಿಸ್ ಎನ್ನುವುದು ಇಂಡಿಯ್ ಸಿವಿಲ್ ಸರ್ವಿಸ್‌ಗಳಿಗೆ ಯಾವ ವಿಧದಲ್ಲೂ ಕಡಿಮೆಯಾಗಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ. ಅಷ್ಟೇ ಅಲ್ಲದೆ ಮೈಸೂರು ದೇಶದ ಅಧಿಕಾರಿಗಳ ಪ್ರಾಮಾಣಿಕತೆ, ಕಾರ್ಯದಕ್ಷತೆ ಇವುಗಳನ್ನು ಮೆಚ್ಚಿ ಇಲ್ಲಿ ರಿಟೈರ್ ಆಗಿರುವ ಅನೇಕ ಅಧಿಕಾರಿಗಳು ಭಾರತದ ಇತರ ಕಡೆಗಳಲ್ಲಿ ಹೋಗಿ ಅಲ್ಲಿನ ಆಡಳಿತವನ್ನು ಉತ್ತಮಪಡಿಸಿದ್ದಾರೆ. ಅಲ್ಲಿ ನಮ್ಮ ಮೈಸೂರು ಸಿವಿಲ್ ಸರ್ವಿಸ್ಸಿನವರು ಮಂತ್ರಿ ಸ್ಥಾನಗಳನ್ನು ಕೂಡ ಅಲಂಕರಿಸಿ, ಎಷ್ಟೋ ವೇಳೆ ಮುಖ್ಯ ಮಂತ್ರಿ ಸ್ಥಾನವನ್ನೂ ಅಲಂಕರಿಸಿ ದಕ್ಷತೆಯಿಂದ ಕಾರ್ಯ ನಿರ್ವಹಿಸಿದ್ದಾರೆ. ಅಲ್ಲದೆ ಭಾರತದ ಅನೇಕ ಕಷ್ಟ ಪರಿಸ್ಥಿತಿಗಳಲ್ಲೂ ಸಹ, ಅಲ್ಲಿನ ಆಡಳಿತ ಸೂತ್ರಗಳನ್ನು ವಹಿಸಿಕೊಂಡು ಕೆಲಸ ಮಾಡುವ ದಕ್ಷತೆಯನ್ನು ತೋರ್ಪಡಿಸಿಕೊಂಡಿದ್ದಾರೆ. ಇಂಥಾ ಮೈಸೂರು ಸಿವಿಲ್ ಸರ್ವಿಸ್‌ನವರು ಇಂಡಿಯ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್‌ಗಳ ಜೊತೆಯಲ್ಲಿ ಸೇರುವುದರಿಂದ ನಮ್ಮವರ ದಕ್ಷತೆಯೇನಾದರೂ ಹೆಚ್ಚುತ್ತದೆಯೇ ಎನ್ನುವುದನ್ನು ನೋಡಬೇಕು. ಭಾರತವು ಒಂದೇ ಆಗಿದೆಯೆಂದು ಹೇಳಿ, ಭಾರತದಲ್ಲಿ ಆಡಳಿತ ದಕ್ಷತೆ ಎಲ್ಲಾ ಕಡೆಯಲ್ಲೂ ಒಂದೇ ಸಮಾನಾಗಿರಬೇಕೆಂದು ಹೇಳಿ ಮೈಸೂರನ್ನು ಅವರೊಡನೆ ಸೇರಬೇಕೆಂದು ಹೇಳುವ ಅಗತ್ಯವಾದರೂ ಇದೆಯೇ? ಮೊದಲೇ ಅವರಿಗಿಂತ ಹೆಚ್ಚು ದಕ್ಷತೆ, ಅಥವಾ ಅಷ್ಟೇ ದಕ್ಷತೆಯಾದರೂ ಉಳ್ಳ ನಮ್ಮ ಮೈಸೂರು ಸಿವಿಲ್ ಸರ್ವಿಸ್ಸಿನವರು ಅವರೊಡನೆ ಸೇರಿಕೊಂಡು ಒಬ್ಬರಿಗೊಬ್ಬರಿಗೆ ಭದ್ರತಾವಣೆ ಮಾಡಿಕೊಳ್ಳಬೇಕಾದ ಅಗತ್ಯವಿದೆಯೇ ಎಂಬುದನ್ನು ಯೋಚನೆ ಮಾಡಿ. ಭಾರತಕ್ಕೇನೋ ಕೇಂದ್ರೀಕರಣದ ಹುಚ್ಚು ಹಿಡಿದಿದೆಯೆಂದು ಕಾಣುತ್ತದೆ. ಎಲ್ಲಾ ವಿಷಯಗಳೂ ಕೇಂದ್ರದ ಆವರಣದಲ್ಲಿ ಬರಬೇಕು, ಎಲ್ಲಾ ಆಡಳಿತವನ್ನೂ ಡೆಲ್ಲಿಯಲ್ಲೇ ಕುಳಿತುಕೊಂಡು ನಡೆಸಬೇಕೆಂಬ ಅಭಿಲಾಷೆ ದಿನೇ ದಿನೇ ಹೆಚ್ಚುತ್ತಿದೆ; ಇಷ್ಟೇ ಅಲ್ಲ. ಎಲ್ಲಿ ಹೀಗೆ ಮಾಡುತ್ತಾ ಹೋಗಿ ಎಲ್ಲಿ ಪ್ರತಿಯೊಂದು ಪ್ರಾಂತ್ಯವನ್ನು ಕೇಂದ್ರದ ಕೈಗೊಂಬೆಯಾಗಿ ಮಾಡಿಕೊಳ್ಳುತ್ತಾರೋ ಎಂದೆನಿಸುತ್ತದೆ. ಈ ಇಂಡಿಯ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್‌ಗಳನ್ನು ನಮ್ಮ ಮೈಸೂರು ದೇಶಕ್ಕೆ ಅನ್ವಯಿಸುವುದಕ್ಕೆ ಎಷ್ಟು ಮಾತ್ರವೂ ಅಧಿಕಾರವಿಲ್ಲವೆಂದಿಟ್ಟುಕೊಂಡಿದ್ದರೂ ಅವರು ಈ ರೀತಿ ಮಾಡಿಕೊಂಡರೆ, ಕೊನೆಗೆ ನಮ್ಮ ಸ್ಥಿತಿ ಎಲ್ಲಿಗೆ ಬರುತ್ತದೆಂದರೆ ನಮ್ಮ ಮಂತ್ರಿಗಳೂ ಕೂಡ ಯಾರಾದರೂ ಈ ಅಧಿಕಾರಿಗಳು ತಪ್ಪು ಮಾಡಿದರೂ ಕೂಡ ಅವರಿಗೆ ಶಿಕ್ಷೆಯಾಗಲಿ ಕೂಪ್ತ ಜುಲ್ಮಾನೆ ಹಾಕುವುದಕ್ಕೂ ಅಧಿಕಾರವಿಲ್ಲ. ಆದ್ದರಿಂದ ಈಗಿನ ಪರಿಸ್ಥಿತಿಯಲ್ಲಿ ಇಂಥಾದ್ದನ್ನು ನಾವು ಒಪ್ಪಿಕೊಂಡಿದ್ದೇ ಆದರೆ, ಮುಂದೆ ಮೈಸೂರು ಮಂತ್ರಿಮಂಡಲವೂ ಕೂಡ ಇವರ ವಿಷಯದಲ್ಲಿ ಏನೂ ಮಾಡಲಾರದ ಚಿಂತಾಜನಕ ಸ್ಥಿತಿಯಲ್ಲಿರಬೇಕಾಗುತ್ತದೆ. ಮಿತಿ ಮೀರಿತೆಂದರೆ ಕೇಂದ್ರಕ್ಕೆ ದೂರು ಬರೆದು ಕಳುಹಿಸಬಹುದು ಅಷ್ಟೆ. ಇಂಥಾ ಶೋಚನೀಯ ಪರಿಸ್ಥಿತಿ ತಲೆದೋರುವುದಕ್ಕೆ ಅವಕಾಶ ಕೊಡುವುದು ಸರಿಯೇ ಎಂಬುದನ್ನು ನೀವೇ ಯೋಚನೆ ಮಾಡಿ.

ಎರಡನೆಯದೇನೆಂದರೆ, ಮೈಸೂರು ಸರ್ಕಾರದವರು ಈಗೇನಿದ್ದರೂ ತತ್ವವನ್ನೊಪ್ಪಿಕೊಂಡಿದ್ದೇವೆ, ವಿವರಗಳನ್ನೆಲ್ಲಾ ಇನ್ನೂ ಪರ್ಯಾಲೋಚಿಸುತ್ತಿದೆ ಎಂದು ಈ ಸಂಬಂಧದಲ್ಲಿ ಕಳುಹಿಸಿದ ಒಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಹೀಗೆ ತತ್ವವನ್ನೊಪ್ಪಿಕೊಳ್ಳುವುದಕ್ಕೂ ಕಾರಣವನ್ನು ತಿಳಿಸುತ್ತಾ ನಾವಿದಕ್ಕೆ ಒಪ್ಪದೆ ಹೋಗಿದ್ದರೆ, ಅವರು ನಮ್ಮ ಸಂಸ್ಥಾನದ ಹುಡುಗರನ್ನು ಇಂಡಿಯ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ ಪರೀಕ್ಷೆಗಳಿಗೆ ಕುಳಿತುಕೊಳ್ಳಲು ಅವಕಾಶಕೊಡುತ್ತಿರಲಿಲ್ಲ ಎಂದು ಹೇಳಿದರು. ಇಂಡಿಯಾ ಸರ್ಕಾರದವರು ಈ ವಿಚಾರದಲ್ಲಿ ಇಂಥ ಮನೋಭಾವನ್ನು ತಾಳುವುದು ಸಾಧುವಲ್ಲ; ಏಕೆಂದರೆ ಹಿಂದೆ ಹಿಂದೂಸ್ಥಾನ ಪರಕೀಯರ ಆಳ್ವಿಕೆಯಲ್ಲಿರುವಾಗಲೇ ನಮ್ಮವರು ಇಂಡಿಯ್ ಸಿವಿಲ್ ಸರ್ವಿಸ್ ಪರೀಕ್ಷೆಗಳಿಗೆ ಕುಳಿತುಕೊಳ್ಳಲು ಅವಕಾಶವಿತ್ತು. ಅಂಥಾದ್ದರಲ್ಲಿ ನಮಗೆ ಸ್ವಾತಂತ್ರ್ಯ ಬಂದು ನಮ್ಮವರೇ ಭಾರತದ ಆಡಳಿತದಲ್ಲಿರುವಾಗ ಈ ರೀತಿ

ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ ಪರೀಕ್ಷೆಗಳಿಗೆ ಬಿಡುವುದಿಲ್ಲ, ನಿಮ್ಮ ಮಕ್ಕಳಿಗೆ ತೊಂದರೆ ಮಾಡುತ್ತೇವೆಂದು ಹೇಳಿದ್ದರಲ್ಲಿ ಅರ್ಥವಿಲ್ಲ.

ತಾವು ಹೀಗೆ ಮಾಡುತ್ತಿರುವುದರ ಅರ್ಥವೇನೆಂಬುದೇ ನನಗೆ ಗೊತ್ತಾಗುವುದಿಲ್ಲ. ಇದರ ಜೊತೆಗೆ ಕಾನೂನಿನಲ್ಲೇ ಆಗಲೀ ಅಥವಾ ರೂಲ್ಸುಗಳಲ್ಲೇ ಆಗಲೀ ಏನಾದರೂ ಒತ್ತಾಯವಿದೆಯೇ ಎಂಬುದಾಗಿ ನೋಡಿದರೆ ಇಂಡಿಯಾ ಕಾನ್ಸ್ಟಿಟ್ಯೂಷನ್ ಆರ್ಟಿಕಲ್ 312ರಲ್ಲಿ ಏನು ಹೇಳಿದೆ ಎಂದರೆ 'All-India Administrative Service' ಗೆ ಸೇರಬೇಕಾಗಿದ್ದರೆ ಸಂಸ್ಥಾನಗಳಲ್ಲಿಯೇ ಆಗಲೀ ಅಥವಾ ಇನ್ನಾವ ಪ್ರಾಂತಗಳಲ್ಲೇ ಆಗಲೀ ಆಯಾ ಸಂಸ್ಥಾನ ಅಥವಾ ಪ್ರಾಂತೀಯ ಕೌನ್ಸಿಲ್ಲುಗಳಲ್ಲಿ ಒಂದು ನಿರ್ಣಯವನ್ನು ತಂದು, ಅದರ ಒಗ್ಗೆ ಮೂರನೆಯ ಎರಡು ಭಾಗದ ಸದಸ್ಯರು ಒಪ್ಪಿಕೊಂಡರೆ ಆಗ ಅವರ ಇಷ್ಟಕ್ಕನುಸಾರವಾಗಿ Parliament may pass a bill ಎಂದು ಹೇಳಲಾಗಿದೆ. ಆದರೆ ತಮ್ಮ ಅವಗಾಹನೆಯ ಬಗ್ಯೆ ನಾನು ಆ ಕಲಂನ್ನು ಓದುವುದೇ ಲೇಸೆಂದು ಭಾವಿಸುತ್ತೇನೆ.

Article 312 of the Indian Constitution Act :—

"(1) Notwithstanding anything in Part XI, if the Council of States has declared by resolution supported by not less than two-thirds of the members present and voting that it is necessary or expedient in the national interest so to do, Parliament may by law provide for the creation of one or more all-India services common to the Union and the States, and, subject to the other provisions of this Chapter, regulate the recruitment, and the conditions of service of persons appointed, to any such service."

ಆರ್ಟಿಕಲ್‌ನಲ್ಲಿ ಹೀಗೆ ಹೇಳಿರುವಾಗ ಇವಕ್ಕೆ ಪಾರ್ಲಿಯಮೆಂಟಿನವರು ಈಗ ಒಂದು ಪರೀಕ್ಷೆಯನ್ನು ಏರ್ಪಡಿಸಿ ಅದರಲ್ಲಿ ಪಾಸಾದವರನ್ನು ಮಾತ್ರವೇ ತೆಗೆದುಕೊಳ್ಳುತ್ತೇವೆಂದು ಹೇಳುವುದು ಅಷ್ಟು ಉಚಿತವಾಗಿರುವಂತೆ ಕಾಣುತ್ತಿಲ್ಲ. ಒಂದು ವೇಳೆ ಅವರು ಜನವರಿ 26ನೆಯ ತಾರೀಖಿಗೆ ಮೊದಲೇ ಹೀಗೆ ಮಾಡಬಹುದಿತ್ತು. ಆಗ ಅದರ ಮಾತು ಬೇರೆಯಾಗುತ್ತಿತ್ತು. ಆದರೆ ಆಗ ಇದನ್ನು ಕಾನೂನಿನಲ್ಲೇ ಅವರು ಅಡಕ ಮಾಡಬಹುದಾಗಿತ್ತು. ಆದರೆ ಆವರಿಗೆ ಹಾಗೆ ಮಾಡಲು ಸಾಧ್ಯವಾಗಲಿಲ್ಲವೆಂದು ಎಲ್ಲರಿಗೂ ಈಗ ವೇದ್ಯವಾಗಬಹುದು. ಜನವರಿ 27ನೆಯ ತಾರೀಖಿನ ನಂತರ ಅವರು ಹೀಗೆ ಹೇಳುತ್ತಿರುವುದು ಸರಿಯಾಗಿಲ್ಲವೆಂದು ಕಾನ್ಸ್ಟಿಟ್ಯೂಷನ್ನಿನಲ್ಲಿ ಹೇಳಿರುವ ಆರ್ಟಿಕಲ್ ಪ್ರಕಾರ ಮೈಸೂರು ಸರ್ಕಾರದವರಿಗೆ ಹೊಡೆದಾಡುವುದಕ್ಕೆ ಈಗಲೂ ಖಂಡಿತ ಅವಕಾಶವೂ ಇದೆ ಮತ್ತು ಅಧಿಕಾರವೂ ಇದೆ. ಆದರೆ ಕೇಂದ್ರದವರು ಈಗ ಈ ರೀತಿ ಮಾಡಬೇಕೆಂದು ಹೊರಟಿರುವುದು ತೀರಾ ನ್ಯಾಯವಿರುದ್ಧ, ಧರ್ಮ ವಿರುದ್ಧ ಮತ್ತು ಕಾನೂನಿಗೂ ವಿರುದ್ಧ. ಆದರೆ ನಾವು ಜನರಲ್ ಪ್ರಿನ್ಸಿಪಲ್‌ಗಳಿಗೆ ಒಪ್ಪಿಕೊಂಡಿದ್ದೇವೆ. ಇದರಿಂದ ನಮ್ಮ ತರುಣರಿಗೆ ಅನುಕೂಲವಾಗಬಹುದೆಂದು ನಂಬಲಾಗಿತ್ತು. ಆದರೆ ಈಗ ಅವರೆಲ್ಲರಿಗೂ ಅನುಕೂಲವಾಗುವುದರ ಬದಲು ಅನಾನುಕೂಲವೇ ಹೆಚ್ಚಾಗಿರುವಂತೆ ಕಾಣುತ್ತಿದೆ. ಆದಕಾರಣ ಈ ವಿಚಾರವನ್ನು ತಾವು ಈಗಲಾದರೂ Council of States ನ ಮುಂದೆ ಇಡಿ. ಎಲ್ಲರ ಅಭಿಪ್ರಾಯಗಳನ್ನೂ ಪಡೆಯಿರಿ. ತದನಂತರ ಯಾವ ರೀತಿ ಅನುಕೂಲವಾಗುತ್ತೋ ಆ ರೀತಿ ಕಾನೂನುಮಾಡಿ. ಹೀಗೆ ನಿರ್ಧರಿಸುವುದನ್ನು ಬಿಟ್ಟಬಿಟ್ಟು Screening ಗೆ ಬನ್ನಿ, ನೀವು, ಎಂದು ಹೇಳುವುದು ಖಂಡಿತ ಸರಿಯಾದ್ದಲ್ಲ. ಹಿಂದೆ ನಾವು ಈ Screening ಎಂಬ ಶಬ್ದಕ್ಕೆ ಯಾವ ರೀತಿ ಅರ್ಥಮಾಡುತ್ತಿದ್ದೆವೆಂದರೆ, ಯಾರಾದರೂ ಒಬ್ಬರು ತಪ್ಪುಮಾಡಿದ್ದರೆ, ಅಂಥಾ ತಪ್ಪುಮಾಡಿರುವ ಮನುಷ್ಯನನ್ನು ಹಿಂದೆ ಇಟ್ಟುಕೊಂಡು, ಅವನು ತಪ್ಪುಮಾಡಿಲ್ಲ ಎಂದು ಯಾರಾದರೂ ಹೇಳುತ್ತಿದ್ದರೆ, ಆಗ ಅಂಥಾ ಮನುಷ್ಯನಿಗೆ He is screening that man ಎಂದು ಹೇಳುತ್ತಿದ್ದೆವು.

Sri L. SIDDAPPA (Shimoga District-General).—X-Ray examination also is known as screening.

ಶ್ರೀ ಎ. ಭೀಮಪ್ಪನಾಯಕರು.—ಈಗ ಅವರು ನಮ್ಮ ಅಧಿಕಾರಿಗಳನ್ನು ಹಾಗೆ screening ಮಾಡಲು ಇವರೇನು ತಪ್ಪುಮಾಡಿದ್ದಾರೆ? ಅಥವಾ ಇವರ ಹೊಟ್ಟೆಯಲ್ಲಿ ಏನು ಎಲುಬಿದೆಯೇ, ಇಲ್ಲವೇ ಎಂಬುದನ್ನು ನೋಡುತ್ತಾರೋ? ಆದರೆ ಹೀಗೆ ಹೇಳಿರತಕ್ಕದ್ದರಲ್ಲಿ ನನಗೆ ಒಂದೂ ಅರ್ಥವಾಗುವುದಿಲ್ಲ. ಅಥವಾ ಈಗ ಅವರ ಅಭಿಪ್ರಾಯದಲ್ಲಿ ಈ screeningಗೆ ಬನ್ನಿ ಎಂದು ಕರೆಯುವುದರ ಕಾರಣ, ಏನು ಇವರು ಸತ್ಯ ಸಂಧರಾಹುದೇ ಅಥವಾ ಅಲ್ಲವೇ, ಇವರು ದಕ್ಷರಾಗಿದ್ದಾರೆಯೇ ಅಥವಾ ಇಲ್ಲವೇ, ಎಂಬ ಇತ್ಯಾದಿ ಅಂತಗಳನ್ನು ತಿಳಿಯಲು ಕೆಲವು ಪ್ರಶ್ನೆಗಳು ಹಾಕಿ ಪರೀಕ್ಷೆ ಮಾಡಬೇಕೆಂಬುದು ಅವರ ಉದ್ದೇಶವಾಗಿದೆಯೆಂದು ಅರ್ಥಮಾಡಬಹುದು. ಆದರೆ ಈ ನೆಪಮಾತ್ರಕ್ಕೆ ಹಾಕತಕ್ಕ ಪ್ರಶ್ನಾವಳಿಗಳಿಂದಲೇ ಒಬ್ಬ ಅಧಿಕಾರಿಯ ಸತ್ಯ ಸಂಧತೆಯನ್ನಾಗಲೀ ಅಥವಾ ದಕ್ಷತೆಯನ್ನಾಗಲೀ ನಿರ್ಧರಮಾಡುವುದು ಸಾಧ್ಯವಿಲ್ಲದ ಬದುಕು. ಅದರಲ್ಲೂ ಇಲ್ಲಿರತಕ್ಕ ನಮ್ಮ ಅಧಿಕಾರಿಗಳ ವಿಚಾರದಲ್ಲಿ ಹೊರಗಡೆಯವರು ಅಭಿಪ್ರಾಯ ಕೊಡುವುದು ಅಷ್ಟು ಶ್ರೇಷ್ಯವಾದ್ದೆಂದು ನಾನು ಭಾವಿಸಲಾರೆ. ಈ ದಿವಸ ಒಬ್ಬ ಅಧಿಕಾರಿಯ ಸ್ಥಾನಮಾನಗಳೇನಿವೆ; ಹಿಂದಿನಿಂದಲೂ ಆತನು ಸರ್ಕಾರಕ್ಕೆ ಎಷ್ಟರಮಟ್ಟಿಗೆ ಸೇವೆಯನ್ನು ಸಲ್ಲಿಸಿಕೊಂಡುಬಂದಿದ್ದಾನೆ, ಸರ್ಕಾರದಲ್ಲಿ ಆತನು ಎಷ್ಟು ನಮ್ರತೆಯಿಂದ ಕೆಲಸಮಾಡಿದ್ದಾನೆ ಎಂಬೀ ವಿಷಯಗಳನ್ನು ವಿಮರ್ಶೆಮಾಡಿ ನೋಡುವುದು ಎಲ್ಲರಿಗೂ ಬಹಳ ಸಂತೋಷವಾದ ರೀತಿ ನೀತಿ. ಹೀಗೆ ಒಂದು ದೂರದೃಷ್ಟಿಯನ್ನಿಟ್ಟುಕೊಂಡು, ಈ ಸರ್ಕಾರದೆ ಆಡಳಿತದಲ್ಲಿ ಅನುಭವ ಪಡೆದಿರುವಂಥ ಮಹನೀಯರು ನಮ್ಮಲ್ಲೇ ಅನೇಕವಾಗಿದ್ದಾರೆ. ಅಂಥವರು ಬೇಕಾದರೆ ಈ ಕೆಲಸ ಮಾಡಬಹುದೇ ಶಿವಾಯಿ ಹೊರಗಡೆಯವರಿಂದ ಇದು ಆಗದಮಾತು. ಉದಾಹರಣೆ ಹೇಳುವುದಾದರೆ ನಮ್ಮಲ್ಲಿ ಅಂಥ ಯೋಗ್ಯತೆಯುಳ್ಳವರೆಂದರೆ— ಶ್ರೀ ಎಲ್. ಸಿದ್ಧಪ್ಪನವರಿದ್ದಾರೆ, ಜನಾಬ್ ಮಹಮದ್ ಇಮಾಂರವರಿದ್ದಾರೆ ಮತ್ತು ಶ್ರೀ ಎಚ್. ಬಿ. ಗುಂಡಪ್ಪಗೌಡರಿದ್ದಾರೆ. ಹೀಗೆ ಇನ್ನೂ ಅನೇಕ ಮಹನೀಯರಿದ್ದಾರೆ. ಇವರೆಲ್ಲ ನಮ್ಮ ಸರ್ಕಾರದಲ್ಲಿ ಆಡಳಿತ ನಡೆಸಿದವರಾಗಿರುವುದರಿಂದ, ಇಲ್ಲಿಯ ಅಧಿಕಾರಿಗಳ ಕೆಲಸವನ್ನು ಪಡೆದಿರುವ ಅನುಭವ ಅವರಿಗೆ ಇರುವ ಕಾರಣದಿಂದ, ಯಾವ ಯಾವ ಅಧಿಕಾರಿಯ ಯೋಗ್ಯತೆ ಎಷ್ಟೆಷ್ಟರ ಮಟ್ಟಿಗಿದೆ, ಯಾರು ಯಾರು ದಕ್ಷರು ಎಂಬುದನ್ನು ತಿಳಿಸಬಲ್ಲರು. ಮೈಸೂರಿನಲ್ಲಿಯೂ ಅನೇಕ ದಕ್ಷರೂ, ಮೇಧಾವಿಗಳೂ ಇದ್ದಾರೆ. ಆದರೆ ಇವರಿಗೇ ಇಲ್ಲಿ ಸಾಕಷ್ಟು ಸ್ಥಾನಮಾನಗಳಿಗೆ ಅವಕಾಶವಿಲ್ಲದಿರುವಾಗ ಹೊರಗಡೆಯವರ ಸಹಾಯ ನಮಗೇಕೆ ಬೇಕು?

Is there dearth for intelligence? Is there dearth for honesty? Is there dearth for sincerity of service? I am putting a straight question. Let there be a dearth. Then let them say. "Therefore we want to adopt the Indian Administrative Service Scheme for Mysore."

ಈ ಸಂದರ್ಭದಲ್ಲಿ ನನ್ನ ಪ್ರಶ್ನೆಗೆ ತಾವು ಉತ್ತರ ಹೇಳುವಾಗ ಭಾರತದ ಏಳಿಗೆಯ ಹಿತದೃಷ್ಟಿಯಿಂದ ಮತ್ತು ಭಾರತದ ಒಗ್ಗಟ್ಟಿನ ಹಿತದೃಷ್ಟಿಯಿಂದ ಭಾರತದಲ್ಲಿರತಕ್ಕ ಎಲ್ಲ ಪ್ರಜೆಗಳಿಗೂ ಸರ್ವಸಮಾನವಾದ ಹಕ್ಕುಗಳಿರಬೇಕೆಂಬ ಧ್ಯೇಯಕ್ಕಾಗಿ ಎಲ್ಲೊಂದು ದೊಡ್ಡ ಸ್ಥಾನವಿದ್ದರೂ ಅದಕ್ಕೆ ಎಲ್ಲರಿಗೂ ಹಕ್ಕು ಬಾಧ್ಯತೆಗಳಿರುತ್ತವೆಂದೂ, ಆ ದೃಷ್ಟಿಯಿಂದ ಹೀಗೆ ಮಾಡಲಾಗಿರುತ್ತೆಂದೂ ತಾವು ತಿಳಿಸಬಹುದು.

ಶ್ರೀ ಎಚ್. ಸಿ. ದಾಸಪ್ಪನವರು (ಆರ್ಥಿಕ ಸಚಿವರು).—ನಮ್ಮ ವಾದವನ್ನು ಸಹ ತಾವೇ ಮಾಡುತ್ತಿದ್ದೀರಿ. ನಮಗೆ ಮಾತ್ರಷ್ಟು ಸುಲಭವಾಯಿತು.

Sri L. SIDDAPPA.—And even some other platitudes.

ಶ್ರೀ ಎ. ಭೀಮಪ್ಪನಾಯಕರು.—ನಿಮ್ಮ ವಾದ ಮುಂದಕ್ಕೆ ಕಡಿಮೆಯಾಗಲೀ ಎಂದೇ ನಾನು ಇದೆಲ್ಲ ವನ್ನೂ ಹೇಳುತ್ತಿದ್ದೇನೆ. ಮೈಸೂರಿನ ಪ್ರಜೆಗಳಿಗೆ ಇಡೀ ಜಗತ್ತಿನಲ್ಲೇ ಉನ್ನತವಾದ ಸ್ಥಾನ ಮಾನಗಳು ದೊರೆಯಬೇಕೆಂದು ಆಶಿಸತಕ್ಕ ವ್ಯಕ್ತಿಗಳ ಪೈಕಿ ನಾನೂ ಒಬ್ಬ. ಅಂಥ ದೊಡ್ಡ ದೊಡ್ಡ ಸ್ಥಾನಗಳಿಗೆ ಯಾರು ಬೇಕಾದರೂ ಬಂದು ಕುಳಿತುಕೊಳ್ಳಬಹುದು. ಎಲ್ಲರಿಗೂ ಸರಿಸಮಾನವಾದ ಹಕ್ಕು ಬಾಧ್ಯತೆಗಳಿವೆ. ಅದರಲ್ಲಿ ಯಾವ ಜಾತಿ ಮತಗಳ ವ್ಯತ್ಯಾಸವೂ ಇರುವುದಿಲ್ಲ. ಅಂಥಾ ಸ್ಥಾನಗಳಿಗೆ ಎಂದರೆ ಇಂಡಿಯನ್ ಅಡ್ಮಿನಿಸ್ಟ್ರೇಟೀವ್ ಸರ್ವಿಸಿಗೆ ಕುಳಿತುಕೊಳ್ಳಲು ಎಲ್ಲರೂ ಅರ್ಹರಾಗಿರುತ್ತಾರೆ. ಅಂದಮೇಲೆ ಇಡೀ ಭಾರತದ ಯುವಕರೆಲ್ಲರಿಗೂ ಸರಿಸಮಾನವಾದ ಹಕ್ಕು ಬಾಧ್ಯತೆಗಳಿದ್ದೇ ಇವೆ. ಆ ಬಗ್ಗೆ ನೀವೇನೂ ಮಾಡಬೇಕಾಗಿಲ್ಲ. ಅದನ್ನು ಕಾನ್‌ಸ್ಟಿಟ್ಯೂಷನ್ನೇ ಕಲ್ಪಿಸಿಕೊಟ್ಟಿದೆ.

ಆದರೆ ನೀವೀಗ ಮಾಡಿರತಕ್ಕದ್ದು ಕಾನೂನಿಗೆ ತೀರಾ ವಿರುದ್ಧವಾಗಿದೆ. ನಮ್ಮ ಸಂಸ್ಥಾನದಲ್ಲಿ 37 ಅಥವಾ 38 ದೊಡ್ಡ ದೊಡ್ಡ ಸ್ಥಾನಗಳಿವೆ. ಆ ಪೈಕಿ 8—9ನ್ನೋ ನಿಮಗೆ ಉಳಿಸಿಕೊಂಡು ಬಾಕಿ ಸ್ಥಾನಗಳನ್ನು ಅವರಿಗೆ ಬಿಟ್ಟುಕೊಟ್ಟುಬಿಡಬೇಕೆಂದು ತಿಳಿಸಲಾಗಿದೆ. ಆದರೆ ಇತ್ತೀಚೆಗೆ ನೀವು ಅಷ್ಟು ಸಾಲದು ನಮಗೆ ಇನ್ನೂ 8—9 ಸ್ಥಾನಗಳು ಅಂದರೆ ಸುಮಾರು 18 ಸ್ಥಾನಗಳನ್ನು ಬಿಟ್ಟು ಕೊಡಬೇಕೆಂದು ಅವರೊಡನೆ ಹೊಡೆದಾಡುತ್ತಿರುವಂತೆ ತಿಳಿಯಬಂದಿರುತ್ತೆ.

ಶ್ರೀ ಎಚ್. ಸಿ. ದಾಸಪ್ಪನವರು.—ಅದು ಇನ್ನೂ ನಿಖರವಾಗಿ ತೀರ್ಮಾನಮಾಡಿಲ್ಲ. ಅದು ತಮಗೆ ಹೇಗೆ ಗೊತ್ತಾಯಿತು?

ಶ್ರೀ ಎ. ಭೀಮಪ್ಪನಾಯಕರು.—ಪ್ರಶ್ನಾವಳಿಗೆ ಉತ್ತರಗಳು ಹೇಳುವಾಗ ಆ ರೀತಿ ತಿಳಿಸಲಾಗಿದೆ. ಆದರೆ ನಮ್ಮ ಮನೆಯನ್ನು ದೋಚಿಕೊಂಡು ಹೋಗಿ ಇತರರಿಗೆ ಕೊಟ್ಟು ದೇಶಸೇವೆ ಮಾಡಬೇಕೆಂದು ಹೇಳುವುದನ್ನು ಯಾರೂ ಒಪ್ಪುವುದಿಲ್ಲ. ಅಂಥಾ ಅನಿವಾರ್ಯ ಸಂದರ್ಭಗಳಿದ್ದರೆ, ಕೇಂದ್ರದವರಿಗೆ ಅಂಥ ದಕ್ಷರಾದ, ತರುಣರಾದ, ಅಧಿಕಾರಿಗಳು ಬೇಕಾಗಿದ್ದು ಅವರು ಇಷ್ಟಪಟ್ಟು ತೆಗೆದುಕೊಳ್ಳುವುದಾಗಿದ್ದರೆ ಆಗ ಅವರು ಆ ಬಗ್ಗೆ ಒಂದು ಪರೀಕ್ಷೆಯನ್ನಿಡಲಿ, ಆ ಪರೀಕ್ಷೆಗೆ ಯಾರು ಯಾರು ಇಷ್ಟಪಡುತ್ತಾರೋ ಮತ್ತು ಯಾರು ಯಾರು ತಮ್ಮ ಸಂಸ್ಥಾನವನ್ನು ಬಿಟ್ಟು ಹೊರಗಡೆ ಹೋಗಿ ದೇಶಸೇವೆ ಮಾಡಬೇಕೆಂಬ ವಾಂಛಲ್ಯವುಳ್ಳವರಾಗಿರುತ್ತಾರೋ ಅಂಥವರೆಲ್ಲರೂ ಹೋಗಿ ಪರೀಕ್ಷೆಗೆ ಕುಳಿತು ನಾಳೆ ಅವರು ಭಾರತದ ಭೀಫ್ ಸೆಕ್ರೆಟರಿಗಳ ಸ್ಥಾನವನ್ನೇ ಬೇಕಾದರೆ ಪಡೆಯಲಿ ಅಥವಾ ನಮಗೇ ಅಂಥಾ ಅವಶ್ಯಕತೆ ಬಿದ್ದರೆ ಆಗ ನಾವೊಂದು ಪರೀಕ್ಷೆಯನ್ನಿಟ್ಟು ಅದರಲ್ಲಿ ಯಾರು ತೇರ್ಗಡೆ ಹೊಂದುತ್ತಾರೋ ಅಂಥವರನ್ನು ನಾವೂ ತೆಗೆದುಕೊಳ್ಳಬಹುದು. ಹೀಗೆ ಮಾಡುವುದಾದರೂ ನನಗೆ ಅಭ್ಯಂತರವಿಲ್ಲ. ಹಾಗಿಲ್ಲದೆ ನಮ್ಮ ದೇಶದಲ್ಲಿ ಈಗಾಗಲೇ ಕಲಸದಲ್ಲಿದ್ದುಕೊಂಡು ಕೆಲವಾರು ವರ್ಷಗಳಿಂದ ಸೇವೆ ಸಲ್ಲಿಸಿಕೊಂಡುಬಂದಿರತಕ್ಕ ಅಧಿಕಾರಿಗಳಿಗೆ ಒಂದು ಪರೀಕ್ಷೆಯನ್ನಿಡಬೇಕೆಂದು ಹೇಳುವುದರ ಅರ್ಥವೇನು? ಉದಾಹರಣೆಗೆ ಒಂದು ಹೇಳುವುದಾದರೆ ಈಗ ನಮ್ಮಲ್ಲಿ ಒಬ್ಬ ಜಿಲ್ಲಾಧಿಕಾರಿ 10 ವರ್ಷಗಳಿಂದಲೂ ಕೆಲಸಮಾಡುತ್ತಿದ್ದಾರೆಂದು ಭಾವಿಸೋಣ. ನಾಳೆ ಇಂಥವರೆಲ್ಲರೂ ಆ ಪರೀಕ್ಷೆಗೆ ಕುಳಿತು ಉತ್ತೀರ್ಣರಾದ ನಂತರವೇ ಅವರು ಆ ಸ್ಥಾನಕ್ಕೆ ಅರ್ಹತೆಯುಳ್ಳವರು ಎಂಬುದನ್ನು ನಿರ್ಧರಿಸಲು ಭಾರತದ ಒಬ್ಬ ಕಮಿಷನರೋ ಅಥವ ಪಬ್ಲಿಕ್ ಸರ್ವಿಸ್ ಕಮಿಷನರೋ ಈ ದಿವನ ಬಂದು ಪರೀಕ್ಷೆಮಾಡಿ ಅದರಲ್ಲಿ ಅತನು ಉತ್ತೀರ್ಣನಾಗದೆ ಹೋದರೆ, ಅತನಿಗೆ ಅರ್ಹತೆಯಿಲ್ಲವೆಂದು ಆಗ ನೀವು ಅತನನ್ನು ವಾಪಸ್ಸು ಕಳುಹಿಸಿಕೊಡಲಿಕ್ಕೆ ಆಗುತ್ತದೆಯೇನು? ಅದು ಸಾಧ್ಯವೇ? ಆಗ ನೀವೇನು ಮಾಡುತ್ತೀರಿ?

ಕೆಲವರು ಸ್ಪೆಷಲ್ ಕಮಿಷನರಾಗಿ ಹೋಗಬಹುದೆಂದೂ, ಕೆಲವರಿಗೆ ದೊಡ್ಡ ಸ್ಥಾನಗಳಿವೆಯೆಂದೂ ಹೇಳಬಹುದು. ಈಗ ನಮ್ಮಲ್ಲಿ 120 ಜನ ಅಸಿಸ್ಟೆಂಟ್ ಕಮಿಷನರಿದ್ದಾರೆ. ಅವರು ಒಂದಾನೊಂದು ದಿವಸ ಇರುವ 37 ಉನ್ನತ ಸ್ಥಾನಗಳಲ್ಲಿ ಸೇವೆ ಸಲ್ಲಸಬೇಕೆಂದಿದ್ದಾರೆ. ಆದರೆ ಅವರಿಗೆ ಉಳಿಯುವುದು 18 ಸ್ಥಾನಗಳು ಮಾತ್ರ ಎಂದು ಹೇಳಿದರೆ ಅದರ ಅರ್ಥವೇನು? ಆಮೇಲೆ ಅವರನ್ನು ಚುನಾಯಿಸುವಾಗ ಕೆಲವರಿಗೆ ಮಾತ್ರ ಅವಕಾಶ ಸಿಕ್ಕಬಹುದು. ಆಗ ಉಳಿದವರ ಗತಿಯೇನು? ಅವರಿಗೂ ದೊಡ್ಡ ಜಾಗವೇ ಇಲ್ಲವೆ? ಈಗಾಗಲೇ ಇಂಡಿಯನ್ ಡೊಮಿನಿಯನ್ ಸರ್ವಿಸ್ ಯೂನಿವರ್ಸಿಟಿ ಕೌನ್ಸಿಲ್ ಬಂದಿದೆ. ಇಂಡಿಯನ್ ಎಜುಕೇಷನ್ ಸಿಸ್ಟಂ ಒಪ್ಪಿದ್ದೀರಿ. ಹಾಗಿರುವಾಗ ಇಲ್ಲಿನವರು ಏಕೆ ಪ್ರೊಫೆಸರ್ ಆಗಬೇಕು? ಅವರು ಕಲ್ಕತ್ತಾಕ್ಕೆ ಹೋಗಲಿ, ಅಲ್ಲಿ ಪ್ರೊಫೆಸರ್ ಆಗಿ ಕನ್ನಡ ಕಲಿಸಲಿ ಎಂದು ಹೇಳಿದರೆ ಅದರಲ್ಲಿ ಅರ್ಥವೇನು? ಭಾರತ ದೇಶದಲ್ಲಿ ಎಷ್ಟೋ ಸಂಸ್ಕೃತಿ, ವೈವಿಧ್ಯ ಇದೆ, ಎಷ್ಟೋ ವಿಧವಾದ ಭಾಷಾ ವಿಶೇಷವಿದೆ. ದೇಶದ ರೀತಿ ನೀತಿ, ನಡೆ ನುಡಿ ಮುಂತಾದ್ದಕ್ಕೆಲ್ಲಾ ಪ್ರಾಶಸ್ತ್ಯವಿದೆ. ಅದನ್ನು ಈ ದಿವಸ ಆಯಾಯ ಭಾಗದಲ್ಲಿರುವ ಜನರು ಆಯಾ ಭಾಗದ ವೈಶಿಷ್ಟ್ಯವನ್ನು ತಿಳಿದುಕೊಳ್ಳಬಲ್ಲರೇ ಹೊರತು ಭಾರತದ ಎಲ್ಲಾ ಕಡೆಯ ಅಧಿಕಾರಿಗಳು ಹೇಗೆ ತಿಳಿದುಕೊಳ್ಳಬಲ್ಲರು ಎಂದು ಹೇಳಿದರೆ ಅದರಲ್ಲಿ ಅತಿಶಯವೇನೂ ಇಲ್ಲ. ಭಾರತದ ನಾನಾ ಭಾಗಗಳಲ್ಲಿರುವವರು ಇಲ್ಲಿನವರಂತೆ ಎಲ್ಲವನ್ನೂ ಜಾಗ್ರತೆ ತಿಳಿದುಕೊಂಡು ಇಲ್ಲಿ ನರಿಯಾಗಿ ವರ್ತಿಸಬಲ್ಲರೆಂದು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಭಾರತದ ಒಂದು ಭಾಗದಲ್ಲಿ ಜಮೀನ್ದಾರಿ ಪದ್ಧತಿಯನ್ನು ತಿಳಿದುಕೊಂಡಿರುವವರು ಇಲ್ಲಿನ ಕೈವಾಡ ಹೇಗೆಂದು ತಿಳಿದುಕೊಂಡು ಆಡಳಿತ

ನಡೆಸಬೇಕಾದರೆ ನಾಲ್ಕೈದು ವರ್ಷಗಳಾದರೂ ದುಡಿಯಬೇಕು. ಆತನು ಬಹಳ ಬುದ್ಧಿಶಾಲಿಯಾದರೂ ಸಹ ಇಲ್ಲಿಗೆ ಬಂದಾಗ ಅಮಲ್ದಾರರು ಮತ್ತು ಸೇಕದಾರರು ಹೇಳಿಕೊಡಬೇಕು. ಈ ಕಷ್ಟ ಪ್ರತಿಯೊಬ್ಬರಿಗೂ ಇದೆ. ಇದನ್ನು ಗಮನದಲ್ಲಿಡಬೇಕು. ಆದ್ದರಿಂದ ಮೈಸೂರು ದೇಶದಸರ್ವಿಸ್ಸಿನಲ್ಲಿರುವವರುಮಾಡಿರುವ ಸೇವೆಯನ್ನು ಗಮನಿಸಿ ಅದಕ್ಕೆ ಸರಿಯಾದ ಪ್ರತಿಫಲ ದೊರೆಯುವ ರೀತಿಯಲ್ಲಿ ನಮ್ಮ ದೇಶದ ಆಡಳಿತ ವ್ಯವಸ್ಥೆಯನ್ನು ನಿರ್ಮಾಣ ಮಾಡಿಕೊಂಡು ಹೋಗಬೇಕು, ನಡೆಸಿಕೊಂಡು ಹೋಗಬೇಕು ಎಂದು ಹೇಳುತ್ತೇನೆ. ನಮ್ಮ ಮೈಸೂರು ದೇಶದಲ್ಲಿ ಈಗ ಅನೇಕರಲ್ಲಿ ನಿರಾಶೆ ಮೂಡಿದೆ. ನಮ್ಮಲ್ಲಿರುವ ವಿದ್ಯಾವಂತರು ಅವಿದ್ಯಾವಂತರ ಅಭಿವೃದ್ಧಿಗಾಗಿ ಅನೇಕ ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಅನೇಕರಿಗೆ ಅವರವರ ಮನೆತನ ಮತ್ತು ಬಾಕಿ ವಿಷಯಗಳನ್ನು ಗಮನಿಸಿ ನಾಮಿನೇಷ್ಷ ಮಾಡುತ್ತಾರೆ. ನಮ್ಮಲ್ಲಿ ಅನೇಕ ದಿವಾನರು ಮತ್ತು ದೊಡ್ಡ ದೊಡ್ಡ ಅಧಿಕಾರಿಗಳ ಮಕ್ಕಳಿಗೆ ನಾಮಿನೇಷ್ಷ ಆಗಿದೆ. ಅದರ ಉದ್ದೇಶವೇನು ? ಹಿಂದುಳಿದ ಜನಾಂಗವನ್ನು ಮುಂದಕ್ಕೆ ತರುವುದೊಂದು. ಅಲ್ಲದೆ ದೊಡ್ಡ ಮನೆತನದವರು ಆವರ ಪ್ರಾಮಾಣಿಕತನದಲ್ಲಿ ಸರ್ವಶ್ರೇಷ್ಠರೂ ಆಗಿರುತ್ತಾರೆ. ಅಂಥವರು ಅಸಿಸ್ಟೆಂಟ್ ಕಮಿಷನರಾಗಿದ್ದರೆ ಅವರನ್ನು ಕೆಳದರ್ಜೆಗೆ ಹೋಗುವುದಕ್ಕೆ ಅವಕಾಶ ಮಾಡಬಾರದು. ಅವರಿಗೆ ಸೇವೆ ಮಾಡುವಾಗ ತಮ್ಮ ಮನೆತನದ ಹೆಸರನ್ನುಳಿಸಿಕೊಳ್ಳಬೇಕೆಂಬ ಒಂದು ಸದ್ಭಾವನೆಯಿರುತ್ತದೆ. ಅದನ್ನು ಗಮನಿಸಿ ನಮ್ಮಲ್ಲಿರುವವರಿಗೆ ಪ್ರಾಶಸ್ತ್ಯ ಕೊಡಬೇಕು. ಅನೇಕವಾಗಿ ನಾವು ಮೈಸೂರು ಸಿವಿಲ್ ಸರ್ವಿಸ್ಸನ್ನು ಬೆಳೆಸಿಕೊಂಡು ಬಂದಿದ್ದೇವೆ. ನಮ್ಮ ನಾಮಕರಣ ಪದ್ಧತಿಯು ಇದಕ್ಕೆ ಬಹಳ ಉಪಕಾರಿಯಾಗಿದೆ. ಅಸಿಸ್ಟೆಂಟ್ ಕಮಿಷನರಾಗಿ ಬಂದಿರುವ ಅನೇಕರು ಮೈಸೂರು ದೇಶದ ಆಡಳಿತದಲ್ಲಿ ಭೂಷಣ ಪ್ರಾಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ವಿಚಾರದಲ್ಲಿ ಎಲ್ಲರೂ ಪ್ರೀತಿ ವಿಶ್ವಾಸ, ಆದರ ಇಟ್ಟು ಕೊಳ್ಳುವ ರೀತಿಯಲ್ಲಿ. ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಹೀಗಿರುವಾಗ ನಾಳೆ ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ ಯೋಜನೆಯನ್ನು ಜಾರಿಗೆ ತಂದರೆ ಇಂಥ ವ್ಯವಸ್ಥೆಯು ಅದರಲ್ಲಿರುವುದಿಲ್ಲ. ಆಗ ಅನೇಕ ಅನುಕೂಲತೆಗಳು ತಪ್ಪಿಹೋಗುತ್ತವೆ. ಅಸಿಸ್ಟೆಂಟ್ ಕಮಿಷನರಾಗಿರುವವರೂ, ಅಮಲ್ದಾರರಾಗಿರುವವರೂ ಮೇಲೆಹೋಗಲು ಅವಕಾಶವಿಲ್ಲದೆ ಅದೇ ಕೆಲಸದಲ್ಲೇ ಉಳಿಯಬೇಕಾಗುವುದು. ಮುಂದೇನು ಮಾಡಬೇಕು ? ಸರ್ವಿಸ್ಸಿನಲ್ಲಿ ಆಶೆ ಆಕಾಂಕ್ಷೆಯೇನಿದೆ ? ಸೇವೆ ಮಾಡುವುದರಿಂದ, ಪ್ರೀತಿವಿಶ್ವಾಸ ಬೆಳೆಸುವುದರಿಂದ ಮೈಸೂರು ಸಂಸ್ಥಾನದ ಆಡಳಿತದಲ್ಲಿ ದೊಡ್ಡ ಸ್ಥಾನವನ್ನು ಸಂಪಾದಿಸಬಹುದೆಂಬುದು ಒಂದು ಕನಸಾಗುತ್ತದೆ. ಅಂದ ಮೇಲೆ ಸೇವೆ ಏಕೆ ಮಾಡುತ್ತಾರೆ ? ಈ ದಿವಸ ಅಸಿಸ್ಟೆಂಟ್ ಕಮಿಷನರಾಗಿರುವವರು ಅಸಿಸ್ಟೆಂಟ್ ಕಮಿಷನರಾಗಿಯೇ ಮತ್ತು ಅಮಲ್ದಾರರಾಗಿರುವವರು ಅಮಲ್ದಾರರಾಗಿಯೇ ನಿವೃತ್ತರಾಗಬೇಕೆಂದರೆ ಅವರು ಎಷ್ಟು ಶ್ರದ್ಧೆಯಿಂದ ಸೇವಾದೀಕ್ಷೆಯನ್ನು ಕೈಕೊಳ್ಳಬಲ್ಲರು ಎಂಬುದನ್ನು ಯೋಚನೆ ಮಾಡಬೇಕು. ಇದೆಲ್ಲವನ್ನೂ ಪರಿಗಣಿಸಿ, ಎಲ್ಲವನ್ನೂ ದೃಷ್ಟಿಯಲ್ಲಟ್ಟು ಮೈಸೂರು ದೇಶದ ಆಡಳಿತಕ್ಕೆ ಧಕ್ಕೆ ಬಾರದಂತೆಯೂ, ಈಗ ಸರ್ವಿಸ್ಸಿಗೆ ಸೇರಿರುವವರಿಗೆ ಧಕ್ಕೆ ಬಾರದಂತೆಯೂ ತಕ್ಕ ವ್ಯವಸ್ಥೆ ಮಾಡಬೇಕು. ಅಂದಮಾತ್ರಕ್ಕೆ ರಾಜ್ಯಾಂಗದಲ್ಲಿರುವುದನ್ನು ಕೆಡಿಸುವುದು ಬೇಡ. ಬರಬೇಕಾದ್ದು ತಾನಾಗಿಯೇ ಬರುತ್ತದೆ. ಬುದ್ಧಿವಂತ ಯಾವಾಗಲೂ ಬುದ್ಧಿವಂತನಾಗಿಯೇ ಇದ್ದರೆ ಮಾತ್ರ ಪರೀಕ್ಷೆಯಲ್ಲಿ ಕುಂಡದಲ್ಲಿ ತೇರ್ಗಡೆಯಾಗಿ, ಅಲ್ಲಿ ರಾರಾಜಿಸಿ ಒಂದು ಸ್ಥಾನ ಪಡೆಯುತ್ತಾನೆ. ಅದು ಬಿಟ್ಟು ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ಸನ್ನು ಇಂಟರ್ಗ್ರೇಟ್ ಮಾಡಿದ್ದರಿಂದಲೇ ಪಡೆಯುವನೆ ? ಆದ್ದರಿಂದ ಅದೊಂದು ಮಹತ್ವ ಎಂದು ಹೇಳಬೇಕಾಗಿಲ್ಲ. ಇಲ್ಲಿರುವ ಶಿಕ್ಷಣ ಪದ್ಧತಿ, ಆಡಳಿತ ರೀತಿ ನೀತಿ, ಶಕ್ತಿ, ದಕ್ಷತೆ ಮುಂತಾದ್ದನ್ನು ಭಾರತ ಸರ್ಕಾರದ ಮುಂದಿಟ್ಟರೆ ಅವರು ಖಂಡಿತ ಪುನರಾಲೋಚನೆ ಮಾಡುತ್ತಾರೆ. ಇದಕ್ಕೆ ಈ ಸಭೆಯ ಒಮ್ಮತ ಅಭಿಪ್ರಾಯವಿದೆ. ಸಾಧ್ಯವಾದರೆ ನಮ್ಮವರನ್ನು ಅಲ್ಲಿಗೆ ಬೇಕಾದಾಗ ಕಳುಹಿಸೋಣ, ಆಗ ಅವರು ಚುನಾಯಿಸಿಕೊಳ್ಳಲಿ. ನಮಗೆ ಬೇಕಾದರೆ ಅಲ್ಲಿನವರನ್ನು ನಾವು ಚುನಾಯಿಸಿಕೊಳ್ಳೋಣ. ಇಷ್ಟು ಮಾತ್ರ ಇರಬೇಕೇ ಹೊರತು ಮತ್ತೇನೂ ಕೂಡದು ನಮ್ಮಲ್ಲೇ ಬೇಕಾದ ಆರ್ಥಿಕ ಪ್ರವೀಣರಿದ್ದಾರೆ. ಅವರು ಅಲ್ಲಿಗೆ ಹೋದಾಗ ಅಲ್ಲಿನ ಸಂಬಳಸಾರಿಗೆ ಕೊಡಲಿ, ಅಲ್ಲಿನವರು ಬಂದರೆ ಅವರ ಸಂಬಳ ನಾವೂ ಕೊಡೋಣ. ಈಗ ಇಂಡಿಯನ್ ಎಜುಕೇಷನ್ ಸರ್ವಿಸ್, ಫಾರೆಸ್ಟ್ ಸರ್ವಿಸ್, ಮೆಡಿಕಲ್ ಸರ್ವಿಸ್ ಮುಂತಾದ್ದೆಲ್ಲಾ ಇದೆ. ಸ್ಕ್ಯಾವೆಂಜರ್ ಸರ್ವಿಸ್ ಸಹ ಇರಬೇಕೆಂದು ಹೇಳಬಹುದು. ಅಂದರೆ ಕ್ಲೀನಿಂಗಿನ ಹೆಲ್ಪ್ ಆಫೀಸರೂ ಅಲ್ಲಿನವರೇ ಇರಬೇಕೆಂದೂ ಹೇಳಬಹುದು. ಹೀಗೆ ಮಾಡುತ್ತಾ ಹೋದರೆ ಕೊನೆಮೊದಲೇ ಇಲ್ಲದೇ ಹೋಗುತ್ತದೆ. ಆದ್ದರಿಂದ ಇಷ್ಟು ಕೇಂದ್ರೀಕರಣ ಮಾಡುವುದು ಬೇಡ, ತಡೆಯಿರಿ ಎಂದು ಹೇಳುವಹಾಗೆ ಸರ್ಕಾರಿ ಆಜ್ಞೆ ಮಾಡುವುದನ್ನು ನಿಲ್ಲಿಸಿ ನಿರ್ಣಯ ಮಾಡಿ ಕಳುಹಿಸೋಣ.

ಜನಾಬ್ ಜೆ. ಮಹಮದ್ ಇಮಾಂರವರು.—On a point of information, Sir. ಮಂಗಳವಾರ ನಾನ್ ಅಫಿಷಿಯಲ್ ಬಿಸಿನೆಸ್ ಇದೆಯೆ ?

(ಉತ್ತರವಿಲ್ಲ).

ಶ್ರೀ ಎ. ಭೀಮಪ್ಪನಾಯಕರು.—ನಮ್ಮವರಿಗೆ ಇದರಿಂದ 1,400 ರ ರಿಂದ 1,800 ರ ವರೆಗೆ ಸಂಬಳ ಸಿಕ್ಕುತ್ತದೆ. ಇಲ್ಲಿ ಪರಮಾವಧಿ 1,400 ಎಂದು ಹೇಳಬಹುದು. 800 ಬರುವವರು 1,800 ರರ ವರೆಗೆ ಹೋಗಬಹುದೆಂದು ಹೇಳುತ್ತೀರಿ. ಆದರೆ ಇಲ್ಲಿ ಹೆಚ್ಚು ಗ್ರೇಡಿನಲ್ಲಿರುವವರು ನಿವೃತ್ತರಾದರೆ ಆ ಸ್ಥಾನಗಳು ನಮ್ಮವರಿಗೆ ಸಿಕ್ಕದೇ ಹೋಗುತ್ತವೆ.

ನಮ್ಮಲ್ಲಿರುವವರಲ್ಲಿ ನಾಲ್ಕಾರು ಜನರು ಅಲ್ಲ ಹೋಗಬೇಕೆಂದರೆ, ಅವರಿಗೆ ಅಲ್ಲಿ ಉತ್ತಮವಾದ ಸ್ಥಾನಗಳು ದೊರೆಯುವುದಾದರೆ ನಾಳೆಯೇ ಬೇಕಾದರೂ ಕಳುಹಿಸಿಕೊಡಿ. ಭಾರತ ಸರ್ಕಾರದಲ್ಲಿ ಸೇವೆ ಮಾಡುವುದಕ್ಕೆ ಅಲ್ಲಿ ಉನ್ನತವಾದ ಸ್ಥಾನಗಳನ್ನು ಪಡೆಯಲು ನಮ್ಮಲ್ಲಿನವರೇ ಕರಿದ್ದಾರೆ. ಆದರೆ, ನಾಲ್ಕಾರು ಅಧಿಕಾರಿಗಳ ಅನುಕೂಲಕ್ಕಾಗಿ, ಇಲ್ಲಿ ಇನ್ನೂ ಕೆಳಗಿರುವ ಸ್ಥಾನಗಳಲ್ಲಿರುವ ಅಧಿಕಾರಿಗಳ ಹಿತಕ್ಕೆ ಧಕ್ಕೆ ಬಾರದಿರುವಹಾಗೆ ನೋಡಿಕೊಳ್ಳಬೇಕು. ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸನ್ನು ಇಲ್ಲಿಗೆ ವಿಸ್ತರಿಸುವುದರಿಂದ ನಮಗೆ ಯಾವ ರೀತಿಯಲ್ಲಿಯೂ ಅನುಕೂಲವಾಗುವುದಿಲ್ಲ, ಇನ್ನೂ ಹೆಚ್ಚು ಖರ್ಚಿಗೆ ಕಾರಣವಾಗಬಹುದು. ನಮ್ಮ ಸರ್ಕಾರಕ್ಕೆ ಈಗ 1,400 ರೂಪಾಯಿ ಪರಮಾವಧಿ ಸಂಬಳ ಕೊಡುವುದಕ್ಕೆ ಬದಲು ಇದೇ ಕೆಲಸವಾಡುವ ಅಧಿಕಾರಿಗಳಿಗೆ 1,800 ರೂಪಾಯಿ ಕೊಟ್ಟು ಈ ಹೆಚ್ಚಿನ ಖರ್ಚನ್ನು ನಾವು ಹೊತ್ತುಕೊಂಡು ನಷ್ಟಪಡಬೇಕಾಗುತ್ತದೆ. ಉದಾಹರಣೆಗೆ ನಮ್ಮ ಸರ್ಕಾರದ ಚೀಫ್ ಸೆಕ್ರೆಟರಿಯವರಿಗೆ ಈಗ 1,400 ರೂಪಾಯಿ ಸಂಬಳ ಕೊಟ್ಟು

ಕೆಲಸ ನಡೆಸಿಕೊಂಡು ಹೋಗುತ್ತಿರುವುದಕ್ಕೆ ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ ಬಂದರೆ 1,800 ರೂಪಾಯಿ ಕೊಡಬೇಕಾಗುತ್ತದೆ. ಇದು ಯಾವ ನ್ಯಾಯ? ಇಂಥಾ ಯೋಜನೆಗೆ ಒಪ್ಪಿಕೊಂಡು ಮೈಸೂರು ಸರ್ಕಾರದ ಖಜಾನೆಯಿಂದ ಇನ್ನೂ ಹೆಚ್ಚಿನ ಹಣ ಖರ್ಚು ಮಾಡುವುದೇ ನಿಮ್ಮ ಕೆಲಸವೇ ಎಂದು ನಾನು ಸರ್ಕಾರದವರನ್ನು ಕೇಳುತ್ತೇನೆ. ಏನೋ ಒಂದು ಹೆಸರು ಹೇಳಿ, ಇದರಿಂದ ಮೈಸೂರು ದೇಶದ ಹೆಸರು ದೊಡ್ಡದಾಗುತ್ತದೆಂದು ಹೇಳಿ, ನಮ್ಮ ಯುವಕರಿಗೆ ದೊಡ್ಡ ದೊಡ್ಡ ಕೆಲಸಗಳು ಸಿಕ್ಕುತ್ತವೆಂದು ಹೇಳಿ ಮೈಸೂರು ದೇಶದ ಖರ್ಚನ್ನು ಹೆಚ್ಚುಮಾಡುವುದು ನ್ಯಾಯವಲ್ಲ. ಈ ವಿಷಯದಲ್ಲಿ ಮಾತನಾಡಲು ವಿಧಿಯಿಲ್ಲದೆ ನಾನು ಹೆಚ್ಚು ಕಾಲವನ್ನು ತೆಗೆದುಕೊಳ್ಳಬೇಕಾಯಿತು. ನನ್ನ ಮಿತ್ರರನೇಕರು ಇದರಮೇಲೆ ಮಾತನಾಡುವವರಿದ್ದಾರೆ. ಮೈಸೂರು ದೇಶದ ಆಗುಹೋಗುಗಳಿಗೆ ಕಾರಣವಾಗಿರುವ ವಿಚಾರವಾದ್ದರಿಂದ ನಾನು ಇಷ್ಟುಕಾಲ ತೆಗೆದುಕೊಂಡು ಹೇಳಬೇಕಾಯಿತು. ಮೈಸೂರು ದೇಶದ ಆಡಳಿತ ವೈಶಿಷ್ಟ್ಯ, ಮೈಸೂರು ಅಧಿಕಾರ ವರ್ಗದವರ ಸ್ಥಾನಮಾನ, ಉಳಿಯಬೇಕಾದರೆ ಮೈಸೂರು ಸಿವಿಲ್ ಸರ್ವಿಸಿನ ಅಧಿಕಾರಿಗಳಲ್ಲಾರಿಗೂ ಧಕ್ಕೆ ಬಾರದೇಯಿರುವಹಾಗೆ ನೋಡಿಕೊಳ್ಳಬೇಕು.....

ಜನಾಬ್ ಜೆ. ಮಹಮದ್ ಇಮಾಂರವರು.—ಸಭಾನಾಯಕರಲ್ಲಿ ನಾನೊಂದು ವಿಚಾರವನ್ನು ಅರಿಕೆಮಾಡಿಕೊಳ್ಳಬೇಕಾಗಿದೆ .....

ಶ್ರೀ ಎ. ಭೀಮಪ್ಪನಾಯಕರು.—ಇನ್ನು ಎರಡು ನಿಮಿಷದಲ್ಲಿ ನಾನು ಮುಗಿಸಿಬಿಡುತ್ತೇನೆ.

ಸ್ಪೀನಿಂಗ್ ಮಾಡುತ್ತಾರೆಂದು ಹೇಳಿದೆ. ಹೀಗೆ ಮಾಡುವುದರಲ್ಲಿ ಕೆಳಗಡೆ ಇರುವ ಅಧಿಕಾರಿಗಳು ಮೇಲೆ ಹೋಗಿ ಮೇಲಿನವರು ಕೆಳಗಿನ ಸ್ಥಾನಗಳಿಗೆ ಬಂದರೆ ಅದರ ಪರಿಣಾಮ ಏನಾಗುತ್ತದೆ, ಸರ್ವಿಸ್ ಎಷ್ಟು demoralise ಆಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಈ ಎಲ್ಲ ದೃಷ್ಟಿಗಳಿಂದಲೂ ಈ ಯೋಜನೆಯನ್ನು ಚೆನ್ನಾಗಿ ಪರಿಶೀಲಿಸಬೇಕು. ಪರಿಶೀಲನೆ ಮಾಡಿದಮೇಲೆ ಈ ಸಭೆಯುಮುಂದಿಟ್ಟು ಅನುಮೋದನೆ ಪಡೆದು ಆಮೇಲೆ ಜಾರಿಗೆ ಕೊಡಬೇಕೆಂದು ನನ್ನ ಪ್ರಾರ್ಥನೆ.

Mr. DEPUTY SPEAKER.—Resolution moved—

"That this Assembly is of the opinion that the proposed Indian Administrative Service Scheme should not be introduced in Mysore without explaining the implications and obtaining prior approval of the Legislative Assembly".

ಜನಾಬ್. ಜೆ. ಮಹಮ್ಮದ್ ಇಮಾಂರವರು.—ಸಭಾನಾಯಕರಲ್ಲಿ ನನ್ನದೊಂದು ವಿನಂತಿ. ಈ ನಿರ್ಣಯ ಬಹಳ ಮುಖ್ಯವಾದುದು. ಇದನ್ನು ಕೂಲಂಕಷವಾಗಿ ಚರ್ಚೆಮಾಡಬೇಕೆಂಬ ಉದ್ದೇಶದಿಂದಲೇ ಇದಕ್ಕಿಂತ ಮೊದಲಿದ್ದ ನಮ್ಮ ನಿರ್ಣಯಗಳನ್ನು ನಾವು ವಾಪಸು ತೆಗೆದುಕೊಂಡೆವು. ಈಗಾಗಲೇ ಕಾಲ ಮುಗಿಯುತ್ತಾ ಬಂದಿದೆ ಇನ್ನು ಸ್ವಲ್ಪ ಕಾಲ ಮಾತ್ರ ಉಳಿದಿದೆ. ಈ ವಿಷಯದಲ್ಲಿ ಇನ್ನೂ ಅನೇಕ ಮಾನ್ಯ ಸದಸ್ಯರು ಮಾತನಾಡಬೇಕಾಗಿದೆ. ಈ ವಿಷಯವನ್ನು ಮೊನ್ನೆ ನಾನು ಶ್ರೀಮನ್ಮಹಾರಾಜರವರ ಭಾಷಣದ ವಿಚಾರ ಮಾತನಾಡುವಾಗಲೇ ಹೇಳಿದ್ದೆ; ಇದು ಮುಖ್ಯ ವಿಷಯವೆಂದು ಸೂಚಿಸಿದ್ದೆ. ಈಗಾಗಲೇ ಐದೂವರೆ ಗಂಟೆಯಾಗಿದೆ. ಆರು ಗಂಟೆಗೆ ನಾವು ಅಧ್ಯಕ್ಷರು ವಿರ್ಪಡಿಸಿರುವ ಸಂತೋಷ ಕೂಟಕ್ಕೆ ಹೋಗಬೇಕಾಗಿದೆಯಾದುದರಿಂದ ಈ ದಿನ ಆರು ಗಂಟೆಯಮೇಲೆ ಕುಳಿತುಕೊಳ್ಳುವ ಹಾಗಿಲ್ಲ. ಆದಕಾರಣ ಅಧಿವೇಶನವನ್ನು ಒಂದು ದಿನ ಹೆಚ್ಚಿಸಿ, ಮಂಗಳವಾರವೂ ಇಟ್ಟುಕೊಂಡರೆ ಈ ನಿರ್ಣಯದ ವಿಚಾರವನ್ನು ಎಲ್ಲರೂ ಕೂಲಂಕಷವಾಗಿ ವಿಮರ್ಶಿಸಿ ಚರ್ಚಿಸಲು ಅನುಕೂಲವಾಗುತ್ತದೆ. ನಮಗೆ ಇಂಡಿಯಾ ಸರ್ಕಾರದಮೇಲೆ ಬಹಳ ಸಿಟ್ಟುಬಂದಿದೆ.—ಪ್ರೇಮಕಲಹ. ಮಂಗಳವಾರ ಇಟ್ಟರೆ ಎಲ್ಲವನ್ನೂ ವಿಶದವಾಗಿ ಮಾತನಾಡಬಹುದು. ಅದು ಸಾಧ್ಯವಿಲ್ಲದಿದ್ದರೆ ಸೋಮವಾರ ಇದರ ಚರ್ಚೆಗೆ ಸ್ವಲ್ಪ ಕಾಲ ಕೊಡಬೇಕು. ಅಲ್ಲದೆ ಸೋಮವಾರ ಸಭೆ ಬೆಳಿಗ್ಗೆ ಸೇರಬೇಕೋ ಅಥವಾ ಮಧ್ಯಾಹ್ನ ಸೇರಬೇಕೋ ಎಂಬುದನ್ನೂ ಈಗಲೇ ತಿಳಿಸಿದರೆ ಉತ್ತಮ, ಸದಸ್ಯರಿಗೆ ಅನುಕೂಲ.

ಉಪಾಧ್ಯಕ್ಷರು.—ಸೋಮವಾರ ಸಭೆ ಬೆಳಿಗ್ಗೆ 8 ಘಂಟೆಯಿಂದ 12ರವರೆಗೆ ಸೇರುವುದರಿಂದ ಸರ್ಕಾರಿ ಮಸೂದೆಗಳು ಮುಂಚಿತವಾಗಿ ಮುಗಿದರೆ ಆಮೇಲೆ ಇದನ್ನೂ ಚರ್ಚಿಸಬಹುದು.

ಶ್ರೀ ಎಚ್. ಸಿ. ದಾಸಪ್ಪನವರು.—ಮಂಗಳವಾರವೂ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ವಿರೋಧ ಪಕ್ಷದ ನಾಯಕರು ಹೇಳಿದಂತೆ ಈ ನಿರ್ಣಯದಲ್ಲಿರುವ ವಿಚಾರ ಬಹಳ ಮುಖ್ಯವಾದುದೆಂಬ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ಈಗ ಎರಡು ಮಸೂದೆಗಳು ಮಾತ್ರ ಉಳಿದಿವೆ. ಅವುಗಳ ಚರ್ಚೆಯನ್ನು ನಾವು ಬೇಗ ಮುಗಿಸುವುದಾದರೆ, ಸೋಮವಾರ ಈ ನಿರ್ಣಯವನ್ನು ತೆಗೆದುಕೊಂಡು ಚರ್ಚೆಮಾಡಬಹುದು, ನಮ್ಮ ಅಭ್ಯಂತರವಿಲ್ಲ. ಎಂಟು ಘಂಟೆಯಿಂದ 9ರವರೆಗೆ ಪ್ರಶ್ನೋತ್ತರಗಳು, 9ರಿಂದ 10 ಘಂಟೆಯವರೆಗೆ ಮಸೂದೆಗಳನ್ನು ಚರ್ಚಿಸಿ ಮುಗಿಸಿದರೆ ಆಮೇಲೆ ಈ ನಿರ್ಣಯವನ್ನು ತೆಗೆದುಕೊಳ್ಳಬಹುದು. ಅವಶ್ಯಕವಾದರೆ ಆ ದಿನ ಒಂದು ಘಂಟೆಯವರೆಗಾದರೂ ಕುಳಿತುಕೊಳ್ಳಬಹುದು.

ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ).—ಸ್ವಾಮಿ, ಈ ಠರಾವಿನ ವಿಚಾರದಲ್ಲಿ ಮಾತನಾಡುತ್ತಿರುವುದು ಇದೇ ಮೊದಲನೆಯ ಸಲವಲ್ಲ. ಅನೇಕ ಸದಸ್ಯರಿಂದ ಇದೇ ವಿಚಾರದಲ್ಲಿ ಪ್ರಶ್ನೆಗಳು ಬಂದಿವೆ. ಶ್ರೀಮನ್ಮಹಾರಾಜರವರ ಭಾಷಣದಮೇಲೆ ಮಾತನಾಡುವಾಗಲೂ ಕೂಡ ನಾನೂ ಈ ವಿಚಾರದಲ್ಲಿ ಹೆಚ್ಚಾಗಿ ಮಾತನಾಡಿದ್ದೇನೆ, ಅನೇಕ ಇತರ ಸದಸ್ಯರೂ ಮಾತನಾಡಿದ್ದಾರೆ. ಈಗ ನಾನು ಮಾತನಾಡಬೇಕಾದುದು ಹೆಚ್ಚೇನೂ ಇಲ್ಲ. ಇದರಲ್ಲಿ ಬಹಳ ಮುಖ್ಯ ವಿಚಾರಗಳನ್ನೂ ಹೊಸ ವಿಚಾರಗಳನ್ನೂ ಚೆನ್ನಾಗಿ ಆಲೋಚನೆ ಮಾಡಬೇಕಾಗಿದೆ. ಮುಖ್ಯವಾಗಿ ಇಂತಹ ಮುಖ್ಯ ವಿಚಾರಗಳಲ್ಲಿ ಇಂಡಿಯಾ ಸರ್ಕಾರದವರೊಡನೆ ಮಾತುಕತೆ ನಡೆಸುವಾಗ ನಮ್ಮ ಸರ್ಕಾರದವರೇ ಯಾವ ರೀತಿನೀತಿಗಳನ್ನನುಸರಿಸಬೇಕಾಗಿತ್ತು ಎಂಬುದನ್ನು ಸ್ವಲ್ಪ ಆಲೋಚನೆಮಾಡಬೇಕಾಗಿದೆ. ಇಂತಹ ಪ್ರಶ್ನೆಗಳು ಮುಖ್ಯ ತತ್ವಗಳನ್ನೊಳಗೊಂಡಿರುತ್ತವೆ. ನಮ್ಮಲ್ಲಿ ಅನೇಕ ಅನುಭವಸ್ಥರೂ ಬುದ್ಧಿವಂತರೂ ಇದ್ದಾರೆ. ಇಂಥ ಪ್ರಶ್ನೆಗಳು ಬಂದಾಗ ನಿಧಾನವಾಗಿ ಕೂಲಂಕಷವಾಗಿ ಯೋಚನೆ ಮಾಡುವುದು ನಮ್ಮ ಕರ್ತವ್ಯ. ಇದರಿಂದ ನಮ್ಮ ಮೈಸೂರು ದೇಶಕ್ಕೆ ಎಷ್ಟು ಮಟ್ಟಿಗೆ ಅನುಕೂಲವಾಗುತ್ತದೆ, ಇಂಡಿಯಾ ಸರ್ಕಾರಕ್ಕೆ ಎಷ್ಟು ಅನುಕೂಲ ಎಂಬುದನ್ನೆಲ್ಲಾ ನಾವು ಕುಳಿತು ಆಲೋಚನೆ ಮಾಡಿದರೆ ಅನುಕೂಲ.

ಒಂದುವೇಳೆ ಅಂಥ ಒಪ್ಪಬೇಕಾದ ಸಂದರ್ಭ ಬಂದರೆ ಆ ಕಾಲದಲ್ಲಿ ಹಣಕಾಸಿನ ತೊಂದರೆ ಆಗು

ತ್ತದೆಯೇ ಇಲ್ಲವೇ ಎಂಬ ಪ್ರಶ್ನೆಯನ್ನು ಆಲೋಚನೆ ಮಾಡಬೇಕಾಗುತ್ತದೆ. ಮೊದಲಿನಿಂದಲೂ ಸೇವೆ ಸಲ್ಲಿಸಿ ನಿಮ್ಮನ್ನೇ ನಂಬಿರತಕ್ಕವರ ವಿಚಾರದಲ್ಲಿ ಈ ತರಹ ಒಂದು ಒಪ್ಪಂದವನ್ನು ಮಾಡಿಕೊಂಡರೆ ಇದರ ಪರಿಣಾವವೇನು ಅನುಕೂಲವೇ, ಅನಾನುಕೂಲವೇ repercussions ಏನು ಎಂಬ ದೃಷ್ಟಿಯಿಂದ ಇದನ್ನು ನೋಡಿ, ಯಾರಿಗೆ ತೊಂದರೆಯಾಗಬಹುದು, ಯಾರಿಗೆ ಅನುಕೂಲವಾಗಬಹುದು ಎಂಬುದನ್ನು ತಿಳಿದುಕೊಳ್ಳಲು ಅವರನ್ನು ಒಂದೆರಡು ಮಾತು ಕೇಳಿದ್ದರೆ ಬಹಳ ಸಂತೋಷವಾಗುತ್ತಿತ್ತು. ಸರ್ಕಾರದವರು ಕೂಡ ಈಗ ಸಿಕ್ಕಿ ಹಾಕಿಕೊಂಡಿರುವ ಬಿಕ್ಕಟ್ಟಿನಲ್ಲಿ ಸಿಕ್ಕಿಕೊಳ್ಳುತ್ತಾ ಇರಲಿಲ್ಲ. ಏಕೆಂದರೆ ಷೂ ಯಾರು ಹಾಕಿಕೊಳ್ಳುತ್ತಾರೋ ಅವರಿಗೆ ಅದು ಎಲ್ಲಿ ಕಚ್ಚುತ್ತದೆ ಎಂಬುದು ಗೊತ್ತಾಗುತ್ತದೆಯೇ ಹೊರತು ಬೇರೆಯವರಿಗೆ ಗೊತ್ತಾಗುವುದಿಲ್ಲ. ನಿಮಗೆ ಬೇಕಾದಷ್ಟು ಅನುಭವ ಇರಬಹುದು. ಆದರೆ ಕಷ್ಟಪಡುವವರು ಅವರು. ಅವರನ್ನು ಒಂದು ಮಾತು ಕೇಳುವುದು ನಿಮ್ಮ ಮೊದಲನೆಯ ಕರ್ತವ್ಯ. ಇದರಲ್ಲಿ ಹೆಚ್ಚು ಬುದ್ಧಿ ಉಪಯೋಗಿಸಬೇಕಾದ ವಿಷಯವೇನೂ ಇಲ್ಲ. ಯಾವ ಯಾವ ಅಂಕಿಗಳನ್ನು ಪರಿಶೀಲನೆ ಮಾಡಬೇಕೆಂದು ಒಂದು ವಿಷಯ. ಎರಡನೆಯದು, ಇದರ ಪರಿಣಾಮ ಯಾರ ಮೇಲೆ ಉಂಟಾಗುತ್ತದೆ, ಯಾರ ಮನಸ್ಸು ನೋಯುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗಿತ್ತು. ಅದನ್ನು ಮಾಡಿಲ್ಲ. ಮೂರನೆಯದು, ಪ್ರಾಯಶಃ ನನಗೆ ಅನ್ನಿಸುತ್ತದೆ: ನಾಳೆ ನೀವು ಇತರ ಗ್ರೇಡಿಗೆ ಒಪ್ಪಿಕೊಳ್ಳುವುದಾದರೆ ಅಲ್ಲಿಂದ ಆಫೀಸರುಗಳು ಇಲ್ಲಿಗೆ ಬರುತ್ತಾರೆ. ಆಗ ಒಂದೇ ಗ್ರೇಡಿನ ಆಫೀಸರುಗಳು ಆಲ್ಲೂ ಇಲ್ಲೂ ಇರಬೇಕಾಗುತ್ತದೆ. ಹೀಗಿರುವಾಗ ಜೂರಿಸ್‌ಡಿಕ್ಷ್ಟ್ ವಿಚಾರ ನೀವು ಯೋಚನೆ ಮಾಡಿದ್ದೀರಾ ಎಂದು ಕೇಳುತ್ತೇನೆ. ಮದರಾಸು, ಬೊಂಬಾಯಿ ಪ್ರಾಂತ್ಯಗಳಲ್ಲಿ ದೊಡ್ಡ ದೊಡ್ಡ ಡಿಸ್ಟ್ರಿಕ್ಟ್‌ಗಳಿವೆ. ಮೈಸೂರಿನಲ್ಲಿ ಆಷ್ಟು ದೊಡ್ಡ ಡಿಸ್ಟ್ರಿಕ್ಟ್‌ಗಳಿಲ್ಲ. ಹೀಗಿರುವಾಗ ಅಲ್ಲಿಂದ ಬರುವ ಆಫೀಸರುಗಳಿಗೆ ಇಷ್ಟು ಚಿಕ್ಕ ಡಿಸ್ಟ್ರಿಕ್ಟ್‌ಗಳನ್ನೇಕೆ ಕೊಡಬೇಕು, realignment ಮಾಡಿ ಎಂದು ಹೇಳಿದರೆ ಏನು ಹೇಳುತ್ತಾರೋ ಗೊತ್ತಿಲ್ಲ. ಸೀನಿಯರ್ ಆಫೀಸರುಗಳು ಇಲ್ಲಿಗೆ ಬಂದರೆ ಇಂಥ ಚಿಕ್ಕ ಜ್ಯೂರಿಸ್‌ಡಿಕ್ಷ್ಟ್‌ಗೆ ಕಚ್ಚು ಸಂಬಳ ಕೊಡುವುದಕ್ಕೆ ಒಪ್ಪುತ್ತೀರಾ? ಇದನ್ನೆಲ್ಲಾ ಯೋಚನೆ ಮಾಡಿ. ನಮ್ಮಲ್ಲಿ Re-distribution of Districts ವಿಷಯ ಬೇರೆ ಇದೆ. ಮುಖ್ಯ ಮಂತ್ರಿಗಳು ಪ್ರಶ್ನೋತ್ತರಗಳ ಕಾಲದಲ್ಲಿ ಇದರ ತತ್ವ ಒಪ್ಪಿಕೊಂಡಿದ್ದೇವೆ ಎಂದು ಹೇಳಿದರು. ಈಗ ಈ ನಿರ್ಣಯವನ್ನು ಒಪ್ಪಿಕೊಳ್ಳಿ ಎಂದು ಹೇಳುತ್ತಿದೀರಿ. ಇದನ್ನು ಅಂಗೀಕಾರ ಮಾಡಿದರೆ ಇದರ ಪರಿಣಾಮ ಏನು ಎಂಬುದನ್ನು ಯೋಚನೆ ಮಾಡಬೇಕು. ಸರ್ಕಾರದವರು ತತ್ವ ಒಪ್ಪಿಕೊಂಡಿದ್ದಾರೆ. ಈ ಠರಾವಿನಂತೆ ಈ ಸಭೆಯ ಒಪ್ಪಿಗೆ ಪಡೆಯದೆ ಇದನ್ನು ಜಾರಿಗೆ ತರಕೂಡದೆಂದು ಇದರಲ್ಲಿ ಇದೆ. ಇದರಿಂದ ಸನ್ನಿವೇಶ ಎಷ್ಟು ಬಿಕ್ಕಟ್ಟಿಗೆ ಬರುತ್ತದೆ ಎಂಬುದನ್ನು ಹೇಳಬೇಕಾಗಿಲ್ಲ.

Sri H. C. DASAPPA.—Let there be no statement like this. Even the resolution does not say so.

Sri H. B. GUNDAPPA GOWDA.—The resolution is:—

"This Assembly is of the opinion that the proposed Indian Administrative Service Scheme should not be introduced in Mysore without explaining the implications and obtaining prior approval of the Legislative Assembly."

Where is the question of prior approval?

Sri H. C. DASAPPA.—Introduction of the scheme is actual implementation of the scheme.

Sri H. B. GUNDAPPA GOWDA.—No, it is different. When once you accept the principle, they will sit tight.

Sri H. C. DASAPPA.—Even the Hon'ble Mover of the resolution has not said that we should simply turn it down. He has never said that.

Sri H. B. GUNDAPPA GOWDA.—So far as I understand the wording of the resolution, I attach more importance to the words 'obtaining prior approval of the Assembly.'

Sri H. C. DASAPPA.—We shall obtain approval if necessary.

Sri G. A. ACHARYA (Bangalore District—General).—It is part of integration.

Sri H. B. GUNDAPPA GOWDA.—It is not part of integration unless you agree.

Sri M. GOVINDA REDDY (Chitaldrug District—General).—The resolution does not say that the scheme should not be accepted. All that it says is that implications should be explained to the House and without proper consent of the House, Government should not accept the scheme.

Sri H. B. GUNDAPPA GOWDA.—Where is the question of prior consent?

Sri M. GOVINDA REDDY.—*Thathwa* is different from details of the scheme.

Sri H. B. GUNDAPPA GOWDA.—I know something about these matters. When once you agree to some of these things, it is difficult to retrace. It has been made quite clear in the answers to interpellations.

Sri M. GOVINDA REDDY.—They are entirely two different things.

Sri H. B. GUNDAPPA GOWDA.—Well, I disagree so far as that is concerned.

Sri H. C. DASAPPA.—You may say what you feel about it. But please do not try to put anything into the mouth of Sri Bheemappa Naik.

Sri H. B. GUNDAPPA GOWDA.—I am not going to put anything into the

mouth of Sri Bheemappa Naik. I am going to read something into his writing. ಇದರಲ್ಲಿ ಇನ್ನೊಂದು ವಿಷಯ ಇದೆ. ಸಾಧಾರಣವಾಗಿ ತಾವೇ ಆಲೋಚನೆಮಾಡಿ ಮೈಸೂರು ಸಂಸ್ಥಾನ ಎಂದರೆ ಹೆಸರುವಾಸಿಯಾಗಿದೆ, ಕೀರ್ತಿ ಇದೆ. ಇಂಡಿಯದ ಅಡ್ಮಿನಿಸ್ಟ್ರೇಟೀವ್ ಸರ್ವಿಸ್‌ನೊಡನೆ ನಮ್ಮ ಸಂಸ್ಥಾನದ ಸರ್ವೀಸನ್ನು ಒಂದುಗೂಡಿಸಿದರೆ ಜನರ ಭಾವನೆ ಈಗ ಹೇಗಿದೆ ಎಂಬುದನ್ನು ಊಹಿಸಬಹುದು. ಅನೇಕರು ಮೈಸೂರಿಗೆ ಬರುವುದಕ್ಕೆ ಕಾತುರರಾಗಿರುತ್ತಾರೆ. ಅವರನ್ನು ನೀವು ತೆಗೆದುಕೊಳ್ಳುವುದಿಲ್ಲ ಎಂದು ಹೇಳುವುದಕ್ಕೆ ನಿಮಗೆ ಅಧಿಕಾರವಿಲ್ಲ. ಕೇಂದ್ರದಿಂದ ಡೈರೆಕ್ಷನ್ ತೆಗೆದುಕೊಳ್ಳಬೇಕಾಗುತ್ತದೆ. ಆ ವಿಷಯದಲ್ಲಿ ನಿಮ್ಮ choice ಇರುತ್ತದೆಂದು ಖಂಡಿತವಾಗಿ ಹೇಳುವುದಕ್ಕಾಗುವುದಿಲ್ಲ. They can pass any order like that. But you cannot pass similar orders in the case of a transfer. ನೀವು ಇದನ್ನು ಸ್ವಲ್ಪ ಆಲೋಚನೆ ಮಾಡಬೇಕು. ನಮ್ಮ ಆಫೀಸರುಗಳ ಪ್ರಾಸ್ಪೆಕ್ಟ್ಸ್ ಏನು? ಅಲ್ಲಿಗೆ ಸೇರುವುದರಿಂದ 1,800 ರೂಪಾಯಿಗಳವರೆಗೂ ಹೋಗಬಹುದು ಎಂದರೆ 400 ರೂಪಾಯಿ ಜಾಸ್ತಿ ಆದಹಾಗಾಯಿತು. 400 ರೂಪಾಯಿನ ಆಸೆಗೋಸ್ಕರ ಸೀನಿಯರ್ ಆಫೀಸರುಗಳು ಎಷ್ಟು ಜನ ಮೈಸೂರು ದೇಶ ಬಿಟ್ಟು ಹೊರಗೆ ಹೋಗುವುದಕ್ಕೆ ಸಿದ್ಧರಾಗಿದ್ದಾರೆ ಎಂಬುದನ್ನು ವಿಚಾರ ಮಾಡಿ. ಈಗ ತಮಗೆ ಗೊತ್ತಾಗುತ್ತದೆ.

ಶ್ರೀ ಜಿ. ಎ. ಆಚಾರ್ಯರು.—ಈಗ ಹೊರಗೆ ಹೋಗಿರುವವರ ಸಂಖ್ಯೆ ಗೊತ್ತಿಲ್ಲವೇ?

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ನಿಮಗೆ ಗೊತ್ತಿಲ್ಲ. It is a government of novices. What are we to do? ನಿಮಗೆ ಎಲ್ಲಾ ಹೊಸದೇ ಆಗಿದೆ. ಕಷ್ಟಪಟ್ಟು ತಿಳಿದುಕೊಳ್ಳಿ. ನೀವು ಗುಟ್ಟಾಗಿ ಆಫೀಸರುಗಳನ್ನು ಕೇಳಿ. ಎಷ್ಟು ಜನ 400 ರೂಪಾಯಿನ ಆಸೆಗೆ ಹೊರಗಡೆ ಹೋಗಲು ಸಿದ್ಧವಾಗಿದ್ದಾರೆ ಎಂದರೆ not even one per cent is prepared to go out of Mysore State. ನಾನು ಇದನ್ನು ಖಚಿತವಾಗಿ ಹೇಳುತ್ತೇನೆ. ಇದನ್ನು ಸ್ವಲ್ಪ ದೃಷ್ಟಿಗೆ ತೆಗೆದುಕೊಳ್ಳಬೇಕು.

ಇದು ಸ್ವಾಭಾವಿಕವಾಗಿದೆ. ನಾವು ಅವರಲ್ಲೇನೂ ತಪ್ಪು ಕಂಡುಹಿಡಿದಿಲ್ಲ. ಹವಾ ಇಲ್ಲಿ ಚೆನ್ನಾಗಿದೆ. ಭೂಕಂಪ ಮುಂತಾದ್ದೇನೂ ಇಲ್ಲ. ಸುಖವಾಗಿರಬಹುದು. ಇಂಥಾ ವಿಷಯಗಳಲ್ಲಿ ನಾವು ಬರೀ ಹಣದ ದೃಷ್ಟಿಯೊಂದನ್ನೇ ಇಟ್ಟುಕೊಳ್ಳಕೂಡದು. ನಮ್ಮ ಆಫೀಸರುಗಳಿಗೆ ಸಾಕಾದಷ್ಟು ಅನುಕೂಲತೆಗಳು ಸುಲಭವಾಗಿ ಸಿಕ್ಕುವಂತಿರಬೇಕು. ಆರೋಗ್ಯವಾಗಿರುವ ಜಾಗ ಬೇಕು. ಆನಂದದಾಯಕವಾದ ವಾತಾವರಣ ಎರಬೇಕು. ಇದನ್ನೆಲ್ಲಾ ಗಣನೆಗೆ ತೆಗೆದುಕೊಂಡರೆ ನಮ್ಮ ಆಫೀಸರುಗಳಲ್ಲಿ ಅನೇಕರು ಕೇಂದ್ರಕ್ಕೆ ಹೋಗುವುದಕ್ಕಿಷ್ಟಪಡುವುದಿಲ್ಲ. ಇದೊಂದು ಮುಖ್ಯ ವಿಷಯ. ಆದ್ದರಿಂದ ಏನಿದ್ದರೂ ನಾಳೆ ದಿವಸ ಹೊರಗಿನವರನ್ನು ಇಲ್ಲಿಗೆ ಬರಗೊಡುವುದಕ್ಕೆ ಅವಕಾಶವಾಗುತ್ತದೆಯೇ ಹೊರತು ಮತ್ತೇನೂ ಇಲ್ಲ.

ಈಗ ನಮಗೆ ಕೊಟ್ಟಿರುವ ಪ್ರಶ್ನೋತ್ತರಗಳಲ್ಲಿ ಪರಿಶಿಷ್ಟದಲ್ಲಿ ಹೇಳಿದ್ದಾರೆ. ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ ಯೋಜನೆಗೆ ಒಪ್ಪಿಕೊಳ್ಳುವುದಕ್ಕೆ ಕಾರಣ, ನಮ್ಮ ಸಂಸ್ಥಾನದ ಅಧಿಕಾರ ವರ್ಗದವರ ದಕ್ಷತೆಯನ್ನು ಉತ್ತಮಪಡಿಸಲು ಅನುಕೂಲವಾಗುತ್ತದೆ ಎಂದು. 'ದಕ್ಷತೆಯನ್ನು ಉತ್ತಮಪಡಿಸಲು' ಎಂದು ಹೇಳಿದರೆ ನಮಗೆ ದಕ್ಷತೆ ಸಾಕಾದಷ್ಟಿಲ್ಲವೆಂದೇ? ಯಾರಿಗೆ ದಕ್ಷತೆಯಿಲ್ಲವೋ ಅವರಿಗೆ ಬೇಕಾದರೆ ಉತ್ತಮಪಡಿಸಲಿ. 1944ನೆಯ ಇಸವಿಯವರೆಗೂ ಅಧಿಕಾರದಲ್ಲಿದ್ದು ನಮ್ಮ ಅಧಿಕಾರ ವರ್ಗಗಳ ವಿಷಯದಲ್ಲಿ ನನಗೆ ತಕ್ಕಮಟ್ಟಿಗೆ ಅನುಭವವಿದೆ. ಅಲ್ಲಿಂದೀಚೆಗೇನೋ ತಿಳಿಯದು. ಆಗಿನ ಕಾಲದಲ್ಲಿ ಬ್ರಿಟಿಷರ ಅಳ್ವಿಕೆಯಲ್ಲಿಯೂ ಅಲ್ಲಿನ ದಕ್ಷತೆಯೆಷ್ಟರಮಟ್ಟಿಗಿದೆಯೆಂಬುದನ್ನೂ ನೋಡಿದ್ದೇನೆ. ಇಷ್ಟು ಮಾತ್ರವಾದರೂ ನಾನು ಖಂಡಿತ ಹೇಳಬಲ್ಲೆ. ನಮ್ಮ ಸೆಕ್ರಟೇರಿಯಟ್ಟು ಬ್ರಿಟಿಷ್ ಮಾದರಿಯಲ್ಲಿಯೇ ಇದ್ದು, ಯೋಗ್ಯತೆಯ ವಿಷಯದಲ್ಲಿ ಖಂಡಿತವಾಗಿಯೂ ಅದರ ಸರಿಸಮಕ್ಕಾದರೂ ಇದ್ದೇಇದೆ. ಈಗ ಇಂಡಿಯಾ ಸರ್ಕಾರದಲ್ಲಿ ಅಧಿಕಾರಿಗಳ ದಕ್ಷತೆಯನ್ನು ಪರಿಗಣಿಸುವುದಾದರೆ, ಅನೇಕ ಕಾರಣಗಳ ದೆಸೆಯಿಂದ ಎಷ್ಟೇ ಹೇಳಿದರೂ ಮೊದಲನಷ್ಟಿಲ್ಲವೆಂದು ಹೇಳಬಹುದು. ಆದಕಾರಣ ನಮ್ಮವರು ಅವರೊಡನೆ ಸೇರುವುದರಿಂದ ನಮ್ಮ ಅಧಿಕಾರಿಗಳಲ್ಲಿ ದಕ್ಷತೆ ಉತ್ತಮಗೊಳ್ಳುತ್ತದೆಂದು ಯಾವ ದೃಷ್ಟಿಯಿಂದಲೂ ಒಪ್ಪುವುದಕ್ಕಾಗುವುದಿಲ್ಲ. ಆದರೆ ಈಗ ನಮ್ಮಲ್ಲಿ ಏನಾಗಿದೆಯೆಂದರೆ, ದುರದೃಷ್ಟವಶಾತ್ ರಾಜ್ಯಾಂಗಶಾಸನದಲ್ಲಿ ನಮ್ಮನ್ನು ಯಾವುದೋ ಹಳ್ಳೀ ಕಂದಾಚಾರದ ಪ್ರಾಂತ್ಯಗಳ ಜೊತೆಗೆ ಸೇರಿಸಿಬಿಟ್ಟಿದ್ದಾರೆ. ಮಧ್ಯಭಾರತ, ಸೌರಾಷ್ಟ್ರ, ರಾಜಾಸ್ಥಾನ, ಹೈದರಾಬಾದು ಇಂಥವುಗಳ ಮಧ್ಯೆ ನಾವೂ ಸೇರಿಬಿಟ್ಟಿದ್ದೇವೆ. ಅವರುಗಳ ಜೊತೆಯಲ್ಲಿ ನಮ್ಮನ್ನೆಲ್ಲಿ ಸೇರಿಸುತ್ತೀರೆಂದು ಯಾರೂ ಕೇಳಲೇ ಇಲ್ಲ. ಇವು ಯಾವುವುಗಳಲ್ಲಿ ತಾನೆ ಸರಿಯಾದ ಸುದೃಢವಾದ ರಾಜ್ಯಾಡಳಿತ, ಶಾಸನ ಸಭೆಗಳಿತ್ತು? ತಿರುವಾಂಕೂರು ಕೊಚ್ಚಿನ್‌ಗಳಲ್ಲಿ ಕೂಡ ಎಷ್ಟೋ ದಿವಸಗಳಾದ ಮೇಲೆ ಸಿವಿಲ್ ಸರ್ವಿಸ್ ಎಂಬುದು ಬಂದಿರುವುದು. ಆದರೆ ಮೈಸೂರು ಸಂಸ್ಥಾನವೊಂದರಲ್ಲೇ ಇಡೀ ದಕ್ಷಿಣ ಇಂಡಿಯಾದಲ್ಲಿ ಮೊದಲಿನಿಂದಲೂ ಸಿವಿಲ್ ಸರ್ವಿಸ್ ಎಂಬುದು ಇರುವುದಲ್ಲದೆ ಇತರ ಕಡೆಗಳಿಗೆ ಮಾದರಿಯಾಗಿದೆ. ಆದ್ದರಿಂದ ದಕ್ಷತೆಯನ್ನು ಉತ್ತಮಪಡಿಸುತ್ತೇವೆನ್ನುವುದು ಹೋಗಿ ಅದಕ್ಕೆ ಬದಲು ಈಗಿನ ಪರಿಸ್ಥಿತಿಯಲ್ಲಿ ನಮ್ಮ ಅಧಿಕಾರಿಗಳ ದಕ್ಷತೆ ಕಡಿಮೆಯಾಗುತ್ತದೆಂತಲೇ ಹೇಳಬೇಕು. I am not prepared to concede an inch in that way. On the other hand our services may deteriorate on account of the present circumstances. ಆದ್ದರಿಂದ ಯಾವ ದೃಷ್ಟಿಯಿಂದ ನೋಡಿದರೂ ನಮಗಿದರಿಂದ ಅನುಕೂಲವಾವುದೂ ಕಾಣಬರುವುದಿಲ್ಲ. ಒಂದುವೇಳೆ ನಮ್ಮ 'ಅದಬ್'; ದರ್ಜೆ ಏನಾದರೂ ಜಾಸ್ತಿಯಾಯಿತೇ? ಅದಕ್ಕೂ ಧಕ್ಕೆ ಬಂದಿದೆ. ಇತರರ ಜೊತೆಗೆ ಸೇರಿಸಿ ನಾವೂ ಚಿಕ್ಕದಾಗಿ ಕಾಣುತ್ತೇವೆ ದೊಡ್ಡ ಕೂಡ ನಮಗೇನೂ ಉಳಿಯುವುದಿಲ್ಲ. ನಮ್ಮ ಒಳಾಡಳಿತಕ್ಕೆ ಬೇರೆ ಖರ್ಚು ಮಾಡಲೇಬೇಕಾಗುತ್ತದೆ.

ಇನ್ನೊಂದು ಅಂಶ. ನಾವಿಲ್ಲಿ ಮೊದಲು ನಮ್ಮ ಅಧಿಕಾರಿಗಳನ್ನು ನೇಮಿಸಿಕೊಳ್ಳುವಾಗ ಅವರೇನೋ ತಾವು ಸುಖವಾಗಿ ನಮ್ಮ ದೇಶದಲ್ಲೇ ಇರಬಹುದೆಂದು ನಮ್ಮ ಮಾತನ್ನು ನಂಬಿ ಸೇರಿರುತ್ತಾರೆ. ಅಂಥವರನ್ನು ಇಂದು ಹೊರಗೆ ಹೋಗಬೇಕೆಂದರೆ ಅವರು ಸಂತೋಷದಿಂದಲಾದರೂ ಹೋಗುತ್ತಾರೆಯೇ? ಸಿವಿಲ್ ಸರ್ವಿಸ್ ರೆಗ್ಯುಲೇಷನ್ ಪ್ರಕಾರ ಅವರಿಗೆ ಇಲ್ಲಿ ಸರ್ವಿಸ್ಸಿನಲ್ಲಟ್ಟು ಕೊಂಡಿರುವುದಕ್ಕೆ ಭರವಸೆಕೊಟ್ಟು ಸೇರಿಸಿಕೊಂಡಿರಿ. ಇಲ್ಲಿರಲು ಅವರಿಗೆ ಹಕ್ಕಿದೆ. ಅಂಥವರನ್ನೀಗ ದತ್ತು ಕೊಟ್ಟಿಟ್ಟಿದ್ದೇವೆಂದರೆ ಅವರಿಗೆ ಉತ್ತರ ಹೇಳುವುದಕ್ಕೂ

ದಾರಿಯೇ ಇಲ್ಲ. ಹೀಗೆ ಕಳುಹಿಸುವುದರಲ್ಲಿ ಅವರ ಮನೋಭಿಪ್ರಾಯವೇನೆಂಬುದನ್ನಾದರೂ ಕೇಳುವಿರಾ? ಅಲ್ಲದೆ ದೊಡ್ಡ ದೊಡ್ಡ ಸ್ಥಾನಗಳನ್ನೆಲ್ಲಾ ಹೊರಗಿನವರಿಗೆ ಕೊಟ್ಟುಬಿಟ್ಟರೆ ನಮ್ಮಲ್ಲಿರುವ ಕೆಳಗಿನ ಆಫೀಸರುಗಳ ಗತಿಯೇನು? ಅವರಲ್ಲಿ ಅತೃಪ್ತಿ ನಿರುತ್ಸಾಹ ಉಂಟಾದರೆ ನಮ್ಮಲ್ಲಿ ದಕ್ಷತೆ ಉಳಿಯುತ್ತದೆಯೇ? ಹಿಂದೆ ಅಸಿಸ್ಟೆಂಟ್ ಕಮಿಷನರ್ ಆಗಿರುವವರು ರೆವೆನ್ಯೂ ಕಮಿಷನರ್ ಕೂಡ ಆಗುವ ಖಾತರಿ ಇತ್ತು. ಈಗ you are dividing that. To that extent your administration is sure to suffer Not from any other point of view but from merely administrative point of view I am looking at it. ಆದ್ದರಿಂದ ಆಡಳಿತದ ದೃಷ್ಟಿಯಿಂದ ನೋಡಿದರೆ, ಇದರಲ್ಲೇನೂ ತಮಗೆ ಅನುಕೂಲ ಕಾಣಬರುವುದಿಲ್ಲ. ಕೊನೆಗೇನು ನಿಮಗೆ ಇದರಲ್ಲಿ ಜಯವಾಗುತ್ತದೆಂದು ನಾನು ಹೇಳಲಾರೆ. ಈಗೆಲ್ಲಾ ಇನ್ನು ನಿಮಗೆ ಉಳಿದಿರುವುದೇನು! ನೀತಿಯನ್ನು ಒಪ್ಪಿಕೊಂಡು ಬಿಟ್ಟ ಮೇಲೆ, ನಿಜವಾಗಿಯೂ ಅದನ್ನು ಬಿಟ್ಟು ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವೇ? ಖಂಡಿತ ಸಾಧ್ಯವಿರಲಾರದು. ಬೇಕಾದರೆ ಒಂದು ಹೇಳಬಹುದು. 'ನಿಮ್ಮ ತತ್ವವನ್ನೇನೋ ಒಪ್ಪಿಕೊಳ್ಳುತ್ತೇವೆ; ಆದರೆ ಅದು ನಮ್ಮ ಮೇಲೆ mandatory ಆಗಕೂಡದು' ಎಂದು ಹೇಳಿ ಸ್ವಲ್ಪ ನಿಧಾನ ಮಾಡಿಬಿಡಿ. ಸಂಸ್ಥಾನದಲ್ಲಿ ಬಹಳ ಮಟ್ಟಿನ ವಿರೋಧವಿದೆಯೆಂದು ಹೇಳಿ ಮೊದಲು ಸ್ವಲ್ಪ ಮಟ್ಟಿಗೆ ತಪ್ಪಿಸಿಕೊಂಡರೆ ಆಮೇಲೆ ನೋಡಿಕೊಳ್ಳೋಣ. ಈಗ ಹೈದರಾಬಾದು, ತಿರುವಾಂಕೂರು ಮುಂತಾದ ಪ್ರಾಂತ್ಯಗಳವರೂ ಇದಕ್ಕೆ ಈಗಾಗಲೆ ಒಪ್ಪಿಕೊಂಡಿದ್ದಾರೆಯೇ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎಚ್. ಸಿ. ದಾಸಪ್ಪನವರು.—ಒಪ್ಪಿಕೊಂಡಿದ್ದಾರೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಅಂದಮೇಲೆ ಮತ್ತೂ ಇಕ್ಕಟ್ಟಿಗೇ ಬಂತು.

But it is not obligatory or mandatory. Please make out a case like that. There is lot of opposition in the country.

Sri M. GOVINDA REDDY.—They cannot enforce it under the Constitution.

Sri H. C. DASAPPA.—About 300 officers in Hyderabad are being screened.

Sri H. B. GUNDAPPA GOWDA.—I do not like that word "screened."

ಆದರೂ ಹೈದರಾಬಾದಿನ ವಿಚಾರವೇ ಬೇರೆ. ಸದ್ಯ ಆ ಜಾಗ ಬಿಟ್ಟು ಹೋದರೆ ಸಾಕೆಂದು ಹೇಳುವ ಆಫೀಸರುಗಳು ಅನೇಕ ಜನ ಇದ್ದಾರೆ. ಇಲ್ಲಿನ tradition, ಇಲ್ಲಿನ ಪರಿಸ್ಥಿತಿ ಮುಂತಾದವಕ್ಕೂ ಅಲ್ಲಿಗೂ ಬಹಳ ವ್ಯತ್ಯಾಸವಿದೆ.

Sri H. C. DASAPPA.—It is recognised even by the Centre. Let me tell you.

Sri H. B. GUNDAPPA GOWDA.—What is the use of that? You get the recognition. You have failed in your duty towards the services till you get that exemption from them.

ನೀವು ಖಂಡಿತ ಅವರಿಗೆ ನಿಮ್ಮ ಅಧಿಕಾರಗಳ ವಿಷಯವನ್ನು ವಿವರವಾಗಿ ಹೇಳಬಹುದು. ಮೊನ್ನೆ ಒಂದಾನೊಂದು ಸಂದರ್ಭದಲ್ಲಿ ಇದೇ ಅವರ ಅಧಿಕಾರಿಗಳ ವಿಷಯದಲ್ಲಿ ಸರ್ದಾರ್ ಪಟೇಲರವರು ಎಂಥ strong position ತೆಗೆದುಕೊಂಡರೆಂಬುದನ್ನು ನೋಡಿ. "If you want them to go, I will go with them" ಎಂದು ಅವರು ಹೇಳಿದರು.

Sri H. C. DASAPPA.—You appreciate Sardar's stand?

Sri H. B. GUNDAPPA GOWDA.—Sure, I want to copy him and not yield. "Well Sardarji, you do not want to give up your men; do you expect us to give up our men?" Tell them plainly.

Sri H. C. DASAPPA.—You must appreciate Sardar not only in that but in other ways.

Sri H. B. GUNDAPPA GOWDA.—I appreciate and admire the man. I want that you must copy at least one per cent of him

Sri M. N. JOIS (Mysore District-General)—After screening, 80 officers of the Mysore Military have been sent home. Still the Home Minister is with us.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಈಗ ನಮ್ಮ ಮಿಲಿಟರಿ ಆಫೀಸರುಗಳ ಗತಿಯೇನಾಯಿತು? ನೋಡಿ. ಪಾಪ, ಅವರುಗಳು ಪ್ರಾಣಕೊಡುವುದಕ್ಕೂ ಸಹ ಸಿದ್ಧರಾಗಿ ನಿಮ್ಮ ಸೈನ್ಯಕ್ಕೆ ಸೇರಿದ್ದರು. ಅಂಥವರಲ್ಲಿ ಸುಮಾರು 80ಜನ ಆಫೀಸರುಗಳು, 2,000 ಜನ ಸಿಪಾಯಿಗಳು ಕೆಲಸದಿಂದ ತೆಗೆದುಹಾಕಲ್ಪಟ್ಟು ಈಗ ಅಲ್ಲಿ ಇಲ್ಲಿ ಅಲೆದಾಡುವ ಸ್ಥಿತಿ ಬರುತ್ತೆ. ನಾಳೆ ದಿವಸ ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸಿನವರೊಬ್ಬರನ್ನು ತಂದು ಇಲ್ಲಿ ಸೆಕ್ರೆಟೇರಿಯಟ್ಟಿನಲ್ಲಿ ಹಾಕಿದರೆ ನೀವೇನು ಮಾಡುತ್ತೀರಿ? ನಿಮಗೆ ಇದನ್ನೆಲ್ಲಾ ಹೇಳುವುದಕ್ಕೆ ಧೈರ್ಯವಿಲ್ಲ.

Sri H. C. DASAPPA.—Sri Gundappa Gowda to teach us courage!!

Sri H. B. GUNDAPPA GOWDA.—Gundappa Gowda is Gundappa Gowda, none else. ಅದಿರಲಿ, ನಿಮಗೆ ಧೈರ್ಯ ಇದೆ ಎಂದು ತೋರಿಸಿಕೊಳ್ಳಿರಿ. ಆಗ ನಾನು ವಂದನೆಗಳನ್ನು ಕೊಡುತ್ತೇನೆ. ಪಟೇಲರೇ ನಿಮಗೆ ದಾರಿ ಹಾಕಿಕೊಟ್ಟಿದ್ದಾರೆ.

Sri M. N. JOIS.—They faced lathi charges and not Patels.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಬ್ರಿಟಿಷರೂ ಸಹ ತಾವು ಈ ದೇಶವನ್ನೇ ಬಿಟ್ಟುಹೋಗುವ ಸಂದರ್ಭದಲ್ಲಿಯೂ ಕೂಡ ತಮ್ಮನ್ನು ನಂಬಿಕೊಂಡಿದ್ದ ಅಧಿಕಾರಿಗಳ ವಿಷಯದಲ್ಲಿ ಯಾವ ರೀತಿ ಕೆಲವು ಷರತ್ತುಗಳನ್ನು ಹಾಕಿ ಹೊರಟುಹೋದರೆಂಬುದನ್ನು ನೋಡಿ. ತಮ್ಮನ್ನು ನಂಬಿದವರನ್ನು ಕೈಬಿಡಬಾರದೆಂಬ ಕೃತಜ್ಞತಾ ಭಾವನೆ ಅವರಲ್ಲಿ ಎಷ್ಟರ ಮಟ್ಟಿಗಿದೆ ನೋಡಿ.

ಅದರಲ್ಲೂ ಪ್ರತಿಯೊಂದನ್ನೂ ಕೂಲಂಕಷವಾಗಿ ಪರಿಶೀಲನೆಮಾಡಿ ಇಷ್ಟಿಷ್ಟು ವರ್ಷ ಸರ್ವಿಸ್ ಮಾಡಿರುವವರಿಗೆ ಇಂಥಿಂಥಾ ರೀತಿಯಲ್ಲಿ ಹೆಚ್ಚಿಸಿ ನಂಬಳ ಮುಂತಾದುವುಗಳನ್ನು ಹಾಕಿಕೊಟ್ಟು ಹೋಗಿದ್ದರೆಂಬುದ ನಿಜವಾಗಿಯೂ ನಾವು ಕಲಿತುಕೊಳ್ಳಬೇಕಾದ್ದು. ನಿಮ್ಮಲ್ಲಿಬಿಟ್ಟು ಹೋಗುವುದಕ್ಕೆ ಯಾರು ಇಷ್ಟಪಡುತ್ತಿರೋ ಅಂಥವರು ಹೋಗಬಹುದೆಂದು ಹೇಳಿ ಅವರವರ ಸ್ವಂತ ಇರಾದೆಗೆ ಬಿಟ್ಟು ಬಿಟ್ಟಿದ್ದರು. ಹಿಂದೆ ಅವರು ಅಂಥಾ ಅವಕಾಶ ಕಲ್ಪಿಸಿ ಕೊಟ್ಟಿದ್ದರು ಅವರು ಎಷ್ಟು ಜಾಣ್ಮೆಯಿಂದ ಕೆಲಸ ಮಾಡಿದ್ದಾರೆ! ಈಗ ಇಂಡಿಯಾ ಸರ್ಕಾರದವರು ಹೇಳಿದಂತೆ ಮಾಡಲು ನೀವು ಒಪ್ಪಿಕೊಂಡರೆ what have you to do when your own officers are concerned? ಇಂಥಾದ್ದು ಅವರೇನಾದರೂ ಏನಾಯಿತಿ ಕೊಟ್ಟಿದ್ದಾರೆಯೇನು? ಹಾಗಿದ್ದರೆ ಅಂಥ ಏನಾಯಿತಿಗಳೇನೆಂಬುದನ್ನಾದರೂ ನೂಚಿಸಿ ನೋಡೋಣ. ಇಂಥಾದ್ದರಲ್ಲಿ ನೀವು ಮುಲಾಜಿಟ್ಟು ಕೆಲಸಮಾಡಲು ಹೋದರೆ ಸಾಧ್ಯವಿಲ್ಲ. ನೀವು ಅವರೊಡನೆ ಒಪ್ಪಂದ ಮಾಡಿಕೊಳ್ಳತಕ್ಕ ಕಾಲದಲ್ಲಿ ನಮಗೆ ಇಂತಿಂಥ ಏನಾಯಿತಿಗಳು ಬೇಕು ಎಂಬುದಾಗಿ ಒತ್ತಿಹೇಳಿ ಮಾಡಿಸಿಕೊಳ್ಳಬೇಕಾಗಿತ್ತು. ಆದರೆ ಆಗ ನೀವು ಅಲ್ಲಿ ನಿಮ್ಮ ಕರ್ತವ್ಯವನ್ನು ಸರಿಯಾಗಿ ಮಾಡಲಿಲ್ಲ. ಇವುಗಳನ್ನು ನೀವು ಮಾಡಬೇಕಾಗಿತ್ತು. There I charge the Government.

ಶ್ರೀ ಎಚ್. ಸಿ. ದಾಸಪ್ಪನವರು.—ಅದು ನಮಗೆ ಹೇಗೆ ಗೊತ್ತು? How do you know that it has not been done?

ಶ್ರಿ ಎಚ್.ಬಿ. ಗುಂಡಪ್ಪಗೌಡರು.—ನೀವೇನು ಮಾಡಿದ್ದೀರೆಂಬುದನ್ನು ಹೇಳಿದ್ದಿರೆ ಅದು ನಮಗೆ ಹೇಗೆ ಗೊತ್ತಾಗಬೇಕು? ನಾನು ಹೇಳುತ್ತೇನೆ ಕೇಳಿ. ಸರ್ಕಾರ.....

Sri H. C. DASAPPA.—I am one with the Hon'ble Member Sri Bheemappa Naik and others in the desire to see that the interests of the Mysore Civil Service are safeguarded and that no injury is done to them. I do not deny it. The Hon'ble the Chief Minister has made it amply clear that all these matters are still open for discussion, negotiation and settlement. The only thing—and no more than that—is that we of all people in India should not stand out as though we are peculiar people and isolate ourselves from the rest of India. Subject to that one sovereign principle, *viz.*, that it is not right on our part to stand out from the rest of India in regard to all-India services, the rest of the things with regard to all the safeguards which you are suggesting—are all matters for further negotiation.

Sri A. BHEEMAPPA NAIK.—Supposing you do not agree on these details. Then are you going to withdraw and say 'We have accepted the principles. We do not agree on the details. Now we go back.'

Sri H. C. DASAPPA.—How does it profit us to discuss these hypothetical questions? It depends on what the matters are; whether they are really essential to the scheme of things. Supposing any one of the numerous suggestions made here is not granted by them. Well you must break out? It is foolish. So it is a question whether in essentials we are going to safeguard the interests of our Civil Service. On that, let me assure my Hon'ble friends that there can be no dispute between the Government and the members opposite and the members who are criticising.

Sri H. SIDDAVEERAPPA (Chitaldrug District—General).—Who is to say whether those safeguards are good or not?

Sri H. M. CHANNABASAPPA (Mysore District—General).—What protection have you given to the military officers you have sent out?

Mr. DEPUTY SPEAKER.—That does not arise.

Sri M. L. NANJARAJA URS (Mysore District—General).—In the name of security and efficiency there is a tendency in the Centre for over-centralisation.

Sri H. C. DASAPPA.—I do not know whether this should be converted into a question hour.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಇಲ್ಲಿ ನನಗೆ ಈಗ ಒಂದು ದೊಡ್ಡ ಆಶ್ಚರ್ಯವಾದ ಸಂಗತಿ ತಿಳಿದು ಬರುತ್ತಿದೆ. ಮಾತುಕತೆಗಳು ಎಲ್ಲಾ ಮುಗಿದು ಒಪ್ಪಂದವಾಗಿದ್ದರೂ ತಾವು ಇನ್ನೂ ಹಳೆಯದನ್ನೇ ಹೇಳುತ್ತಿದ್ದೀರಿ. ಉದಾಹರಣೆಗೆ ಈಗ ಒಂದು ಮನೆಯನ್ನು ಕೊಂಡುಕೊಳ್ಳಲು ಮಾತುಕತೆಗಳಾಗಿ ಇಷ್ಟು ಬೆಲೆಯೆಂದು ನಿರ್ಧಾರವಾದಮೇಲೆ ಮತ್ತೂ ಅದಕ್ಕೆ ನಾವು ಒಪ್ಪಿಕೊಂಡನಂತರ ಮನೆಯನ್ನು ಖಾಲಿಮಾಡಿಕೊಡುವುದು ಯಾವಾಗ, ಅದಕ್ಕೆ ಪ್ರವೇಶಮಾಡುವುದು ಯಾವಾಗ ಇತ್ಯಾದಿ ವಿಷಯಗಳು ಉಳಿದಿರುತ್ತವೆಯೇ ಹೊರತು ಮತ್ತೆ ಒಪ್ಪಂದದ ಬಗ್ಗೆ ಚರ್ಚೆಮಾಡಲು ಅವಕಾಶವಿನ್ನೆಲ್ಲಿರುತ್ತೆ?

Sri H. C. DASAPPA.—A number of points.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಮನೆ ಖರೀದಿಯಾದಮೇಲೆ ಇನ್ನೇನು ಉಳಿದಿದೆ?

Sri H. C. DASAPPA.—I wanted to say when Sri Gundappa Gowda was going in some strain, that he was referring to various matters of detail

which are matters to be considered when the general principle is accepted. All those things certainly I say are matters still open for negotiation.

ಶ್ರೀ ಎಚ್. ಬಿ. ಗುಂಡಪ್ಪಗೌಡರು.— ಈ ಹಿಂದೆಯೇ ನೀವು ಇದನ್ನೆಲ್ಲಾ ಮಾಡಬೆಕಾಗಿತ್ತು. ಆದರೆ ಹಿಂದೆ ಈ ಸಂಬಂಧವಾಗಿ ಅವರೂ, ನೀವೂ, ಮತ್ತು ಇತರ ಸಂಸ್ಥಾನಗಳವರೂ ಕಲೆತು ಮಾತನಾಡತಕ್ಕ ಕಾಲದಲ್ಲಿ ನೀವು "ಏನಪ್ಪಾ ಎಂತೆಂಥಹವರೋ ನುಮ್ಮನೆ ಕುಳಿತಿರುವಾಗ, ಅದರಲ್ಲೂ ದೊಡ್ಡ ದೊಡ್ಡವರು ನುಮ್ಮನೆರುವಾಗ ನಾವೇಕೆ ಮಾತನಾಡಬೇಕೆಂದು" ನುಮ್ಮನೆ ಕುಳಿತು, ಈಗ ಇಲ್ಲಿ ಸಿಕ್ಕಹಾಕಿಕೊಂಡಿದ್ದೀರಿ. ಆದರೆ ಈಗ ಪರಿಶೀಲನೆ ಮಾಡಲು ಇನ್ನು ಉಳಿದಿರತಕ್ಕದ್ದೇನೆಂದರೆ ಇರತಕ್ಕ 29 ದೊಡ್ಡ ಸ್ಥಾನಗಳ ಪೈಕಿ ಅವರು ನಿಮಗೆ 14ನ್ನು ಬಿಟ್ಟುಕೊಡುತ್ತೇವೆಂದೂ, ಉದೂ ಸಾಲದು ನಮಗೆ 16ಕೊಡಿ ಎಂದು ನೀವು ಅವರನ್ನು ಒತ್ತಾಯಪಡಿಸುತ್ತಿರುವುದೂ—ಹೀಗೆ ಹಿಗ್ಗಲ್—ಹೆಗ್ಗಲ್ ಮಾಡತಕ್ಕ ಒಂದು ಕೆಲಸ ವಿನಾ ಮತ್ತೇನೂ ಉಳಿದಿಲ್ಲ. It is not to parry the attack. It is in the interests of the problem. You have taken sufficient time to agree to this principle.

Sri H. SIDDAVEERAPPA.—Even now it is not too late.

Sri H. B. GUNDAPPA GOWDA.— During that period these considerations should have been taken serious notice of. That is all the point I am making out. Do not commit the same thing when another occasion arises. It is a good thing that a discussion of this sort comes up. ಸದ್ಯಕ್ಕೆ ಇದನ್ನೆಲ್ಲಾ ನಿಲ್ಲಿಸಿ ಬಿಡುವುದೇ ಲೇಸೆಂದು ನನಗೆ ತೋಚುತ್ತಿದೆ.

Sri M. GOVINDA REDDY.—I think they have committed themselves as far as that.

Sri H. B. GUNDAPPA GOWDA.— Though I do not have any access to the inner working of the Cabinet, I consider that it is an unfortunate thing that they committed themselves to a principle; they cannot break out now. That is my feeling. If they manage to come out, I will be the first man to congratulate them.

Sri M. N. JOIS.—The only thing that is now open is to trust in their bargaining powers.

(Interruption from Sri G. A. Acharya).

Sri H. B. GUNDAPPA GOWDA.— Sri Acharya strikes different notes now and then as occasions arise. I have no confidence in him. ನಾನಾಗಲೇ ಹೇಳಿದ ಹಾಗೆ ಬ್ರಿಟಿಷರು ಇಂಡಿಯಾ ಬಿಟ್ಟು ಹೋಗುವಾಗ ಅವರು ನಿಮಗೆ ಹಾಕಿಹೋಗಿರತಕ್ಕ ಷರತ್ತುಗಳು ಎಷ್ಟು ಖಚಿತವಾಗಿ ಎಲ್ಲರಿಗೂ ತಿಳಿಯುವಂತಿವೆ. ಅವರು ಈ ಅಧಿಕಾರಿಗಳ ವಿಷಯದಲ್ಲಿ ಎಲ್ಲವನ್ನೂ ಅವರ ಇಷ್ಟಕ್ಕೇ ಬಿಟ್ಟುಕೊಟ್ಟಿದ್ದರು. ಆದರೆ ಈಗ ನೀವು ಅವರಿಗೆ ನಿಮ್ಮ ನೀತಿಯಲ್ಲಿ ವಿಶೇಷ ಕಟ್ಟುನಿಟ್ಟುಗಳನ್ನು ಹಾಕಿದ್ದೀರಿ. ಇದರ ಜೊತೆಗೆ ಇನ್ನೂ ಎಷ್ಟೋ ಸಣ್ಣ ಪುಟ್ಟ ಸಂಸ್ಥಾನಗಳೂ ಸೇರಿರುತ್ತವೆ. ಆದರೆ ಅವರದೇ ಒಂದು different footing ಇರಬೇಕು. Mysore must be treated on a different footing altogether. You must make it clear and as early as possible. It will stop further encroachment on the position of Mysore. ದಯವಿಟ್ಟು ನೀವು ಎಷ್ಟು ಜಾಗ್ರತೆ ಸಾಧ್ಯವಾದರೆ ಅಷ್ಟು ಜಾಗ್ರತೆ ಈ ವಿಚಾರದಲ್ಲಿ ಒಂದು ನಿರ್ಧಾರಕ್ಕೆ ಬಂದರೆ ಅಷ್ಟೂ ನಮಗೆ ಕ್ಷೇಮವೆಂದು ನಾನು ಹೇಳುತ್ತೇನೆ. ಆದರೆ ಈಗಾಗಲೇ ನೀವು ಈ ಸರ್ವಿಸ್ ವಿಚಾರದಲ್ಲಿ ಪಿತಕ್ಕಾಗಿ ಇಷ್ಟು ಬೇಗ ಒಪ್ಪಿಕೊಂಡು ಬಂದರೋ ನನಗೆ ಅರ್ಥವಾಗುತ್ತಿಲ್ಲ. ಈ ಸಂಬಂಧವಾಗಿ ನೀವು ಪ್ರತಿಯೊಂದನ್ನೂ ಅಧಿಕಾರಿಗಳ ಪೂರ್ಣ ಸ್ವಾತಂತ್ರ್ಯಕ್ಕೆ ಬಿಟ್ಟು ಅವರ ಇಷ್ಟಪ್ರಕಾರ ಮಾಡಬೇಕಾಗಿತ್ತು.

Sri M. N. JOIS.— All these are in the interests of All-India.

Sri H. B. GUNDAPPA GOWDA.— I am not against All-India interests. I would be the first man to fight for the All-India interests. How long are you to concede on that flimsy ground? ನನ್ನ ಮನೆಯಲ್ಲೇ ನನಗೆ ಊಟಕ್ಕೆ ಇಲ್ಲದಿರುವಾಗ ದೇಶಾಭಿಮಾನಕ್ಕೆ ಹೇಗೆ ಗಮನಕೊಡಲು ಸಾಧ್ಯವಾಗುತ್ತದೆ? But not on this essential, though it may appear to be minor from somebody's point of view. These are very essential matters affecting our daily administration.

Sri H. C. DASAPPA—May I take it that it is the considered view of my Hon'ble friend that we should have nothing like the benefit of the All-India Services?

Sri H. B. GUNDAPPA GOWDA.— For some time we are not going to benefit by All-India Services. If I am given the choice, I am going to say, 'no', because I know the advantages otherwise.

Sri M. N. JOIS.—Supposing the Constitution provides for it?

Sri H. B. GUNDAPPA GOWDA.— I do not stand in the way of the Constitution. But I would renew my efforts to modify the constitution.

Mr. DEPUTY SPEAKER.—Would the Hon'ble Member like to continue the speech?

Sri H. B. GUNDAPPA GOWDA.—I would like to continue on Monday, not now.

Sri H. SIDDAVEERAPPA.—Before the day's proceedings are closed I would like to make a suggestion. In view of the importance of this subject and in view of the fact that only two Hon'ble Members have had the opportunity to discuss about this so far, that too not in full, though of course they were eloquent and vehement, my submission is that this resolution may be taken up on Monday also. I suppose the two Bills that we have on the Agenda on Monday, probably, may be referred to Select Committees. In view of that I believe there would be plenty of time on Monday and we may have full-dress debate on this very vital and important subject. I would suggest that this may be taken up on Monday afternoon if the Hon'ble Leader of the House is not prepared to extend the session on Tuesday.

Mr. DEPUTY SPEAKER.—I think on Monday there is 'Gokulastami'. After Government business, discussion on this resolution can be resumed.

The House stands now adjourned to meet on Monday at 8 A.M.

The Assembly adjourned at Five Minutes past Six of the Clock to meet again at 8 a.m. on Monday, 4th September, 1950.

WD 2204—GPB—550—25-10-50.